ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಜುಲೈ 31 ಭಾನುವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 106 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ವೀರಶೈವ ಲಿಂಗಾಯತ ಸಮುದಾಯ ಓಬಿಸಿ ಪಟ್ಟಿಗೆ ಸೇರಿಸಲು ಆಗ್ರಹಿಸಿ
ನಾಳೆ ಭಾರೀ ಪ್ರತಿಭಟನೆ




ಮೈಸೂರು,ಜು.29(ಎಂಟಿವೈ)–ವೀರಶೈವ–ಲಿಂಗಾಯತ ಸಮುದಾಯದವನ್ನು ಓಬಿಸಿ ಪಟ್ಟಿಗೆ ಸೇರಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆ.1ರಂದು ಬೆಳಗ್ಗೆ 10ಕ್ಕೆ ಮೈಸೂರಿನ ಬಸವೇಶ್ವರ ವೃತ್ತದ ಪ್ರತಿಮೆ ಬಳಿಯಿಂದ ಡಿಸಿ ಕಚೇರಿವರೆಗೆ ಭಾರೀ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಸಮಿತಿ ಕೋಶಾಧ್ಯಕ್ಷ ವರುಣಾ ಮಹೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 60 ವರ್ಷಗಳಿಂದಲೂ ವೀರಶೈವ– ಲಿಂಗಾಯತ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಬೇಕೆಂಬ ಹೋರಾಟ ನಡೆಯುತ್ತಿದೆ. ಆದರೆ ಇದುವರೆಗೂ ಯಾವುದೇ ಸರ್ಕಾರಗಳೂ ಓಬಿಸಿ ಪಟ್ಟಿಗೆ ಸೇರ್ಪಡೆ ಮಾಡದಿರುವುದರಿಂದಾಗಿ ಕೇಂದ್ರ ಸರ್ಕಾರದಿಂದ ದೊರೆಯಬಹುದಾದ ಸೌಲಭ್ಯಗಳಿಂದ ಸಮುದಾಯ ವಂಚಿತವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ಸಮುದಾಯದಲ್ಲಿ ಬಹುತೇಕರು ಕೃಷಿ ಮತ್ತು ಕೃಷಿ ಆಧಾರಿತ ಕಸುಬುಗಳನ್ನು ಅವಲಂಬಿಸಿದ್ದಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿಯೂ ಹಿಂದುಳಿದಿದ್ದಾರೆ. ಆದರೂ ಕೇಂದ್ರ ಸರ್ಕಾರ ಓಬಿಸಿ ಪಟ್ಟಿಗೆ ಸೇರ್ಪಡೆ ಮಾಡದಿರುವುದರಿಂದಾಗಿ ಈ ಸಮುದಾಯದ ಜನತೆ ದಶಕಗಳಿಂದ ಕೇಂದ್ರ ಸರ್ಕಾರದ ಶೈಕ್ಷಣಿಕ ಮತ್ತು ಕೇಂದ್ರದ ನೇಮಕಾತಿ ಅವಕಾಶಗಳಿಂದ ವಂಚಿತರಾಗಿದ್ದಾರೆ. ಇದರಿಂದ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ. ಹೀಗಾಗಿ ಸೇರ್ಪಡೆಗೆ ಆಗ್ರಹಿಸಿ ಅಂದು ಪ್ರತಿಭಟನಾ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ತಲುಪಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕಾನ್ಯ ಶಿವಮೂರ್ತಿ, ಎಂ.ಎಚ್.ಚಂದ್ರಶೇಖರ್, ಸೋಮಶೇಖರ್, ಬಿ.ಕೆ.ನಾಗರಾಜು, ಹೆಚ್.ಕೆ.ಚನ್ನಪ್ಪ, ಹಿನಕಲ್ ಬಸವರಾಜು, ಗುರುಸ್ವಾಮಿ ಇದ್ದರು.



ಮೈಸೂರಿನ ವಾರ್ಡ್ ನಂ 4.ರ ಬಸವನಗುಡಿ ದೇವಸ್ಥಾನದ ಆವರಣದಲ್ಲಿ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಹಾಗೂ ವಾರ್ಡ್‌ನ ನಾಗರಿಕರು ಕೇಕ್ ಕತ್ತರಿಸಿ, ಸಿಹಿ ತಿನಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಸಿದ್ದಲಿಂಗಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಕಾಮನಕೆರೆಹುಂಡಿ ನಾರಾಯಣಪ್ಪ, ಉಪಾಧ್ಯಕ್ಷರಾಗಿ ಹಳೇಕೆಸರೆ ಮರಿಸ್ವಾಮಿ ಅವರನ್ನು ಹಿರಿಯ ಮುಖಂಡರಾದ ವಿಜೇಂದ್ರ, ಆಡಳಿತ ಮಂಡಳಿ ನಿರ್ದೇಶಕರಾದ ಪಿ.ಹೆಚ್.ರಾಮೇಗೌಡ, ಗೋಪಾಲ್, ಪುರಂದರ, ಕೆ.ಜೆ.ಮಾದೇಶ್, ಸೋಮಣ್ಣ, ಕೃಷ್ಣ, ಮಾದೇಗೌಡ, ಸುನೀತಾ, ಗಾಯತ್ರಿ, ಮುಖ್ಯ ಕಾರ್ಯನಿರ್ವಾಹಕ ಲೋಕೇಶ್, ಚುನಾವಣಾ ಅಧಿಕಾರಿ ಪಾಷಾ ಅಭಿನಂದಿಸಿದರು.

ಮುಂದಿನ 5 ದಿನ ಕೊಡಗಲ್ಲಿ ಭಾರೀ ಮಳೆ ಸಾಧ್ಯತೆ

ಮೈಸೂರು, ಚಾ.ನಗರ, ಮಂಡ್ಯದಲ್ಲಿ ಸಾಧಾರಣ



ಮೈಸೂರು, ಜು.30(ಆರ್‌ಕೆಬಿ)– ಹವಾಮಾನ ಮುನ್ಸೂಚನೆ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಮುಂದಿನ ಐದು ದಿನ ಸಾಧಾರಣದಿಂದ ಭಾರೀ ಮಳೆಯಾಗಲಿದೆ. ಕೊಡಗಿನಲ್ಲಿ ಜು.30 ಮತ್ತು 31ರಂದು ತಲಾ 15 ಎಂಎಂ, ಆ.1ರಂದು 12 ಎಂಎಂ., ಆ.2ರಂದು 44 ಎಂಎಂ., 3ರಂದು 32 ಎಂಎಂ ಮಳೆಯಾಗುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಗರಿಷ್ಠ ಉಷ್ಣಾಂಶ 21, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ಇರಲಿದೆ. ಮೈಸೂರು ಜಿಲ್ಲೆಯಲ್ಲಿ ಕ್ರಮವಾಗಿ 11, 12, 11, 12, 12 ಎಂಎಂ., ಮಂಡ್ಯ ಜಿಲ್ಲೆಯಲ್ಲಿ 12, 16, 11, 11, 12 ಎಂಎಂ., ಚಾಮರಾಜನಗರ ಜಿಲ್ಲೆಯಲ್ಲಿ 12, 9, 11, 11, 12 ಎಂಎಂ ಮಳೆಯಾಗಲಿದೆ. ಮೂರು ಜಿಲ್ಲೆಗಳಲ್ಲಿ ಗರಿಷ್ಠ 30, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ. ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಆ.5ರಿಂದ 11ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಆ.2, ಗಾಯತ್ರಿ ವಿಪ್ರ ಸಂಘದಿಂದ ಉಪಾಕರ್ಮ

ಮೈಸೂರು,ಜು.30–ಗಾಯತ್ರಿ ವಿಪ್ರ ಸಂಘದ ವತಿಯಿಂದ ಮಂಜುನಾಥ ಭಟ್ ನೇತೃತ್ವದಲ್ಲಿ ಆ.2ರಂದು ಋಗ್‌ಉಪಾಕರ್ಮ, ಆ.11ರಂದು ಯಜುರ್ ಉಪಾಕರ್ಮಗಳನ್ನು ಬೆಳಗ್ಗೆ 6.30ಕ್ಕೆ ಕೆಹೆಚ್‌ಬಿ ಹೂಟಗಳ್ಳಿಯಲ್ಲಿರುವ ಅನಂತೇಶ್ವರ ಭವನದಲ್ಲಿ ಏರ್ಪಡಿಸಿದೆ. ಆಸಕ್ತ ತ್ರಿಮತಸ್ಥ ಬ್ರಾಹ್ಮಣರು 1 ದಿನ ಮುಂಚಿತವಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕೆಂದು ಕೋರಲಾಗಿದೆ. 2022ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಆಸಕ್ತರು ಆ.15ರೊಳಗೆ ಅಂಕಪಟ್ಟಿ ನಕಲಿನೊಂದಿಗೆ ಸಂಘದ ಕಚೇರಿಗೆ ಅರ್ಜಿ ಸಲ್ಲಿಸುವುದು. ಮಾಹಿತಿಗೆ ಮೊ. 9844402852 ಸಂಪರ್ಕಿಸಬಹುದು.

ಸುಳ್ಯದಲ್ಲಿ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ
ಮೈಸೂರಲ್ಲಿ ಭಾರೀ ಪ್ರತಿಭಟನಾ ಮೆರವಣಿಗೆ

ಮೈಸೂರು, ಜು.30(ಪಿಎಂ)–ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಹಿಂದೂ ಹಿತರಕ್ಷಣಾ ವೇದಿಕೆ, ಹಿಂದೂ ಜನಜಾಗೃತಿ ಸಮಿತಿ ನೇತೃತ್ವದಲ್ಲಿ ವಿವಿಧ ಹಿಂದೂಪರ ಸಂಘಟನೆಗಳ ವತಿಯಿಂದ ಶನಿವಾರ ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ರಾಷ್ಟ್ರಪ್ರೇಮಿಗಳ ಹತ್ಯೆ ಮಾಡುವ ಮೂಲಕ ರಾಷ್ಟ್ರದ ಐಕ್ಯತೆಗೆ ಧಕ್ಕೆ ತರುತ್ತಿರುವ ಸಂಘಟನೆಗಳನ್ನು ಮಟ್ಟ ಹಾಕಬೇಕೆಂದು ಒತ್ತಾಯಿಸಲಾಯಿತು. ಮೈಸೂರಿನ ಗನ್‌ಹೌಸ್ ವೃತ್ತದ ಬಳಿಯ ಬಸವೇಶ್ವರ ಪ್ರತಿಮೆ ಸಮೀಪ ನಡೆದ ಪ್ರತಿಭಟನಾ ಸಭೆಯಲ್ಲಿ ಹತ್ಯೆಯನ್ನು ಖಂಡಿಸಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರವೀಣ್ ಹತ್ಯೆ ಮಾಡಿರುವ ಶಕ್ತಿಗಳು ವಿಜೃಂಭಿಸುತ್ತಾ ಸಮಾಜದ ಸ್ವಾಸ್ಥ್ಯ ಹಾಳುಗೆಡವಿ ಅಟ್ಟಹಾಸ ಮೆರೆಯುತ್ತಿವೆ. ಹಲವಾರು ದೇಶಪ್ರೇಮಿ ಯುವಕರನ್ನು ಗುರಿಯಾಗಿಸಿಕೊಂಡು ಈ ಹತ್ಯೆಗಳು ನಡೆಯುತ್ತಿವೆ. ಆ ಮೂಲಕ ರಾಷ್ಟ್ರ ಕಾರ್ಯದಲ್ಲಿ ನಿರತರಾಗುವ ಹಂಬಲವಿರುವ ಮನಸ್ಸುಗಳಿಗೆ ಆಘಾತ ಉಂಟು ಮಾಡುತ್ತಿವೆ ಎಂದು ಆರೋಪಿಸಿದರು.

ರಾಷ್ಟ್ರವಿರೋಧಿ ಹೇಳಿಕೆ ನೀಡುವವರನ್ನು ಕೂಡಲೇ ಬಗ್ಗು ಬಡಿಯಬೇಕು. ಇಂತಹ ಎಲ್ಲಾ ಸಂಘಟನೆಗಳ ನಾಯಕರು ಮತ್ತು ಸದಸ್ಯರನ್ನು ಕೂಡಲೇ ಬಂಧಿಸಿ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಗಡಿ ಪ್ರದೇಶಗಳಲ್ಲಿ ಪೊಲೀಸ್ ಸರ್ಪಗಾವಲು ಹಾಕಿ, ಸಿಸಿ ಕ್ಯಾಮರಾ ಅಳವಡಿಸಬೇಕು. ರಾಜ್ಯದಲ್ಲಿನ ಗುಪ್ತಚರ ಇಲಾಖೆಯನ್ನು ಮತ್ತಷ್ಟು ಬಲಪಡಿಸಬೇಕು. ಇಂತಹ ಪ್ರಕರಣದಲ್ಲಿ ಭಾಗಿಯಾದವರಿಗೆ ಮತದಾನದ ಹಕ್ಕನ್ನು ರದ್ದುಪಡಿಸಬೇಕು. ಅವರ ಕುಟುಂಬದ ಸದಸ್ಯರಿಗೆ ಯಾವುದೇ ಸರ್ಕಾರಿ ಸವಲತ್ತುಗಳನ್ನು ನೀಡಬಾರದು. ಸಮಾಜಘಾತಕ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಪ್ರತಿಭಟನಾ ಸಭೆ ಉದ್ದೇಶಿಸಿ ಮಾತನಾಡಿದ ಹಿಂದೂ ಜಾಗರಣ ವೇದಿಕೆ ಪ್ರಾಂತ ಸಂಚಾಲಕ ಕೆ.ಟಿ.ಉಲ್ಲಾಸ್, ಹಿಂದೂಪರ ಹೋರಾಟಗಾರರ ಸರಣಿ ಹತ್ಯೆಯಲ್ಲಿ ಪ್ರವೀಣ್ ಕೊಲೆಯೂ ಸೇರಿದೆ. ಈ ಘಟನೆಗಳ ಹಿಂದೆ ಇರುವ ಶಕ್ತಿ ಮತ್ತು ಉದ್ದೇಶವನ್ನು ಸಮಾಜಕ್ಕೆ ಹೇಳದಿದ್ದರೆ ದೊಡ್ಡ ಅಪರಾಧವಾಗುತ್ತದೆ. ದೇಶ ವಿರೋಧಿ ಸಂಘಟನೆಗಳು ಮಾಡಿರುವ ಕೊಲೆ ಇದು. ಇವರು ಮಾಡಿರುವುದು ಇದೇ ಮೊದಲ ಕೊಲೆಯಲ್ಲ. ಅನೇಕ ಸರಣಿ ಕೊಲೆ ಮಾಡಿದ್ದಾರೆ. ಏಕೆ ಮಾಡುತ್ತಿದ್ದಾರೆ ಎಂಬುದು ನಮ್ಮ ಕಾರ್ಯಕರ್ತರು, ಪೊಲೀಸ್ ಇಲಾಖೆ, ಸರ್ಕಾರ, ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ಗೂ ಗೊತ್ತಾಗಬೇಕು ಎಂದರು.

ಮೊನ್ನೆ ಟಿವಿ ಮಾಧ್ಯಮಗಳಲ್ಲಿ ನೋಡಿದ್ದೇವೆ. ಪಾಟ್ನಾದಲ್ಲಿ ಸಂಘಟನೆಯೊಂದರ ಕಾರ್ಯಕರ್ತರನ್ನು ಬಂಧಿಸಿದಾಗ, ಅವರ ಬಳಿ 'ಇಂಡಿಯಾ ವಿಷನ್ 2047' ಎಂಬ ಕರಪತ್ರಗಳು ಸಿಕ್ಕಿದ್ದು, ಅದರಲ್ಲಿ 2047ರ ವೇಳೆಗೆ ಭಾರತ ಏನಾಗಿರಬೇಕು ಎಂಬುದನ್ನು ನಿರ್ಧಾರ ಮಾಡಿದಂತಿದೆ. 2047ರ ವೇಳೆಗೆ ಈ ರಾಷ್ಟ್ರದಲ್ಲಿ ಒಂದು ಧರ್ಮದ ಆಳ್ವಿಕೆ ತರಬೇಕೆಂಬ ಉದ್ದೇಶದಿಂದ ಈ ರೀತಿ ಕೊಲೆ ನಡೆಸುತ್ತಿದ್ದಾರೆ ಎಂದು ದೂರಿದರು.

ಸಿಮಿ ಉಗ್ರಗಾಮಿ ಸಂಘಟನೆಯನ್ನು ಯುಪಿಎ ಸರ್ಕಾರವೇ ನಿಷೇಧ ಮಾಡಿತ್ತು. ಆ ಸಂಘಟನೆ ಸದಸ್ಯರು ಸೇರಿ ಮತ್ತೊಂದು ಸಂಘಟನೆ ಹುಟ್ಟು ಹಾಕಿದ್ದಾರೆ. 2007ರಿಂದ ರಾಜ್ಯದಲ್ಲಿ ಈ ಸಂಘಟನೆಯಿಂದ ದುಷ್ಕೃತ್ಯ ಆರಂಭವಾಯಿತು. ಮೈಸೂರಿನಲ್ಲಿ ಕ್ಯಾತಮಾರನಹಳ್ಳಿ ರಾಜು ಹತ್ಯೆ ಮಾಡಿದವರು ಇಂತಹ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದರು. ಅವರು ಜಾಮೀನಿನ ಮೇಲೆ ಜೈಲಿನಿಂದ ಹೊರಬರುವಾಗ ಮೆರವಣಿಗೆಯಲ್ಲಿ ಕರೆದುಕೊಂಡು ಬರಲಾಯಿತು ಎಂದು ಕಿಡಿಕಾರಿದರು.

ಇಂತಹ ಸಮಾಜ ವಿರೋಧಿ ಶಕ್ತಿಗಳಿಗೆ ತಡೆಯಾಗಿರುವುದೇ ನಮ್ಮ ಕೇಸರಿ ಶಾಲು, ಹಿಂದೂಪರ ಕಾರ್ಯಕರ್ತರು. ಹಾಗಾಗಿ ಅವರ ಹತ್ಯೆ ಮಾಡಿದರೆ ಹಿಂದೂ ಯುವಕರು ಕಂಗಾಲಾಗುತ್ತಾರೆ. ಆ ಮೂಲಕ ನಮ್ಮ ಗುರಿ ಮುಟ್ಟಬಹುದು ಎಂಬ ಸಂಚು ನಡೆಸಲಾಗುತ್ತಿದೆ. ಪ್ರತಿ ಹತ್ಯೆಯಾದಾಗ, ಬಿಜೆಪಿ–ಕಾಂಗ್ರೆಸ್ ನಡುವೆ ಆರೋಪ ಮತ್ತು ಪ್ರತ್ಯಾರೋಪ ನಡೆಯುತ್ತದೆ. ಆದರೆ ಇದು ರಾಜಕೀಯ ವಿಷಯವಲ್ಲ. ಇದು ಈ ದೇಶದ ಆಂತರಿಕ ಸುರಕ್ಷತೆಗೆ ಸಂಬಂಧಿಸಿದ್ದಾಗಿದೆ. ಹತ್ಯೆ ಒಂದು ಭಾಗವಾದರೆ, ಗಲಭೆ ಎಬ್ಬಿಸುವುದು ಇವರ ಮತ್ತೊಂದು ಕುತಂತ್ರ. ದೇಶದಲ್ಲಿ ಅರಾಜಕತೆ ಸೃಷ್ಟಿಸಿ, ಅಂತಿಮವಾಗಿ ರಾಷ್ಟ್ರದಲ್ಲಿ ಒಂದು ಧರ್ಮದ ಆಳ್ವಿಕೆ ತರುವ ತಂತ್ರ ಇವರದು. ಇದನ್ನು ಪೊಲೀಸ್ ಇಲಾಖೆ, ಸರ್ಕಾರ, ನಾಗರಿಕರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ಕೆಲ ಸಂಘಟನೆಗಳು ಈ ರಾಷ್ಟ್ರದಲ್ಲಿ ಒಂದು ಧರ್ಮದ ಆಳ್ವಿಕೆ ನಡೆಸಬೇಕೆಂಬ ಹುನ್ನಾರದಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಇವುಗಳಿಗೆ ಅಂತಾರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳ ಸಂಪರ್ಕ ಇದೆ ಎಂಬುದು ಕೇರಳದಲ್ಲಿ ಅನೇಕ ಬಾರಿ ಸಾಬೀತಾಗಿದೆ. ಇಂತಹ ಆಂತರಿಕ ಭಯೋತ್ಪಾದಕರ ಚಟುವಟಿಕೆ ತಡೆಯುವ ಕೆಲಸವನ್ನು ಪೊಲೀಸ್ ಇಲಾಖೆ, ಸರ್ಕಾರ ಮಾಡಬೇಕು. ಹಿಂದೂ ಕಾರ್ಯಕರ್ತರ ಭಾವನೆ, ಆಕ್ರೋಶ ಅರ್ಥ ಮಾಡಿಕೊಂಡು ಆಂತರಿಕ ಸುರಕ್ಷತೆಗೆ ಆದ್ಯತೆ ನೀಡಬೇಕು. ಸರ್ಕಾರ ಮತ್ತು ಪೊಲೀಸ್ ಇಲಾಖೆ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ಕ್ರಮ ಆರ್‌ಎಸ್‌ಎಸ್‌ನ ಉಪಕಾರಕ್ಕಾಗಿ ಅಲ್ಲ. ರಾಷ್ಟ್ರ ರಕ್ಷಣೆಗೆ ಇದು ಅನಿವಾರ್ಯ ಎಂದು ತಿಳಿಸಿದರು.

ಬಳಿಕ ಜಿಲ್ಲಾಧಿಕಾರಿ ಕಚೇರಿಯತ್ತ ಪ್ರತಿಭಟನಾ ಮೆರವಣಿಗೆ ಸಾಗಿತು. ಚಾಮರಾಜ ಜೋಡಿ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಮೂಲಕ ಮಹಾರಾಣಿ ಮಹಿಳಾ ವಿಜ್ಞಾನ ಮತ್ತು ಕಲಾ ಕಾಲೇಜುಗಳ ರಸ್ತೆಯಲ್ಲಿ ತೆರಳಿ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಪ್ರತಿಭಟನೆ ಅಂತ್ಯಗೊಳಿಸಿದರು.

ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹರ್ಷವರ್ಧನ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಪಾಲಿಕೆ ಸದಸ್ಯರಾದ ಎಂ.ಯು.ಸುಬ್ಬಯ್ಯ, ಶಿವಕುಮಾರ್, ಬಿ.ವಿ.ಮಂಜುನಾಥ್, ನಾಮನಿರ್ದೇಶಿತ ಸದಸ್ಯ ಜಗದೀಶ್, ಮುಖಂಡರಾದ ಅರುಣ್‌ಕುಮಾರ್‌ಗೌಡ, ಗಿರಿಧರ್, ಬಿ.ವಿ.ವಸಂತಕುಮಾರ್, ಜೋಗಿ ಮಂಜು, ಕಿರಣ್‌ಗೌಡ, ಹಿಂದೂ ಜನಜಾಗೃತಿ ಸಮಿತಿ ಅಧ್ಯಕ್ಷ ಲೋಹಿತ್ ಅರಸ್ ಸೇರಿದಂತೆ ಬಿಜೆಪಿ ಹಾಗೂ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿದ್ದರು.



ಮೈಸೂರಿನಲ್ಲಿ ವಿವಿಧ ಹಿಂದೂಪರ ಸಂಘಟನೆಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಮ್ಮ ದೇಶದಲ್ಲೇ ನಮ್ಮನ್ನು ಕಾಪಾಡಿ ಎಂದು ಕೇಳುವ ಪರಿಸ್ಥಿತಿ ಬಂತಲ್ಲಾ

ಶಾಸಕ ರಾಮದಾಸ್ ನೋವಿನ ನುಡಿ; ಡಿಸಿ ಮನವಿ ಸ್ವೀಕರಿಸದ್ದಕ್ಕೂ ರಾಮದಾಸ್ ಬೇಸರ

ಮೈಸೂರು: ಪ್ರತಿಭಟನೆ ಸಂಬಂಧ ಮನವಿ ಸ್ವೀಕರಿಸಲು ಜಿಲ್ಲಾಧಿಕಾರಿಗಳು ಅಥವಾ ಅಪರ ಜಿಲ್ಲಾಧಿಕಾರಿಗಳು ಬರಬೇಕು. ಇಲ್ಲವಾದರೆ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರು ಬರಲಿ ಎಂದು ಶಾಸಕ ಎಸ್.ಎ.ರಾಮದಾಸ್ ಪಟ್ಟು ಹಿಡಿದರು. ಮನವಿ ಸ್ವೀಕರಿಸಲು ಮೈಸೂರು ಉಪ ವಿಭಾಗಾಧಿಕಾರಿ ಕಮಲಬಾಯಿ ಸ್ಥಳಕ್ಕೆ ಆಗಮಿಸಿದ್ದರು. ಈ ವೇಳೆ ಮಾತನಾಡಿದ ಶಾಸಕ ರಾಮದಾಸ್, ಜಿಲ್ಲಾಧಿಕಾರಿಗಳು ಬರಬೇಕಿತ್ತು. ಅವರಿಲ್ಲವೆಂದರೆ ಅಪರ ಜಿಲ್ಲಾಧಿಕಾರಿಗಳು ಬರಬೇಕಿತ್ತು. ಇದರ ಜವಾಬ್ದಾರಿ ಅರಿವು ಅವರಿಗೆ ಇರಬೇಕಿತ್ತು. ಜಿಲ್ಲಾಧಿಕಾರಿಗಳು ಇಲ್ಲವಾದರೆ, ಅವರ ಆಪ್ತ ಸಹಾಯಕರನ್ನು ಕರೆಯಿರಿ, ಇನ್ನಾರೂ ಬೇಡ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕಮಲಬಾಯಿಯವರು, ಜಿಲ್ಲಾಧಿಕಾರಿಗಳು ರಜೆಯಲ್ಲಿದ್ದು, ಎಡಿಸಿ ಪ್ರವಾಸದಲ್ಲಿದ್ದಾರೆ. ಹೀಗಾಗಿ ನನಗೆ ಮನವಿ ಸ್ವೀಕರಿಸುವ ಜವಾಬ್ದಾರಿ ಕೊಟ್ಟಿದ್ದಾರೆ ಎಂದರು. ಆದರೂ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರನ್ನೇ ಕರೆಯಿಸಿ ಎಂದು ಪಟ್ಟು ಹಿಡಿದ ಕಾರಣ ಕೊನೆಗೆ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರೇ ಬಂದು ಮನವಿ ಸ್ವೀಕರಿಸಿದರು. ಇದಕ್ಕೂ ಮುನ್ನ ಮಾತನಾಡಿದ ರಾಮದಾಸ್, ನಮ್ಮದೇ ದೇಶ–ರಾಜ್ಯದಲ್ಲಿ ನಮ್ಮನ್ನು ಉಳಿಸಿ ಎಂದು ಕೇಳುವ ಪರಿಸ್ಥಿತಿ ಬಂದಿದೆ. ಇದಕ್ಕಿಂತಲೂ ಅವಮಾನ ಮತ್ತೊಂದಿಲ್ಲ. ಪ್ರತಿಯೊಬ್ಬರು ಜಾಗೃತರಾಗಿ ತಾಯಿ ಭಾರತಾಂಬೆ ಉಳಿಸಿಕೊಳ್ಳಬೇಕು. ಇದು ಭಾರತವಾಗಿಯೇ ಇರಬೇಕು ಹೊರತು, ಯಾವುದೋ ಪಾಕಿಸ್ತಾನ, ಅಫ್ಘಾನಿಸ್ತಾನ ಆಗಲು ಯಾವತ್ತೂ ಬಿಡಬಾರದು. ನಮ್ಮ ಜೀವಕ್ಕಿಂತ ತಾಯಿ ಭಾರತಾಂಬೆಯ ಪಾದ ಮುಖ್ಯ. ಅದಕ್ಕಾಗಿ ನಾವೆಲ್ಲಾ ರಾಜಕಾರಣ, ಅಧಿಕಾರ, ಅಂತಸ್ತು ಸೇರಿದಂತೆ ಎಲ್ಲವನ್ನು ಬದಿಗೊತ್ತಿ ಹೋರಾಟ ಮಾಡಬೇಕು ಎಂದು ಹೇಳಿದರು.

ಪೊಲೀಸರ ನಿರ್ದೇಶನದಂತೆ ದೇವರಾಜ ಅರಸು ರಸ್ತೆಯಿಂದ ಜೆಎಲ್‌ಬಿ ರಸ್ತೆ ಮೂಲಕ ಮೆಟ್ರೋಪೋಲ್ ವೃತ್ತದ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿ ತಲುಪಬೇಕಿದ್ದ ಪ್ರತಿಭಟನಾಕಾರರು, ಮಹಾರಾಣಿ ಕಲಾ ಮತ್ತು ವಿಜ್ಞಾನ ಕಾಲೇಜುಗಳಿಗೆ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಮುನ್ನುಗ್ಗಿದರು. ಬಳಿಕ ಅದೇ ಮಾರ್ಗದಲ್ಲಿ ಸಾಗಿ ಡಿಸಿ ಕಚೇರಿ ತಲುಪಿದರು. ಆ ಮೂಲಕ ಪೊಲೀಸರ ನಿರ್ದೇಶನ ಧಿಕ್ಕರಿಸಲಾಯಿತು.

ಕಾನೂನು-ಸುವ್ಯವಸ್ಥೆ ಕಾಪಾಡದ ಯಾವುದೇ ಸರ್ಕಾರ ಇದ್ದರೆಷ್ಟು, ಬಿಟ್ಟರೆಷ್ಟು ಶಾಸಕ ಹರ್ಷವರ್ಧನ್ ಬೇಸರ

ಮೈಸೂರು: ಸಾರ್ವಜನಿಕರ ಜೀವ ರಕ್ಷಣೆ ಮಾಡದ ಮತ್ತು ಕಾನೂನು–ಸುವ್ಯವಸ್ಥೆ ಕಾಪಾಡದ ಯಾವುದೇ ಸರ್ಕಾರವಾಗಲೀ, ಅದು ಇದ್ದರೆಷ್ಟು, ಬಿಟ್ಟರೆಷ್ಟು ಎಂದು ಶಾಸಕ ಹರ್ಷವರ್ಧನ್ ಬೇಸರ ವ್ಯಕ್ತಪಡಿಸಿದರು.

ನಾವು ಪ್ರತಿಭಟನೆ ನಡೆಸುತ್ತಿರುವುದು ನೋವಿನ ವಿಚಾರ. ಯಾವುದೇ ಸರ್ಕಾರವಾದರೂ ಸಾರ್ವಜನಿಕರ ಜೀವ ರಕ್ಷಣೆ ಮಾಡಬೇಕು. ಕಾನೂನು–ಸುವ್ಯವಸ್ಥೆ ಕಾಪಾಡಬೇಕು. ಸರ್ಕಾರ ಯಾವುದೇ ಇರಲಿ. ಒಂದು ವೇಳೆ ಇದು ಸಾಧ್ಯವಾಗದಿದ್ದರೆ, ಅಂತಹ ಸರ್ಕಾರ ಇದ್ದರೆಷ್ಟು ಬಿಟ್ಟರೆಷ್ಟು. ರಾಜ್ಯದಲ್ಲಿ ನಡೆಯುತ್ತಿರುವ ಇಂತಹ ಘಟನೆಗಳು ನನಗೂ ಬಹಳ ನೋವು ತಂದಿದೆ ಎಂದರು. ರಾಜ್ಯದಲ್ಲಿ ಇಂಟೆಲಿಜೆನ್ಸ್ ವಿಫಲವಾಗಿರಬಹುದು. ನೆರೆ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನ ಹರಿಸಬೇಕಿದೆ. ಏಕೆಂದರೆ ನಂಜನಗೂಡು, ಗುಂಡ್ಲುಪೇಟೆ ಪಟ್ಟಣಗಳು ಕೇರಳ ಗಡಿಯಲ್ಲೇ ಇವೆ. ಇಂತಹ ಘಟನೆಗಳು ಮುಂದೆಯೂ ನಡೆಯಬಹುದು. ಹಾಗಾಗಿ ಈ ರೀತಿಯ ಘಟನೆ ಮರುಕಳಿಸದಂತೆ ಕಠಿಣ ಕಾನೂನು ಜಾರಿಯಾಗಬೇಕು ಎಂದರು. ಬಿಜೆಪಿ, ಕಾರ್ಯಕರ್ತರಿಂದ ಬೆಳೆದಿರುವ ಪಕ್ಷ. ಕಾರ್ಯಕರ್ತರ ಶ್ರಮ ಮತ್ತು ಬೆವರು ಪಕ್ಷದ ಬೆಳವಣಿಗೆಯಲ್ಲಿದೆ. ಹಾಗಾಗಿ ಅವರ ರಕ್ತ ಹರಿಯಬಾರದು. ಮುಖ್ಯಮಂತ್ರಿಗಳು ಪ್ರತಿಭಟನೆಯನ್ನು ಗಂಭೀರವಾಗಿ ಪರಿಗಣಿಸಿ ಹೊಸ ಕಾನೂನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

31.20 ಕ್ವಿಂಟಾಲ್ ಪಡಿತರ ಅಕ್ಕಿ ವಶ

ಮೈಸೂರು,ಜು.30–ಅಕ್ರಮವಾಗಿ ಸಾಗಿಸುತ್ತಿದ್ದ 31.20 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಕರ್ನಾಟಕ ರಕ್ಷಣಾ ವೇದಿಕೆ ಮೈಸೂರು ಜಿಲ್ಲಾಧ್ಯಕ್ಷ ಬಸವರಾಜು ನೀಡಿದ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕ ಬಿ.ವಿ.ಕಿರಣ್ ಕುಮಾರ್, ಮೇಟಗಳ್ಳಿ ಪೊಲೀಸರ ಸಹಕಾರದೊಂದಿಗೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಸಿದ್ದಲಿಂಗಪುರ ಗ್ರಾಮದ ಬಳಿ ನಿಂತಿದ್ದ ಗೂಡ್ಸ್ ವಾಹನ (ಕೆಎ 10–8063)ವನ್ನು ಪರಿಶೀಲಿಸಿದಾಗ, ಅದರಲ್ಲಿ 65 ಚೀಲಗಳಲ್ಲಿ ತುಂಬಿದ್ದ 31.20 ಕ್ವಿಂಟಾಲ್ ಪಡಿತರ ಅಕ್ಕಿ ಪತ್ತೆಯಾಗಿದೆ. ಈ ವೇಳೆ ವಾಹನದ ಚಾಲಕ ಪರಾರಿಯಾಗಿದ್ದು, ವಾಹನ ಮತ್ತು ಅಕ್ಕಿ ವಶಪಡಿಸಿಕೊಂಡಿರುವ ಮೇಟಗಳ್ಳಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.


ಸುರೇಶ್ ನಿಧನ



ಮೈಸೂರು,ಜು.30–ಮೈಸೂರಿನ ಅಗ್ರಹಾರ ನಿವಾಸಿ ಸುರೇಶ್(49) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಬಸವ ಜಯಂತಿ

ಮೈಸೂರು,ಜು.30(ಎಂಟಿವೈ)–ಮೈಸೂರಿನ ವಿಶ್ವೇಶ್ವರ ನಗರ ಹಾಗೂ ಜೆ.ಪಿ.ನಗರದ ಬಸವ ಸಮಿತಿಯಿಂದ



31ನೇ ವರ್ಷದ ಬಸವ ಜಯಂತಿ ಕಾರ್ಯಕ್ರಮವನ್ನು ಜು.31ರಂದು ಜೆ.ಪಿ.ನಗರದ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಬಸವ ಸಮಿತಿ ಸದಸ್ಯ ಎಂ.ಗುರುಮಲ್ಲಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.31ರಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಕುದೇರು ಮಠದ ಕಿರಿಯ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ ವಹಿಸಲಿದ್ದಾರೆ. ಬಸವ ಚರಿತಾಮೃತ ಕೃತಿಯನ್ನು ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಬಿಡುಗಡೆ ಮಾಡಲಿದ್ದಾರೆ ಎಂದರು.

ಪಾರ್ಟ್‌ಟೈಂ ಕೆಲಸದ ಆಮಿಷ ತೋರಿ 3.28 ಲಕ್ಷ ವಂಚನೆ

ಮೈಸೂರು,ಜು.30– ಪಾರ್ಟ್‌ಟೈಂ ಜಾಬ್ ಇರುವುದಾಗಿ ಸಂದೇಶ ಕಳುಹಿಸಿ ವಿದ್ಯಾರ್ಥಿನಿಗೆ ಆನ್‌ಲೈನ್ ಮೂಲಕ 3.38 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಕೆಸರೆ 2ನೇ ಹಂತದ ವಿದ್ಯಾರ್ಥಿನಿ ಮೈತ್ರಿ (18) ಅವರಿಗೆ ಪಾರ್ಟ್‌ಟೈಂ ಕೆಲಸವಿದೆ ಎಂದು ಸಂದೇಶ ರವಾನಿಸಲಾಗಿದೆ. ಸಂದೇಶದಲ್ಲಿದ್ದ ಲಿಂಕ್‌ಅನ್ನು ಕ್ಲಿಕ್ ಮಾಡಿದಾಗ ಟೆಲಿಗ್ರಾಂ ಲಿಂಕ್‌ವೊಂದು ಬಂದಿದೆ. ಅಲ್ಲಿ ನೀಡಿದ ಮಾಹಿತಿಯಂತೆ 100 ರೂ. ರೀಚಾರ್ಜ್ ಮಾಡಿಸಿದ ನಂತರ ಕೆಲ ವಸ್ತುಗಳನ್ನು ಖರೀದಿಸುವಂತೆ ತಿಳಿಸಿ, ಹಂತಹಂತವಾಗಿ 3.38 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

'ಗೌರಿ' ಸ್ಮರಣಾರ್ಥ ಪೌರಾಣಿಕ ನಾಟಕ ಪ್ರದರ್ಶನ



ಮೈಸೂರು, ಜು.30(ಎಸ್‌ಬಿಡಿ)– ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರ ಮೊಮ್ಮಗಳು, ಎಂಸಿಡಿಸಿಸಿ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರ ಪುತ್ರಿ ಗೌರಿ ಸ್ಮರಣಾರ್ಥ ಮೈಸೂರಿನಲ್ಲಿ ಶುಕ್ರವಾರ ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಬೆಂಗಳೂರಿನ ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್, ತಲಕಾಡಿನ ನವರುದ್ರ ತಾಂಡವ ನಾಟಕ ಮಂಡಳಿ, ಮೈಸೂರಿನ ರೇಣುಕಾ ಕಲಾ ವೃಂದ, ಶ್ರೀ ಚಾಮುಂಡೇಶ್ವರಿ ಕೃಪಾ ಪೋಷಿತ ನಾಟಕ ಮಂಡಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಪುರಭವನದಲ್ಲಿ ಪ್ರದರ್ಶನಗೊಂಡ 'ದಕ್ಷ ಯಜ್ಞ ಅಥವಾ ಬೃಗು ಮುನಿಯ ಗರ್ವಭಂಗ' ನಾಟಕದಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ತುಮಕೂರು, ರಾಮನಗರ, ಬೆಂಗಳೂರಿನ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದರು. ಮಂಡ್ಯ ಉಮೇಶ್ ಡ್ರಾಮಾ ಸೀನರಿ ಹಾಗೂ ಪ್ರೊ.ರಮೇಶ್‌ರವರ ಭವ್ಯ ರಂಗಸಜ್ಜಿಕೆಯಲ್ಲಿ ಮೈಸೂರು ಜಿಲ್ಲಾ ಪೌರಾಣಿಕ ರಂಗಭೂಮಿ ಜಿಲ್ಲಾಧ್ಯಕ್ಷರೂ ಆದ ಹಿರಿಯ ನಾಟಕ ನಿರ್ದೇಶಕ ಹೆಚ್.ಪಿ.ನಾಗೇಂದ್ರ ಪ್ರಸಾದ್ ನೇತೃತ್ವದಲ್ಲಿ ನಾಟಕ ಪ್ರದರ್ಶನ ನೆರವೇರಿತು. ಈ ನಾಟಕವನ್ನು ಮಂಗಳಮುಖಿಯರು ಆಯೋಜಿಸಿದ್ದು ವಿಶೇಷ. ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ದೀಪ ಬೆಳಗಿಸಿ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿದರು. ಈ ವೇಳೆ ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್‌ನ ಸ್ವಪ್ನ ನಾಗರಾಜ್ ಮಾತನಾಡಿ, ರಂಗಭೂಮಿಯ ಬೇರಿನಂತಿರುವ ಪೌರಾಣಿಕ ನಾಟಕಕ್ಕೆ ಪ್ರೋತ್ಸಾಹದ ಕೊರತೆಯಿದೆ. ನಾಟಕ ಪ್ರದರ್ಶನಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೇವಲ 30 ಸಾವಿರ ರೂ. ಪ್ರೋತ್ಸಾಹ ಧನ ನೀಡುತ್ತದೆ. ರಂಗಸಜ್ಜಿಕೆ, ಕಲಾವಿದರ ಗೌರವ ಧನ ಇನ್ನಿತರ ನಿರ್ವಹಣೆಗೆ ಈ ಹಣ ಸಾಕಾಗುವುದಿಲ್ಲ. ಆದ್ದರಿಂದ ಪೌರಾಣಿಕ ನಾಟಕಕ್ಕೆ ಕನಿಷ್ಠ 1 ಲಕ್ಷ ರೂ. ಸಹಾಯ ಧನ ನೀಡಬೇಕೆಂದು ಆಗ್ರಹಿಸಿದರು. ಅಂಕಿತಾ, ವಿ.ರಾಜು, ಟಿ.ಕೆ.ಬೋರೇಗೌಡರು, ಯಶ್ವಂತ್, ನಾಗೇಂದ್ರ ಪ್ರಸಾದ್, ಚೇತನ್, ಸಂಜೀವ್ ಕುಮಾರ್, ಉಮೇಶ್‌ಗೌಡ, ಸುರೇಶ್ ಎನ್.ನೀರಾವರಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 31 ಭಾನುವಾರ 2022

ಸಂಪುಟ: 43 | ಸಂಚಿಕೆ: 106 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ದಸರಾ ಗೋಲ್ಡನ್ ಪಾಸ್‌ನಲ್ಲಿ ಪ್ಯಾಕೇಜ್ ಟೂರ್‌ಗೆ ಅವಕಾಶ



- ಪ್ರವಾಸೋದ್ಯಮ ನಿಗಮ ನಿರ್ಧಾರ
- ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ

ಬೆಂಗಳೂರು, ಜು.30–ನಾಡಹಬ್ಬ ಮೈಸೂರು ದಸರಾ ವೇಳೆಯಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯಲು ಪ್ಯಾಕೇಜ್ ಟೂರುಗಳ ಏರ್ಪಡಿಸಲು ಪ್ರವಾಸೋದ್ಯಮ ಇಲಾಖೆ ನಿರ್ಧರಿಸಿದೆ. ಅಲ್ಲದೆ ಮೈಸೂರು ದಸರಾಕ್ಕಾಗಿ 1,000 ಗೋಲ್ಡನ್ ಪಾಸ್‌ಗೆ ಅನುಮೋದನೆ ನೀಡುವಂತೆ ರಾಜ್ಯ ಪ್ರವಾಸೋದ್ಯಮ ನಿಗಮ, ಸರ್ಕಾರವನ್ನು ಕೋರಿದೆ. ಈ ಪಾಸ್‌ನಿಂದ ಜಂಬೂ ಸವಾರಿ ವೀಕ್ಷಣೆ ಮಾತ್ರವಲ್ಲದೇ, ಚಿಕ್ಕಮಗಳೂರು, ಮಡಿಕೇರಿ, ಮೇಲುಕೋಟೆ, ಬೇಲೂರು ಮತ್ತು ಹಳೇಬೀಡುಗಳಂತಹ ಪ್ರವಾಸಿ ತಾಣಗಳಿಗೆ ತೆರಳಲು ಬಳಸಿಕೊಳ್ಳಬಹುದಾಗಿದೆ.

ನಾಡಹಬ್ಬ ನೋಡಲು ಆಗಮಿಸುವ ಪ್ರವಾಸಿಗರಿಗೆ ಥೀಮ್ ಆಧಾರಿತ ಪ್ಯಾಕೇಜ್ ಟೂರ್ ಅವಕಾಶ ನೀಡಲಾಗುತ್ತಿದೆ. ಎರಡು ವರ್ಷಗಳ ನಂತರ ಈ ಬಾರಿಯ ದಸರಾ ಹಬ್ಬ ವಿಜೃಂಭಣೆಯಿಂದ ನಡೆಯಲಿದೆ. ಮೈಸೂರಿಗೆ ಮಾತ್ರವಲ್ಲದೇ ರಾಜ್ಯಕ್ಕೆ ಹೆಚ್ಚಿನ ಪ್ರವಾಸಿಗರನ್ನು ಸೆಳೆಯಲು ಇದೊಂದು ಸದವಕಾಶವಾಗಿದೆ ಎಂದು ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಗದೀಶ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಈ ಬಾರಿ 1,000 ಗೋಲ್ಡನ್ ಪಾಸ್ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇದರಿಂದ ಹೆಚ್ಚಿನ ಜನರನ್ನು ಸೆಳೆಯಬಹುದಾಗಿದೆ. ಜನರಿಗಾಗಿ ಡೇ ಮತ್ತು ದೀರ್ಘ ಅವಧಿಯ ಪ್ಯಾಕೇಜ್ ಟೂರ್‌ಗೂ ಚಿಂತನೆ ನಡೆಸಲಾಗುತ್ತಿದೆ. ಪ್ರತಿ ಗೋಲ್ಡ್ ಕಾರ್ಡ್‌ಗೆ 5,000 ದರ ನಿಗದಿ ಮಾಡಲಿದ್ದು, ಇದರ ಮೂಲಕ ದಸರಾ ವೀಕ್ಷಿಸುವ ಪ್ರವಾಸಿಗರು ಇತರ ಸ್ಥಳಗಳಿಗೂ ಭೇಟಿ ನೀಡಬಹುದಾಗಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಆದಾಯ ಹೆಚ್ಚಳ ಇದರ ಗುರಿಯಾಗಿದೆ. ದಸರಾ ವೇಳೆಯಲ್ಲಿ ಇ– ಬ್ರೋಚರ್ ಸೇವೆಗೂ ಚಾಲನೆ ನೀಡಲಾಗುವುದು. ಅದರಲ್ಲಿ ಹೋಟೆಲ್, ಸೇವೆಗಳ ವಿವರ ಮತ್ತು ಬುಕ್ಕಿಂಗ್‌ಗಾಗಿ ಕ್ಯೂಆರ್ ಕೋಡ್ ಅನ್ನು ಪ್ರವಾಸಿಗರು ಸ್ಕ್ಯಾನ್ ಮಾಡಬಹುದು.

ಸಹಕಾರಿ ಸಂಸ್ಥೆಗಳು ದೇಶದ ಆರ್ಥಿಕತೆಯ ಜೀವಾಳ: ಜಿಟಿಡಿ

- ದೇಶದಲ್ಲಿದ್ದಾರೆ 30 ಕೋಟಿ ಸಹಕಾರಿ ಸದಸ್ಯ ಬಳಗ
- 8.5 ಲಕ್ಷ ಸಹಕಾರಿ ಸಂಸ್ಥೆಗಳು
- 4 ಲಕ್ಷಕ್ಕೂ ಅಧಿಕ ಮಂದಿಗೆ ಉದ್ಯೋಗ



ಹುಣಸೂರು, ಜು.30– ಭಾರತ ಸಹಕಾರ ಕ್ಷೇತ್ರ 30 ಕೋಟಿಗೂ ಅಧಿಕ ಸದಸ್ಯ ಬಳಗ, 8.5 ಲಕ್ಷ ವಿವಿಧ ರೀತಿಯ ಸಹಕಾರ ಸಂಘಗಳನ್ನು ಹೊಂದಿದೆ 11 ಲಕ್ಷ ಕೋಟಿಗಳಿಗೂ ಅಧಿಕ ಬಂಡವಾಳ, 6 ಲಕ್ಷ ಕೋಟಿ ರೂಗೂ ಅಧಿಕ ಠೇವಣಿ ಹೊಂದುವ ಮೂಲಕ ವಿಶ್ವದ ಗಮನ ಸೆಳೆದಿದೆ ಎಂದು ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ಮುನೇಶ್ವರ ಕಾವಲ್ ಮೈದಾನದಲ್ಲಿ ಶನಿವಾರ ನಡೆದ ಸಹಕಾರ ಸಮ್ಮಿಲನ ಕಾರ್ಯಕ್ರಮದಲ್ಲಿ ವಿವಿಧ ಡೈರಿ ಮತ್ತು ಸಹಕಾರ ಸಂಘದ ಕಟ್ಟಡಗಳ ಶಂಕುಸ್ಥಾಪನೆ, ನೂತನ ಬಿಎಂಸಿ ಕೇಂದ್ರಗಳನ್ನು ಉದ್ಘಾಟಿಸಿ ಮಾತನಾಡಿದ ಅವರು,

> **“ಸಹಕಾರ ಕ್ಷೇತ್ರ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಜಾಗೃತಿಯಿಂದ, ಬದ್ಧತೆಯಿಂದ, ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು. ಸರ್ಕಾರದ ಮಧ್ಯಪ್ರವೇಶ ಇರಬಾರದು. ಸಹಕಾರಿಗಳು ಬದ್ಧತೆಯಿಂದ ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ, ಪೋಷಿಸಬೇಕು. ಇದರಿಂದ ಸಹಕಾರ ಚಳವಳಿ ಮತ್ತಷ್ಟು ಬೆಳೆಯಲು ಸಾಧ್ಯವಾಗುತ್ತದೆ.**
> **– ಜಿ.ಟಿ.ದೇವೇಗೌಡ, ಸಹಕಾರಿ ಧುರೀಣ.**

ಕರ್ನಾಟಕದಲ್ಲಿ 46 ಸಾವಿರಕ್ಕೂ ಅಧಿಕ ಸಹಕಾರ ಸಂಘಗಳು ನೋಂದಣಿಯಾಗಿದ್ದು, 2.30 ಕೋಟಿ ಸದಸ್ಯ ಬಳಗವನ್ನು ಹೊಂದಿದೆ. ಇವುಗಳಲ್ಲಿ 40 ಸಾವಿರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 6344 ಕೋಟಿ ರೂ. ▶ 6ನೇ ಪುಟಕ್ಕೆ

ಸಿಇಟಿ ಫಲಿತಾಂಶ ಪ್ರಕಟ

ರ್‍ಯಾಂಕ್‌ಗಳೆಲ್ಲಾ ಸಿಬಿಎಸ್‌ಇ ವಿದ್ಯಾರ್ಥಿಗಳ ಪಾಲು

- ಬೆಂಗಳೂರು ವಿದ್ಯಾರ್ಥಿಗಳ ಪಾರುಪತ್ಯ
- ಮೈಸೂರಿಗಿಲ್ಲ ಈ ಬಾರಿ ರ್‍ಯಾಂಕ್
- ಸೆ.1ರಿಂದ ದಾಖಲಾತಿ ಪರಿಶೀಲನೆ


[ಸಾಂದರ್ಭಿಕ ಚಿತ್ರ]

ಬೆಂಗಳೂರು, ಜು.30(ಕೆಎಂಶಿ)– ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಬಾಲಕರೇ ಮೇಲುಗೈ ಸಾಧಿಸಿದ್ದಾರೆ. ಕೇಂದ್ರ ಸ್ವಾಮ್ಯದ ಸಿಬಿಎಸ್‌ಇ ವಿದ್ಯಾರ್ಥಿಗಳು ಐದು ವಿಭಾಗಗಳಲ್ಲೂ ರ್‍ಯಾಂಕ್‌ಗಳನ್ನು ದೋಚಿಕೊಂಡಿದ್ದಾರೆ.

ಐದು ವಿಭಾಗಗಳಲ್ಲಿ ಮೊದಲ ಹತ್ತು ರ್‍ಯಾಂಕ್‌ಗಳ ಸಿಂಹ ಪಾಲು ಬೆಂಗಳೂರಿನ ವಿದ್ಯಾರ್ಥಿಗಳ ಪಾಲಾಗಿದ್ದರೆ, ನಂತರದ ಸ್ಥಾನ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂದಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್, ಸೆಪ್ಟೆಂಬರ್ 1ರಿಂದ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಾಖಲೆಗಳ ಪರಿಶೀಲನೆ ನಡೆಯಲಿದೆ ಎಂದರು. ಈ ಬಾರಿ 2,10,829 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ ಇಂಜಿನಿಯರಿಂಗ್ ವಿಭಾಗಕ್ಕೆ 1,71,656 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ. ಕೃಷಿ ವಿಭಾಗದಲ್ಲಿ 1,39,968 ವಿದ್ಯಾರ್ಥಿಗಳು, ಪಶುಸಂಗೋಪನೆ 1,42,820, ಯೋಗ ಮತ್ತು ನ್ಯಾಚುರೋಥೆರಪಿ 1,42,750, ಬಿ–ಫಾರ್ಮಾ 1,74,568 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ ಎಂದರು.

ರ್‍ಯಾಂಕ್ ತಡೆಹಿಡಿಯಲ್ಪಟ್ಟಿರುವ ಅಭ್ಯರ್ಥಿಗಳು ತಮ್ಮ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯ ಸಿಇಟಿ ಕಚೇರಿಗೆ ಖುದ್ದಾಗಿ ಸಲ್ಲಿಸಿ, ರ್‍ಯಾಂಕ್ ಪಡೆದುಕೊಳ್ಳಬಹುದಾಗಿದೆ. ▶ 9ನೇ ಪುಟಕ್ಕೆ

ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಲಿ.,

ಜಗನ್ಮೋಹನ ಪ್ಯಾಲೇಸ್ ರಸ್ತೆ, ಮೈಸೂರು – 570024

ಬ್ಯಾಂಕಿನ 2021–22ನೇ ಸಾಲಿನ ಅರವತ್ತ ಮೂರನೇಯ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕಾ

ಮೇಲ್ಕಂಡ ಬ್ಯಾಂಕಿನ 2021–22ನೇ ಸಾಲಿನ ಸರ್ವಸದಸ್ಯರ ಸಭೆಯನ್ನು **ತಾರೀಖು 31.07.2022 ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಮೈಸೂರು ಸಿಟಿ, ಜೆ.ಪಿ.ನಗರದ ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ ಬಸಂತ್ ಕನ್‌ವೆನ್‌ಷನ್ ಸೆಂಟರ್ ಸಮುದಾಯ ಭವನದಲ್ಲಿ** ನಮ್ಮ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಆರ್.ಆನಂದ್** ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಬೇಕಾಗಿ ಕೋರಿದೆ. ಕಾರಣಾಂತರದಿಂದ ಆಹ್ವಾನಪತ್ರಿಕೆ ಯಾರಿಗಾದರು ತಲುಪದೆ ಹೋಗಿದ್ದರೆ ಇದನ್ನೇ ಆಹ್ವಾನವೆಂದು ಮನ್ನಿಸಿ ಸಭೆಗೆ ಬಂದು ಭಾಗವಹಿಸಬೇಕೆಂದು ಈ ಮೂಲಕ ಕೋರುತ್ತೇವೆ.

ಮೈಸೂರು
ದಿನಾಂಕ: 23.06.2022

ಡೈರೆಕ್ಟರುಗಳ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– **ಶ್ರೀಧರ್.ಬಿ.ಕುಲಕರ್ಣಿ,** ಪ್ರಧಾನ ವ್ಯವಸ್ಥಾಪಕರು

ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕಿನ ಎಲ್ಲಾ ಸನ್ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ

ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕಿನ 63ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ತಾರೀಖು 31.07.2022ನೇ ಭಾನುವಾರ ಮೈಸೂರು ಸಿಟಿ, ಜೆ.ಪಿ.ನಗರದ ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ ಬಸಂತ್ ಕನ್‌ವೆನ್‌ಷನ್ ಸೆಂಟರ್ ಸಮುದಾಯ ಭವನದಲ್ಲಿ ನಡೆಯಲಿದ್ದು ಈ ಸಂಬಂಧ ಸನ್ನದು ಲೆಕ್ಕ ಪರಿಶೋಧಕರಿಂದ ಪರಿಶೋಧಿತವಾದ ಪುಸ್ತಕವನ್ನು ಮಾನ್ಯ ಸದಸ್ಯರುಗಳಿಗೆ ಕಳುಹಿಸಲಾಗಿದೆ. ಸದರಿ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಅಜೆಂಡಾ ಲಗತ್ತಿಸಿ ಕಳುಹಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ದಿನಾಂಕ: 08–07–2022 ರ ಸೂಚನೆ ರೀತ್ಯಾ **“ವಿಷಯ ಸಂಖ್ಯೆ–9: ಸಹಕಾರಿ ಕಾಯ್ದೆ 1959ಕ್ಕೆ ತಂದಿರುವ ತಿದ್ದುಪಡಿ ರೀತ್ಯಾ ಬ್ಯಾಂಕಿನ ಉಪನಿಬಂಧನೆ ಸಂಖ್ಯೆ 4.31, ಹೊಸದು 18.2, 19.2, 52.3ಕ್ಕೆ ತಿದ್ದುಪಡಿ ತಂದಿದ್ದು ಇದನ್ನು ನಮ್ಮ ಬ್ಯಾಂಕಿನ ಬೈಲಾದಲ್ಲಿ ಅಳವಡಿಸಿಕೊಳ್ಳಬೇಕಾಗಿರುವ ವಿಷಯ”** ಇದನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಈ ವಿಷಯವನ್ನು ಸರ್ವಸದಸ್ಯರ ಸಭೆಯ ಅಜೆಂಡಾ 9 ಎಂದು ಪರಿಗಣಿಸಬೇಕೆಂದು ಆಡಳಿತ ಮಂಡಳಿ ಕೋರುತ್ತದೆ.

ಬೈಲಾ ಸಂಖ್ಯೆ	ಹಾಲಿ ಇರುವ ಉಪನಿಯಮ	ತಿದ್ದುಪಡಿ ಮಾಡಿದ ನಂತರ ಇರುವ ಉಪನಿಯಮ	ತಿದ್ದುಪಡಿಗೆ ಕಾರಣಗಳು
4	**ಪದಗಳ ಅರ್ಥ ವಿವರಣೆ:** 4.31 “ ಡೆಲಿಗೇಟ್” ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ	**ಪದಗಳ ಅರ್ಥ ವಿವರಣೆ:** 4.31 “ಡೆಲಿಗೇಟ್” ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ.	ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತಂದಿರುವುದರಿಂದ.
18.2	**ಹೊಸದು**	ಸದಸ್ಯನ ಕರ್ತವ್ಯಗಳು: ಬ್ಯಾಂಕಿನ ಯಾರೇ ಸದಸ್ಯನು– (i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ.	ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತಂದಿರುವುದರಿಂದ.
19.2	**ಮತದಾನದ ಹಕ್ಕು ಕಳೆದುಕೊಳ್ಳುವ ಬಗ್ಗೆ:** ಬ್ಯಾಂಕ್‌ನ ಪ್ರತಿಯೊಬ್ಬ ಸದಸ್ಯ ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಮತದಾನದ ಹಕ್ಕನ್ನು ಕಳೆದುಕೊಳ್ಳತಕ್ಕದ್ದು ಎ) ಕಳೆದ (5) ವಾರ್ಷಿಕ ಸಭೆಗಳಲ್ಲಿ ಮೂರು(3) ಸಭೆಗಳಲ್ಲಾದರೂ ಹಾಜರಿರದಿದ್ದರೆ ಬಿ) ಬ್ಯಾಂಕ್ ದೊರಕಿಸುವ ಕನಿಷ್ಠ ಸೇವೆಯನ್ನು ಅಥವಾ ಸೌಲಭ್ಯವನ್ನು ಪ್ರತಿ ವರ್ಷ ಬಳಸಿಕೊಳ್ಳದಿದ್ದರೆ ಸಿ) ಈ ಮೇಲ್ಕಂಡ ಉದ್ದೇಶಗಳಿಗಾಗಿ ಕನಿಷ್ಠ ಸೇವೆ/ಸೌಲಭ್ಯ ಎಂದರೆ ಕನಿಷ್ಠ ರೂ. 10000 ಸಾಲವನ್ನಾದರೂ ಸುಸ್ತಿಯಾಗುವ ಪೂರ್ವದಲ್ಲಿ ತೀರುವಳಿ ಮಾಡದಿದ್ದರೆ ಅಥವಾ ಕನಿಷ್ಠ ರೂ. 10000ವನ್ನು ಠೇವಣಿ ರೂಪದಲ್ಲಿ ಇರಿಸದಿದ್ದರೆ	**ಮತದಾನದ ಹಕ್ಕು ಕಳೆದುಕೊಳ್ಳುವ ಬಗ್ಗೆ:** ಬ್ಯಾಂಕ್‌ನ ಪ್ರತಿಯೊಬ್ಬ ಸದಸ್ಯ ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಮತದಾನದ ಹಕ್ಕನ್ನು ಕಳೆದುಕೊಳ್ಳತಕ್ಕದ್ದು. ಎ) ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು (5) ವಾರ್ಷಿಕ ಸಭೆಗಳಲ್ಲಿ ಯಾವುದೇ ಎರಡು (2) ಸಭೆಗಳಲ್ಲಾದರೂ ಹಾಜರಿರದಿದ್ದರೆ. ಬಿ) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು (2) ಸಹಕಾರ ವರ್ಷದಲ್ಲಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಯನ್ನು ಅಥವಾ ಸೌಲಭ್ಯವನ್ನು ಬಳಸಿಕೊಳ್ಳಲು ತಪ್ಪಿದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದಲ್ಲ. ಸಿ) ಈ ಮೇಲ್ಕಂಡ ಉದ್ದೇಶಗಳಿಗಾಗಿ ಕನಿಷ್ಠ ಸೇವೆ/ಸೌಲಭ್ಯ ಎಂದರೆ ಕನಿಷ್ಠ ರೂ. 10000 ಸಾಲವನ್ನಾದರೂ ಸುಸ್ತಿಯಾಗುವ ಪೂರ್ವದಲ್ಲಿ ತೀರುವಳಿ ಮಾಡದಿದ್ದರೆ ಅಥವಾ ಕನಿಷ್ಠ ರೂ. 10000ವನ್ನು ಠೇವಣಿ ರೂಪದಲ್ಲಿ ಇರಿಸದಿದ್ದರೆ.	ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತಂದಿರುವುದರಿಂದ.
52	**ಆಡಳಿತ ಮಂಡಳಿಯಲ್ಲಿ ತೆರವಾದ ಸ್ಥಾನಗಳು:** (52.3) ಖಾಲಿ ಆದ ನಿರ್ದೇಶಕರ ಉಳಿದ ಅವದಿ 2½ (ಎರಡೂವರೆ) ವರ್ಷಕ್ಕಿಂತ ಹೆಚ್ಚಿದ್ದರೆ ಸಹಕಾರ ಚುನಾವಣಾ ಆಯೋಗ ಉಪ ಚುನಾವಣೆ ಮುಖಾಂತರ ಭರ್ತಿ ಮಾಡತಕ್ಕದ್ದು. ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಲಿಖಿತವಾಗಿ ಖಾಲಿಯಾದ ನಿರ್ದೇಶಕ ಸ್ಥಾನವನ್ನು ಆರು ತಿಂಗಳ ಮೊದಲು ತಿಳಿಸತಕ್ಕದ್ದು.	**ಮಂಡಳಿಯ ತೆರವಾದ ಸ್ಥಾನಗಳು:** (52.3) ಖಾಲಿ ಆದ ನಿರ್ದೇಶಕರ ಉಳಿದ ಅವದಿ 2½ (ಎರಡೂವರೆ) ವರ್ಷಕ್ಕಿಂತ ಹೆಚ್ಚಿದ್ದರೆ ಸಹಕಾರ ಚುನಾವಣಾ ಆಯೋಗ ಉಪ ಚುನಾವಣೆ ಮುಖಾಂತರ ಭರ್ತಿ ಮಾಡತಕ್ಕದ್ದು ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಲಿಖಿತವಾಗಿ ಖಾಲಿಯಾದ ನಿರ್ದೇಶಕ ಸ್ಥಾನವನ್ನು ಆರು ತಿಂಗಳ ಒಳಗೆ ತಿಳಿಸತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು.	ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತಂದಿರುವುದರಿಂದ.

ವಿ.ಸೂ:– * ಸದಸ್ಯರುಗಳು ದಯವಿಟ್ಟು ನಮ್ಮ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ.
* ಸದಸ್ಯರುಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾಗಿ ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ದಿನಾ ವ್ಯಾಯಾಮ ಮಾಡಬೇಕು
ಸರ್ದಾರ್ : ನಾನು ದಿನಾ ಫುಟ್‌ಬಾಲ್, ಟೆನ್ನಿಸ್, ಕ್ರಿಕೆಟ್ ಆಡ್ತಿನಿ ಸಾರ್
ಡಾಕ್ಟರ್ : ಗುಡ್, ಎಲ್ಲಿ ಆಡ್ತೀರಾ?
ಸರ್ದಾರ್ : ಮೊಬೈಲ್‌ನಲ್ಲಿ ಸಾರ್

ಮೈಸೂರು ಮಿತ್ರ
ಭಾನುವಾರ, 31 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಹುಸಧ್ವನಿಯ ವಿಶೇಷತೇನೆ ಅದು. ಏಳು ಸ್ವರಗಳೇ ಇಲ್ಲದಂತಹ ಒಂದು ಪರಿಪೂರ್ಣ ರಾಗ. ಹಾಗೆ ಎಲ್ಲವೂ ಇಲ್ಲದೆ ಇದ್ದರೂ ಏನೋ ಇದೆ ಎಂದು ಹುಡುಕುವ ನಮ್ಮ ಜೀವನ ಪರಿಪೂರ್ಣತೆಯ ಬಳಿಗೆ ಸಾಗಬೇಕು?!! –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಾಯಿಯನ್ನು ಹೊಡೆಯಬಾರದು, ಗುಬ್ಬಿಯ ಗೂಡನ್ನು ತೆಗೆಯಬಾರದು

ನಿಮ್ಮ ಪತ್ರಗಳು

ಹಿರಿಯರ ಬಗ್ಗೆ ಬೇಡ ತಾತ್ಸಾರ...

ಮಾನ್ಯರೆ,



ಜಗತ್ತಿನ ಜನಸಂಖ್ಯೆಯಲ್ಲಿ ಹಿರಿಯರ (60+) ಸಂಖ್ಯೆ ಹೆಚ್ಚುತ್ತಿರುವುದಾಗಿ ಮಾಧ್ಯಮ ವರದಿಗಳು ತಿಳಿಸಿವೆ. ನಮ್ಮ ದೇಶದಲ್ಲಿ ಹಿರಿಯರ ಜನಸಂಖ್ಯೆ ಹಾಲಿ ಶೇಕಡಾ 10.1 ರಷ್ಟಿದೆ. ಕಳೆದ ದಶಕದಲ್ಲಿ ಅಂದರೆ 2011 ರಿಂದ 2021 ರವರೆಗೆ ಹಿರಿಯರ ಜನಸಂಖ್ಯೆ ಶೇ.32.7 ರ ಪ್ರಮಾಣದಲ್ಲಿ ಹೆಚ್ಚಾಗಿದ್ದರೆ ಅದೇ ಅವಧಿಯಲ್ಲಿ ಇಡೀ ದೇಶದ ಒಟ್ಟು ಜನಸಂಖ್ಯೆ ಶೇ 12.4 ರಷ್ಟು ಮಾತ್ರ ಹೆಚ್ಚಾಗಿದೆ.

ಇಂದು ಹಿರಿಯ ನಾಗರಿಕರಿಗೆ ಅನೇಕ ರೀತಿಯ ತೊಂದರೆಗಳು ಉಂಟಾಗುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ಆರೋಗ್ಯ ಸಮಸ್ಯೆಗಳು ಅವರ ಪ್ರಾಣ ಹಿಂಡುತ್ತಿವೆ. ಇದರ ಜೊತೆಗೆ ಆರ್ಥಿಕ ಸಂಕಷ್ಟ, ಕುಟುಂಬದಲ್ಲಿ ಅಶಾಂತಿ ಹಾಗೂ ಇನ್ನಿತರ ಜ್ವಲಂತ ಸಮಸ್ಯೆಗಳಿಂದಾಗಿ ಹಿರಿಯ ನಾಗರಿಕರ ಬದುಕನ್ನು ದುಸ್ತರವಾಗಿಸುತ್ತಿದೆ. ಎಷ್ಟೋ ಮನೆಗಳಲ್ಲಿ ಹಿರಿಯರನ್ನು ಗೌರವದಿಂದ ನೋಡಿಕೊಳ್ಳಲಾಗುತ್ತಿಲ್ಲ. ಅಷ್ಟೇ ಏಕೆ, ಅವರ ದೈನಂದಿನ ಊಟ, ತಿಂಡಿ ಮುಂತಾದ ಅಗತ್ಯಗಳನ್ನು ನೋಡಿಕೊಳ್ಳುವವರು ಇಲ್ಲದಂತಾಗಿದ್ದಾರೆ. ಅನೇಕ ಮಕ್ಕಳು ತಮ್ಮನ್ನು ಹೆತ್ತು ಹೊತ್ತು ಸಾಕಿದ ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಇದರಿಂದಾಗಿ ಅನೇಕ ಹಿರಿಯ ನಾಗರಿಕರ ಬದುಕು ಅಸಹನೀಯವಾಗಿದ್ದು, ಅವರಲ್ಲಿ ಅನೇಕರು ಖಿನ್ನತೆಗೆ ಒಳಗಾಗಿ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಮನುಷ್ಯನಿಗೆ ವಯಸ್ಸು ಹೆಚ್ಚಾದಂತೆಲ್ಲಾ, ಅನಾರೋಗ್ಯದ ಜೊತೆಗೆ ಅಭದ್ರತೆಯ ಭೀತಿ ಎದುರಾಗುತ್ತಿದೆ. ಯಾರಲ್ಲಿಯೂ ಹೇಳಿಕೊಳ್ಳಲಾಗದ ಹಲವು ಸಮಸ್ಯೆಗಳು ಕೂಡ ಅವರನ್ನು ಕಾಡಬಹುದು. ನಾನು ನೋಡುತ್ತಿರುವ ಹಾಗೆ ಅನೇಕ ತಂದೆ ತಾಯಿಗಳ ಮಕ್ಕಳು ವಿದೇಶಗಳಲ್ಲಿ ಉದ್ಯೋಗದಲ್ಲಿದ್ದು, ತಂದೆ ತಾಯಿಗಳನ್ನು ಅಪರೂಪಕ್ಕೆ ಅನ್ನುವ ಹಾಗೆ 2 ವರ್ಷಕ್ಕೂ ಮೂರು ವರ್ಷಕ್ಕೂ ಬಂದು ನೋಡಿ ಟಾಟಾ ಬೈಬೈ ಹೇಳಿ, "ಬಂದಾ ಪುಟ್ಟ, ಹೋದಾ ಪುಟ್ಟ" ಅನ್ನುವ ರೀತಿಯಲ್ಲಿ ವಿದೇಶಗಳಿಗೆ ಹಾರಿ ಬಿಡುತ್ತಾರೆ. ಹಣವನ್ನೇನೋ ತಂದೆ ತಾಯಿಗಳಿಗೆ ಅವರು ದಂಡಿಯಾಗಿ ನೀಡಬಹುದು. ಆದರೆ ಮಕ್ಕಳ ಪ್ರೀತಿ ಮತ್ತು ಆಕ್ಕರೆಯ ಮಾತುಗಳಿಂದ ವಂಚಿತರಾಗುವ ಹಿರಿಯ ನಾಗರಿಕರು, "ತಮ್ಮ ಮಕ್ಕಳಾದರೂ ಎಲ್ಲೋ ಒಂದು ಕಡೆ ನೆಮ್ಮದಿಯಿಂದ ಇರಲಿ" ಎಂಬ ಸದ್ಭಾವನೆಯಿಂದ ಹಾಗೂ ಹೀಗೂ ಕಾಲ ತಳ್ಳಿ ತಮ್ಮ ಬದುಕಿನ ಯಾನವನ್ನು ಮುಗಿಸುತ್ತಿದ್ದಾರೆ.

ಹಿರಿಯ ನಾಗರಿಕರಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕೆಲವೊಂದು ರಿಯಾಯಿತಿಗಳನ್ನು ನೀಡಿವೆ. ಜೊತೆಗೆ ಅರ್ಹ ಹಿರಿಯ ನಾಗರಿಕರಿಗೆ ನಿವೃತ್ತಿ ವೇತನ ಸಹ ನೀಡುತ್ತಿದೆ. ಆದರೆ ಅವರು ಬ್ಯಾಂಕು, ಅಂಚೆ ಕಚೇರಿ ಮತ್ತು ಇತರ ಸರ್ಕಾರಿ ಸಂಸ್ಥೆಗಳಲ್ಲಿ ಇರಿಸುವ ಠೇವಣಿ ಹಣದ ಬಡ್ಡಿ ಮಾತ್ರ ಇಳಿಯುತ್ತಲೇ ಇದೆ. ಕೆಲವು ವರ್ಷಗಳ ಹಿಂದೆ ಸುಮಾರು ಶೇ 14 ರಷ್ಟಿದ್ದ ಸಣ್ಣ ಉಳಿತಾಯಗಳ ಮೇಲಿನ ಬಡ್ಡಿ ಇತ್ತೀಚಿನ ವರ್ಷಗಳಲ್ಲಿ ಇಳಿಯುತ್ತಲೇ ಬಂದಿದೆ. ಅನೇಕ ಹಿರಿಯ ನಾಗರಿಕರು ತಾವು ತಮ್ಮ ಬದುಕಿನ ಉದ್ದಕ್ಕೂ ಉಳಿಸಿದ ಹಣವನ್ನು ಸಣ್ಣ ಉಳಿತಾಯ ಯೋಜನೆಗಳಲ್ಲಿ ಠೇವಣಿ ಇರಿಸಿ ಅದರಿಂದ ಬರುವ ಅಲ್ಪ ಬಡ್ಡಿಯಿಂದಲೇ ಜೀವನ ಸಾಗಿಸುತ್ತಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆದ್ದರಿಂದ ಹಿರಿಯ ನಾಗರಿಕರ ಠೇವಣಿಗಳ ಮೇಲೆ ಒಂದು ಸ್ಥಿರವಾದ ಬಡ್ಡಿ ದರವನ್ನು ನಿಗದಿ ಪಡಿಸಿದರೆ, ಹಿರಿಯ ನಾಗರಿಕರಿಗೆ ಹೆಚ್ಚು ಅನುಕೂಲವಾಗುತ್ತದೆ. ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಆಸ್ಪತ್ರೆ, ವೈದ್ಯಕೀಯ ಕೇಂದ್ರ, ಆಶ್ರಯ ತಾಣಗಳು, ವೃದ್ಧಾಶ್ರಮಗಳನ್ನು ಸರ್ಕಾರದ ವತಿಯಿಂದ ಉಚಿತವಾಗಿ ತೆರೆದರೆ, ಅವರ ಬದುಕು ಸ್ವಲ್ಪಮಟ್ಟಿಗೆ ಉತ್ತಮವಾಗಬಹುದು. ಈ ನಿಟ್ಟಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಗಂಭೀರ ಚಿಂತನೆ ನಡೆಸಲಿ.

–ಡಾ. ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ರಾಮಕೃಷ್ಣನಗರ ವೃತ್ತಕ್ಕೆ ಸಿಗ್ನಲ್ ಲೈಟ್ ಅಳವಡಿಸಿ

ಮಾನ್ಯರೆ,

ಮೈಸೂರು ನಗರದ ಹೃದಯ ಭಾಗ ಅರಮನೆ, ಆಡಳಿತ ಕಚೇರಿಗಳು, ವಾಣಿಜ್ಯ ರಸ್ತೆ, ಬಸ್ ನಿಲ್ದಾಣ, ಪ್ರಮುಖ ಬಡಾವಣೆಗಳನ್ನು ಸಂಪರ್ಕಿಸುವ ಆರು ಪಥವುಳ್ಳ (ಆರ್.ಗೇಟ್) ಜಯಚಾಮರಾಜೇಂದ್ರ ವೃತ್ತಕ್ಕೆ ನಾಗರಿಕರ ಬಹುದಿನಗಳ ಬೇಡಿಕೆಯಂತೆ ನಗರ ಸಂಚಾರಿ ಪೊಲೀಸರು ಆಧುನಿಕ ತಂತ್ರಜ್ಞಾನ ಬಳಸಿ ಸಿಗ್ನಲ್ ಲೈಟ್ ಟ್ರಾಫಿಕ್ ಸಿಸ್ಟಮ್ ಜಾರಿಗೆ ತಂದಿರುವುದು ಸ್ವಾಗತಾರ್ಹ. ಅದೇ ಮಾದರಿಯಲ್ಲಿ ರಾಮಕೃಷ್ಣನಗರದ ರಾಮಕೃಷ್ಣ ಪರಮಹಂಸರ ವೃತ್ತಕ್ಕೂ ಸಹ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆ ಯೋಜನೆ ಕೈಗೊಂಡರೆ ಸೂಕ್ತ. ರಿಂಗ್ ರೋಡ್, ರಿಜಿಸ್ಟರ್ ಆಫೀಸ್ ಸೇರಿದಂತೆ ಪ್ರಮುಖ ಬಡಾವಣೆಗಳಿಗೆ ಸಂಪರ್ಕಿಸುವ ಐದು ರಸ್ತೆಗಳು ಸೇರುತ್ತವೆ. ಅತಿವೇಗವಾಗಿ ಬರುವ ಭಾರಿ ವಾಹನಗಳಿಂದ ಅಪಘಾತಗಳನ್ನು ತಪ್ಪಿಸಬಹುದು. ಸುತ್ತಮುತ್ತಲು ಹಿರಿಯ ನಾಗರಿಕರೇ ಹೆಚ್ಚಿದ್ದಾರೆ. ಹಾಗಾಗಿ ಭವಿಷ್ಯದ ದೃಷ್ಟಿಯಿಂದ ಸಾರ್ವಜನಿಕರ ಜೀವರಕ್ಷಣೆಗಾಗಿ ಈಗಲೇ ಟ್ರಾಫಿಕ್ ಸಿಗ್ನಲ್ ಲೈಟ್ ಸಿಸ್ಟಮ್ ಪ್ರಯೋಗಕ್ಕೆ ಜಿಲ್ಲಾಡಳಿತ ಮತ್ತು ಮೈಸೂರು ನಗರ ಸಂಚಾರಿ ಪೊಲೀಸರು ಮುಂದಾಗಲಿ.

–ಅಜಯ್ ಶಾಸ್ತ್ರಿ, ಮೈಸೂರು

ಬೃಹತ್ ಮಾರಾಟ; ನಾಳೆ ಮುಕ್ತಾಯ




ಮೈಸೂರು,ಜು.30–ಮೈಸೂರಿನ ಹೆಬ್ಬಾಳು 2ನೇ ಹಂತದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್(ಸಿಐಟಿಬಿ ಛತ್ರ)ನಲ್ಲಿ ಆಯೋಜಿಸಿರುವ ಸ್ವದೇಶಿ ಹಾಗೂ ವಿದೇಶಿ ಬ್ರ್ಯಾಂಡ್ ಖಾತರಿಯುಳ್ಳ ಸಿದ್ಧ ಉಡುಪುಗಳ ಬೃಹತ್ ಮಾರಾಟ ಆ.1ರಂದು ಕೊನೆಗೊಳ್ಳಲಿದೆ. ಬ್ರ್ಯಾಂಡೆಂಡ್ ಗಾರ್ಮೆಂಟ್ಸ್ ಕಂಪನಿಗಳಿಂದ ನೇರವಾಗಿ ಲಕ್ಷಾಂತರ ರೂ. ಮೌಲ್ಯದ ಉತ್ಪನ್ನಗಳನ್ನು ಭಾರೀ ರಿಯಾಯ್ತಿ ದರದಲ್ಲಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಮಹಿಳೆಯರು, ಪುರುಷರು ಹಾಗೂ ಮಕ್ಕಳ ಬ್ರ್ಯಾಂಡೆಂಡ್ ಉಡುಪುಗಳು ಇಲ್ಲಿ ಲಭ್ಯವಿದೆ. ಪ್ರೀಮಿಯಂ ಪ್ಯೂರ್ ಲೆದರ್ ಜಾಕೆಟ್, ಟಾಪ್ಸ್, ಜೀನ್ಸ್, ಕುರ್ತೀಸ್, ಲೆಗ್ಗಿನ್ಸ್, ಪ್ಲಾಜೊ, ಶರ್ಟ್, ಪ್ಯಾಂಟ್, ಸ್ವೆಟರ್ಸ್, ಇಂಪೋರ್ಟೆಡ್ ಪ್ಯೂರ್ ಲೆದರ್ ಬೆಲ್ಟ್ ಸೇರಿದಂತೆ ಹಲವು ಉಡುಪುಗಳನ್ನು ಕಡಿಮೆ ಬೆಲೆಗೆ ಕೊಳ್ಳಬಹುದಾಗಿದೆ. ಬೆಳಗ್ಗೆ 10ರಿಂದ ರಾತ್ರಿ 10ರವರೆಗೂ ಮಾರಾಟ ನಡೆಯಲಿದ್ದು, ಉಚಿತ ಪಾರ್ಕಿಂಗ್ ಸೌಲಭ್ಯವೂ ಇದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ವಂಚಿಸುವವರಿಗೆ ಒತ್ತಾಸೆ ಆಗುವುದೂ ಸ್ವವಂಚನೆ !



> ಸಾಮಾನ್ಯವಾಗಿ ಭಿಕ್ಷೆ ಬೇಡುವವರು ಮೂರು ದಿನದಿಂದ ಏನನ್ನೂ ತಿಂದಿಲ್ಲ, ಆದ್ದರಿಂದ ಹಣ ನೀಡಿ ಎಂದೇ ಕೇಳುತ್ತಿರುತ್ತಾರೆ. ಅಂದರೆ ಅವರಿಗೆ ಹಣಕ್ಕಿಂತ ಆಹಾರ ಮುಖ್ಯವಾಗಿದೆ ಎಂದು ನಾವು ಭಾವಿಸಿ, ಹಣ ನೀಡದೆ ಆಹಾರ ಪದಾರ್ಥ ಕಲ್ಪಿಸಬೇಕಲ್ಲವೇ!? ಅವರಿಗೆ ಆಹಾರ ಬೇಡ ಎಂದಾದಲ್ಲಿ ಹಣ ನೀಡಬಾರದು ಎಂಬ ಮಾತುಗಳು ಈಗ ಹೆಚ್ಚಾಗಿ ಕೇಳಿಬರುತ್ತಿದೆ. ಭಿಕ್ಷೆ ಬೇಡುವ ನೆಪದಲ್ಲಿ ಒಂದು ಗ್ಯಾಂಗ್ ಸದಾ ತಯಾರಾಗಿರುತ್ತದೆಯಂತೆ. ಇದು ಮುಂದೆ ಸಮಾಜಘಾತುಕ ಶಕ್ತಿಯಾಗಿ ಮಾರ್ಪಡುವ ಸಂದರ್ಭಗಳು ಜಾಸ್ತಿಯಾಗಿರುತ್ತದೆ. ಆದರೆ ನಾವು ಮುಗ್ಧತೆಯಿಂದ, ಬೇಡುವವರ ದಯನೀಯ ಸ್ಥಿತಿ ಎಂದು ಭಾವಿಸಿ ಹಣ ನೀಡುತ್ತೇವೆ.

ಅದೇಕೋ ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಮೋಸದ ಮನೋಭಾವ, ಮೋಸದ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ. ಅಲ್ಲೆಲ್ಲಾ ಹಣ ಮಾಡುವ ಧಾವಂತ ಹೆಚ್ಚಾಗಿ ಕಂಡುಬರುತ್ತಿದೆ. ದುಡ್ಡಿದ್ದರೆ ಎಲ್ಲಾ ಸಿಗುತ್ತದೆ ಎಂಬ ಮನೋಭಾವ. ಆದರೆ ಇದು ಮಾನವೀಯತೆಯನ್ನು ಬಲಿ ಪಡೆಯುತ್ತಿದೆಯೇನೋ? ಎನ್ನಿಸುತ್ತದೆ. ರಸ್ತೆಯಲ್ಲಿ ಸಿಗ್ನಲ್ ದೀಪಗಳ ಬಳಿ ವಾಹನ ನಿಲ್ಲಿಸಿದಾಗ ಒಂದು ಹೆಂಗಸು ಒಂದು ಹಸುಗೂಸು ಹೊತ್ತುಕೊಂಡು ಬಂದು ಭಿಕ್ಷೆ ಬೇಡುವುದನ್ನು ಕಂಡು ಅಯ್ಯೋ ಪಾಪ! ಎಂದು ಒಂದಷ್ಟು ಹಣ ನೀಡುತ್ತೇವೆ. ಆ ಮಗು ಹೆಂಗಸಿನ ಭುಜದ ಮೇಲೆ ಗಾಢ ನಿದ್ರೆಯಲ್ಲಿರುತ್ತದೆ. ನೀವು ಒಂದೆರಡು ಗಂಟೆ ನಂತರ ಮತ್ತೆ ಅಲ್ಲಿಗೆ ಬಂದರೆ ಆಗಲೂ ಆ ಹೆಂಗಸು ಅದೇ ಮಗುವನ್ನು ಹೊತ್ತುಕೊಂಡು ಭಿಕ್ಷೆ ಬೇಡುತ್ತಿರುವುದನ್ನು ಕಾಣಬಹುದು. ಆಗಲೂ ಆ ಮಗು ಗಾಢ ನಿದ್ರೆಯಲ್ಲಿರುತ್ತದೆ. ಆ ಬಗ್ಗೆ ಒಬ್ಬ ಅಧಿಕಾರಿಯನ್ನು ಕೇಳಿದಾಗ ಹೇಳಿದ ಮಾತು ಆಘಾತ ಉಂಟುಮಾಡುವಂತಹುದು. 'ಮಗು ಆ ಹೆಂಗಸಿನದ್ದಲ್ಲ, ಹಾಗೆ ನೋಡಿದರೆ ಆ ಹೆಂಗಸಿಗೆ ಮದುವೆಯೇ ಆಗಿಲ್ಲ. ಮಗುವನ್ನು ಬಾಡಿಗೆಗೆ ತಂದಿರುತ್ತಾರೆ. ತಾನು ಬಾಣಂತಿ ಎಂದು ಬಿಂಬಿಸಲು ತಲೆಗೆ ಬಟ್ಟೆ ಕಟ್ಟಿಕೊಂಡಿರುತ್ತಾಳೆ. ಮಗುವಿಗೆ ಮತ್ತು ಬರುವ ಔಷಧ ನೀಡಿ, ಅದು ಇಡೀ ದಿನ ಮಲಗಿರುವಂತೆ ಮಾಡಿ, ಅದನ್ನು ತನ್ನ ಮಗುವೆಂದು ಬಿಂಬಿಸುತ್ತಾ ಭಿಕ್ಷೆ ಬೇಡುತ್ತಾರೆ. ನಾವು ಅನುಕಂಪದಿಂದ ಹಣ ನೀಡುತ್ತೇವೆ. ಸಂಜೆಯಾಗುತ್ತಿದ್ದಂತೆಯೇ ಆ ಮಗುವನ್ನು ಅದರ ಹೆತ್ತವರಿಗೆ (ಸಾಮಾನ್ಯವಾಗಿ ಬಡವರು) ಹಿಂದಿರುಗಿಸಿ, ಅದಕ್ಕೆ ಬದಲು ತಾವು ಭಿಕ್ಷೆ ಬೇಡಿ ತಂದಿದ್ದರಲ್ಲಿ ಒಂದಷ್ಟು (ಮೊದಲೇ ಮಾತಕತೆಯಾಗಿರುವಂತೆ) ಹಣವನ್ನು ನೀಡಿ ಹೋಗುತ್ತಾರೆ' ಎಂದು.

ಇಲ್ಲಿ ಮಗುವಿನ ಪೋಷಕರ ಬಡತನವನ್ನು ಬಳಸಿಕೊಳ್ಳಲಾಗುತ್ತದೆ. ಇದೊಂದು ರೀತಿಯ ಮಾಫಿಯಾ. ಮುಂದೆ ಆ ಮಗು ಹೇಗೆ ಬೆಳೆಯಬಹುದು? ಹೇಗೆ ಬದುಕಬಹುದು? ಎಂಬುದನ್ನು ಯೋಚಿಸಿ! ಏಕೆಂದರೆ ಅದು ಬೆಳವಣಿಗೆ ಹೊಂದಬೇಕಾದ ವಯಸ್ಸಿನಲ್ಲಿ ಮತ್ತಿನ ಔಷಧಿಗೆ ಬಲಿಯಾಗುತ್ತಿರುತ್ತದೆ. ಇಂತಹವರಿಗೆ ಭಿಕ್ಷೆ ನೀಡಿದಲ್ಲಿ ಸಮಾಜಘಾತಕ ಶಕ್ತಿಯನ್ನು ಬೆಳೆಸಿದಂತಾಗುತ್ತದೆ. ಈ ಮಾತನ್ನು ಕೇಳಿದಾಗ ನಾವು ಭಿಕ್ಷೆ ನೀಡಿ ತಪ್ಪು ಮಾಡಿದೆವೇನೋ ಎನಿಸುತ್ತದೆ. ನಮ್ಮ ಮಾನವೀಯ ಗುಣ ಒಂದು ತಪ್ಪಿಗೆ ಕಾರಣವಾಗುವಂತಾಗುತ್ತದೆ. ಅದಕ್ಕಾಗಿ ಇತ್ತೀಚೆಗೆ ಹಲವು ಕಡೆ **'ಭಿಕ್ಷೆ ನೀಡುವುದಾದರೆ ಆಹಾರ ನೀಡಿ, ಹಣ ನೀಡಬೇಡಿ'** ಎಂಬ ಒತ್ತಾಸೆಗಳು ಕೇಳಿಬರುತ್ತಿವೆ.

ಸಾಮಾನ್ಯವಾಗಿ ಭಿಕ್ಷೆ ಬೇಡುವವರು ಮೂರು ದಿನದಿಂದ ಏನನ್ನೂ ತಿಂದಿಲ್ಲ, ಆದ್ದರಿಂದ ಹಣ ನೀಡಿ ಎಂದೇ ಕೇಳುತ್ತಿರುತ್ತಾರೆ. ಅಂದರೆ ಅವರಿಗೆ ಹಣಕ್ಕಿಂತ ಆಹಾರ ಮುಖ್ಯವಾಗಿದೆ ಎಂದು ನಾವು ಭಾವಿಸಿ, ಹಣ ನೀಡದೆ ಆಹಾರ ಪದಾರ್ಥ ಕಲ್ಪಿಸಬೇಕಲ್ಲವೇ!? ಅವರಿಗೆ ಆಹಾರ ಬೇಡ ಎಂದಾದಲ್ಲಿ ಹಣ ನೀಡಬಾರದು ಎಂಬ ಮಾತುಗಳು ಈಗ ಹೆಚ್ಚಾಗಿ ಕೇಳಿಬರುತ್ತಿದೆ. ಭಿಕ್ಷೆ ಬೇಡುವ ನೆಪದಲ್ಲಿ ಒಂದು ಗ್ಯಾಂಗ್ ಸದಾ ತಯಾರಾಗಿರುತ್ತದೆಯಂತೆ. ಇದು ಮುಂದೆ ಸಮಾಜಘಾತುಕ ಶಕ್ತಿಯಾಗಿ ಮಾರ್ಪಡುವ ಸಂದರ್ಭಗಳು ಜಾಸ್ತಿಯಾಗಿರುತ್ತದೆ. ಆದರೆ ನಾವು ಮುಗ್ಧತೆಯಿಂದ, ಬೇಡುವವರ ದಯನೀಯ ಸ್ಥಿತಿ ಎಂದು ಭಾವಿಸಿ ಹಣ ನೀಡುತ್ತೇವೆ.

ಒಮ್ಮೆ ಹೀಗೆ ಸ್ನೇಹಿತನ ಜೊತೆಗೆ ಮೈಸೂರಿನ ಹೃದಯ ಭಾಗದಲ್ಲಿ ನಿಂತಿದ್ದಾಗ ಅಲ್ಲಿಗೆ ಒಬ್ಬ ವಯಸ್ಸಾದ ವ್ಯಕ್ತಿ ಭಿಕ್ಷೆ ಬೇಡುತ್ತಾ ಬಂದರು. ಅವರ ಸ್ಥಿತಿ ಕಂಡು ಹಣ ನೀಡಲು ಹೋದಾಗ ಸ್ನೇಹಿತ ತಡೆದ. ಅವರಿಗೆ ಭಿಕ್ಷೆ ನೀಡಿದರೆ ಅವರನ್ನು ದಾರಿ ತಪ್ಪಿಸಿದಂತಾಗುತ್ತದೆ ಎಂದ. ಅದು ಹೇಗೇ? ಎಂದಾಗ, ತೋರಿಸುತ್ತೇನೆ ನೋಡು ಎಂದ. ಭಿಕ್ಷೆ ಬೇಡುತ್ತಿದ್ದವನಿಗೆ ಹಣ ನೀಡಲಾಯಿತು. ಸ್ನೇಹಿತ ಇನ್ನೂ ಸ್ವಲ್ಪ ಹೊತ್ತು ಅಲ್ಲೇ ನಿಂತು ಭಿಕ್ಷೆ ಬೇಡಿದವನನ್ನು ಗಮನಿಸಲು ಹೇಳಿದ. ಕೆಲವೇ ನಿಮಿಷಗಳಲ್ಲಿ ಆ ವ್ಯಕ್ತಿ ಅಲ್ಲಿದ್ದ ಒಂದು ಮದ್ಯದ ಅಂಗಡಿಗೆ ಹೋಗಿ, ಕುಡಿಯುವುದನ್ನ ಕಂಡೆವು. ಆಗನ್ನಿಸಿದ್ದು ಸ್ನೇಹಿತ ಹೇಳಿದಂತೆ ಇಂತಹವರಿಗೆ ದುಡ್ಡು ನೀಡುವುದು ಸರಿಯಲ್ಲ ಎಂದು.

ನಮ್ಮಲ್ಲಿ ದಾನ ಧರ್ಮ ಮಾಡುವವರ ಸಂಖ್ಯೆ ಕಡಿಮೆ ಏನಿಲ್ಲ. ಅಯ್ಯೋ ಎಂದವರಿಗೆ ಏನಾದರೂ ನೀಡಬೇಕೆಂದು ಮನಸ್ಸು ಮಾಡುವವರು ಬಹಳ ಮಂದಿ ಇದ್ದಾರೆ. ಆದರೆ ನಾವು ಆ ರೀತಿ ಸಹಾಯ ಮಾಡುವಾಗ ಆ ಸಹಾಯಕ್ಕೆ ಅವರು ಅರ್ಹರೇ? ಎಂಬುದನ್ನು ಗಮನಿಸಬೇಕು. ಇತ್ತೀಚೆಗೆ ಕಂಡ ಮತ್ತೊಂದು ಘಟನೆ. ಒಂದು ಕುಟುಂಬಕ್ಕೆ ಬಿಪಿಎಲ್ ಕಾರ್ಡ್ ಇದೆ. ಅವರ ಕುಟುಂಬ ಸದಸ್ಯರಿಗಿಂತ ಹೆಚ್ಚಿನ ಜನರ ಹೆಸರು ಕಾರ್ಡ್‌ನಲ್ಲಿದೆ. ಹಾಗಾಗಿ ಕುಟುಂಬದ ಎಲ್ಲ ಸದಸ್ಯರಿಗೂ ಉಚಿತವಾಗಿ ಧವಸ ಸಿಗುತ್ತದೆ. ಜೊತೆಗೆ ಕೊರೊನಾ ಸಮಯದಲ್ಲಿ ಅಲ್ಲಲ್ಲಿ ಆಹಾರ ನೀಡುತ್ತಿದ್ದುದನ್ನು ಈ ಕುಟುಂಬ ಉಪಯೋಗಿಸಿಕೊಂಡಿದೆ. ಎರಡೂ ಹೊತ್ತಿಗೆ ಆಗುವಷ್ಟು ಆಹಾರ ಸಂಗ್ರಹವಾಗುತ್ತದೆ. ಮನೆಯಲ್ಲಿ ಅಡುಗೆ ಮಾಡುವ ಅಗತ್ಯವಿಲ್ಲ. ಆದರೆ ರೇಷನ್‌ನಿಂದ ತಂದ ಅಕ್ಕಿಯನ್ನು ಮಾರಿಕೊಳ್ಳುತ್ತಾರೆ. ಮನೆಯಲ್ಲಿ ಒಂದು ಕಾರು ಸಹ ಇದೆ. ಆದರೂ ಅವರು ಬಿಪಿಎಲ್ ಕಾರ್ಡುದಾರರು. ಅದರ ಬಗ್ಗೆ ದೂರು ನೀಡಿದರೆ ರಾಜಕಾರಿಣಿ ಮಧ್ಯೆ ಪ್ರವೇಶಿಸುತ್ತಾರೆ. ಏಕೆಂದರೆ ಅವರ ಓಟಿನ ಮೂಲ ಆ ಕುಟುಂಬ. ಹಾಗಾಗಿ ಸರ್ಕಾರದ ಹಣ ವೃಥಾ ವ್ಯರ್ಥವಾಗುತ್ತದೆ. ಈ ಹಣ ಎಲ್ಲಿಂದ ಬರುತ್ತದೆ? ಅದೇ ತೆರಿಗೆದಾರನ ಬೆವರಿನ ಹಣ. ಹಾಗಾದರೆ ಮೋಸ ಯಾರಿಗೆ? ಎಂದರೆ ತೆರಿಗೆದಾರನಿಗೆ. ಅಂತಹ ಬಾಬ್ತುಗಳ ಹಣ ಉಳಿದರೆ ಸರ್ಕಾರ ಇತರೆ ಅಭಿವೃದ್ಧಿ ಕೆಲಸ ಮಾಡಬಹುದು. ಇದು ಈ ನೆಲದ ನಿಯಮ ಎಂಬಂತಾಗಿದೆ.

ಸರ್ಕಾರ ಎಲ್ಲರನ್ನೂ ಸಾಕಲಾಗುವುದಿಲ್ಲ, ಹಾಗೆ ಮಾಡುವುದು ಸರ್ಕಾರದ ಕೆಲಸವೂ ಅಲ್ಲ. ಆದರೆ ದುಡಿಯಲು ಅಶಕ್ತರಾಗಿರುವವರಿಗೆ ಸಹಾಯ ಮಾಡುವುದನ್ನು ಬೇಡ ಎನ್ನಲಾಗದು. ಹಾಗೆಂದು ಎಲ್ಲವನ್ನು ಉಚಿತವಾಗಿ ನೀಡಿದರೆ ಮಾನವ ಸಂಪನ್ಮೂಲ ವ್ಯರ್ಥ ಮಾಡಿದಂತೆ. ಅಶಕ್ತರೊಡನಿರುವ ಸಶಕ್ತರನ್ನೂ ಸಾಕುವ ಹೊಣೆಗಾರಿಕೆ ಸರ್ಕಾರದ್ದಲ್ಲ. ಬದಲಿಗೆ ಅವರಿಗೆ ದುಡಿಯಲು ಉದ್ಯೋಗಾವಕಾಶ ಒದಗಿಸಬೇಕು. ನರೇಗಾದಂತಹ ಯೋಜನೆ ಉಪಯುಕ್ತ. ಗ್ರಾಮಕ್ಕೆ/ನಗರಕ್ಕೆ ಬೇಕಾದ ಕೆಲಸಗಳನ್ನು ದುಡಿಯುವವರಿಂದ ಮಾಡಿಸಿ ಅವರಿಗೆ ಕೂಲಿ ನೀಡಿ ಅವರ ಜೀವನ ನಿರ್ವಹಣೆ ಅವರೇ ಮಾಡಿಕೊಳ್ಳುವಂತೆ ಮಾಡುವುದು ಸರ್ಕಾರದ ಕೆಲಸವಾಗಬೇಕು.

ಇತ್ತೀಚೆಗೆ ಒಂದು ಶಾಲೆಗೆ ಭೇಟಿ ನೀಡುವ ಅವಕಾಶ ದೊರೆಯಿತು. ಅದು ಊಟದ ಸಮಯ. ಶಾಲೆಗೆ ಸರ್ಕಾರದ ಬಿಸಿಯೂಟ ಸರಬರಾಜಾಗುತ್ತದೆ. ಎಲ್ಲ ಮಕ್ಕಳು ಆ ಊಟ ಮಾಡುತ್ತಿದ್ದರು. ಅವರಲ್ಲಿ ಸಾಕಷ್ಟು ಮಕ್ಕಳು ಸುಶಿಕ್ಷಿತ ಹಾಗೂ ಆರ್ಥಿಕವಾಗಿ ಉತ್ತಮ ಎನ್ನಬಹುದಾದ ಕುಟುಂಬದವರೂ ಇದ್ದರು. ಶಾಲೆಯ ಶಿಕ್ಷಕ ವರ್ಗ ಎಲ್ಲ ಮಕ್ಕಳೂ ಶಾಲೆಯಲ್ಲಿ ನೀಡುವ ಬಿಸಿಯೂಟವನ್ನೇ ಮಾಡಬೇಕು ಎಂದು ಆಗ್ರಹಪಡಿಸುತ್ತಿದ್ದುದರಿಂದ ಎಲ್ಲ ಮಕ್ಕಳು ಊಟ ಮಾಡುತ್ತಿದ್ದರು. ಹೊರ ನೋಟಕ್ಕೆ ಇದು ಸರಿ ಎನ್ನಿಸುತ್ತದೆ. ಮಕ್ಕಳಲ್ಲಿ ಭೇದ ಭಾವ ಎಣಿಸಬಾರದು. ಅವರು ಹೇಗೆ ಸಮವಸ್ತ್ರ ಧರಿಸುತ್ತಾರೋ ಹಾಗೇ ಎಲ್ಲರೂ ಒಟ್ಟಿಗೆ ಊಟ ಮಾಡಬೇಕು, ಸರಿ. ಆದರೆ ಊಟದ ವೆಚ್ಚ ಭರಿಸುವವರು ಯಾರು? ಮತ್ತದೇ ಸರ್ಕಾರ. ಅದರ ಹಣ ತೆರಿಗೆದಾರರ ಹಣ. ಇದು ಯಾವ ನ್ಯಾಯ ಎನ್ನಿಸುವುದಿಲ್ಲವೇ? ಅಶಕ್ತ ವಿದ್ಯಾರ್ಥಿಗಳಿಗೆ ಊಟ ನೀಡಬೇಕು, ಸರಿ. ಆದರೆ ಉಳ್ಳವರಿಗೂ ನೀಡುವುದು ಎಷ್ಟು ಸಮರ್ಥನೀಯ? ಕೇಳಬಾರದೇ?

ಕಳೆದ ವಾರ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ಪ್ರಕರಣ ವಿಚಾರಣೆಗೆ ಬಂದಿತ್ತು ಚುನಾವಣೆಗಳ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಮತದಾರರನ್ನು ಸೆಳೆಯಲು ವಿವಿಧ ರೀತಿಯ ಉಚಿತ ಕೊಡುಗೆ ಘೋಷಿಸುವುದರ ಮೇಲೆ ನಿರ್ಬಂಧ ಹೇರಬೇಕು ಎಂಬ ಪ್ರಕರಣ ಅದು. ಇದನ್ನು ಗಂಭೀರವಾಗಿ ಪರಿಗಣಿಸಿದ ಸರ್ವೋಚ್ಚ ನ್ಯಾಯಾಲಯ, ಇಂತಹ ಪ್ರಲೋಭನೆಗಳ ಮೇಲೆ ನಿಯಂತ್ರಣ ಹೇರುವುದು ಅಗತ್ಯ ಎಂದಿತು. ಈ ರೀತಿಯ ಉಚಿತ ಘೋಷಣೆಗಳು ಗಂಭೀರ ವಿಚಾರ ಎಂದೂ ನ್ಯಾಯಾಲಯ ತಿಳಿಸಿ ಈ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟ ನಿಲುವು ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿರುವುದು ಏಕೆ? ಎಂದು ಆಶ್ಚರ್ಯ ವ್ಯಕ್ತಪಡಿಸಿತು. ರಾಜಕೀಯ ಪಕ್ಷಗಳು ಈಡೇರಿಸಲಾಗದ ಭರವಸೆ ಮತ್ತು ಉಚಿತ ವಸ್ತುಗಳ ಹಂಚಿಕೆಯ ಆಶ್ವಾಸನೆ ನೀಡುವುದಕ್ಕೆ ಕಡಿವಾಣ ಹಾಕಬೇಕು, ಈ ಬಗ್ಗೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿ ಅದಾಗಿತ್ತು. ಆದರೆ ಇಂತಹ ಅಧಿಕಾರ ಚುನಾವಣಾ ಆಯೋಗಕ್ಕೆ ಇಲ್ಲ ಎಂಬುದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿಗಳು, ಸರ್ಕಾರ ಈ ವಿಷಯವನ್ನು ಏಕೆ ಗಂಭೀರ ವಾಗಿ ಪರಿಗಣಿಸಿಲ್ಲ? ನಿಮಗಾಗದಿದ್ದರೆ ನ್ಯಾಯಾಲಯವೇ, ಉಚಿತ ಕೊಡುಗೆ ಮುಂದುವರೆಸಬೇಕೆ? ಬೇಡವೇ? ಎಂದು ನಿರ್ಧರಿಸುತ್ತದೆ ಎಂದು ಚಾಟಿ ಬೀಸಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಅರ್ಜಿಯಲ್ಲಿ ಉಚಿತ ಕೊಡುಗೆಗಳನ್ನು ಘೋಷಿಸುವ ರಾಜಕೀಯ ಪಕ್ಷಗಳ ನೋಂದಣಿಯನ್ನು ರದ್ದುಪಡಿಸಬೇಕು ಅಥವಾ ಅವುಗಳ ಚಿಹ್ನೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಕೋರಲಾಗಿದೆ. ವಿಚಾರಣೆ ಮುಂದಕ್ಕೆ ಹೋಗಿದೆ.

ಇತ್ತೀಚೆಗೆ ಎಲ್ಲದಕ್ಕೂ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವುದು ಹೆಚ್ಚಾದಂತೆ ಕಂಡುಬರುತ್ತದೆ. ಈ ವಿಷಯ ಸರ್ಕಾರಗಳಿಗೆ ಗೊತ್ತಿಲ್ಲ ಎಂದಲ್ಲ. ಆದರೆ ತಾನು ಈ ಬಗ್ಗೆ ಏನಾದರೂ ಕಠಿಣ ನಿಲುವು ತೆಗೆದುಕೊಂಡರೆ ಇತರೆ ರಾಜಕೀಯ ಪಕ್ಷಗಳು ಅದನ್ನು ಬಂಡವಾಳ ಮಾಡಿಕೊಂಡು ತನ್ನ ವಿರುದ್ಧ ಜನಾಂದೋಲನ ನಡೆಸುತ್ತವೆ. ಹಾಗಾದರೆ ಮುಂದೆ ನಾವು ಅಧಿಕಾರಕ್ಕೆ ಬರಲಾಗುವುದಿಲ್ಲ ಎಂಬ ಭಯ ಆಡಳಿತಾರೂಢ ಸರ್ಕಾರಗಳಿಗಿದೆ. ಬೇಕಿದ್ದರೆ ಮುಂದೆ ಬರುವವರು ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲಿ, ನಾವು ಕೆಟ್ಟ ಹೆಸರು ತೆಗೆದುಕೊಳ್ಳುವುದು ಬೇಡ ಎಂದು ಭಾವಿಸುವುದನ್ನು ಕಾಣುತ್ತೇವೆ. ದೇಶದ ಅಭಿವೃದ್ಧಿಗಾಗಿ ರಚಿತವಾಗುವ ಸರ್ಕಾರ ದೃಢ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಅವರು ನೀಡುವ ಓಟನ್ನು ಗಮನದಲ್ಲಿರಿಸಿಕೊಂಡು ಉಚಿತ ಕೊಡುಗೆಗಳನ್ನು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿ, ಅದಕ್ಕೆ ಜೋತು ಬಿದ್ದ ಜನರಿಂದ ಮತ ಪಡೆದು ಅಧಿಕಾರಕ್ಕೆ ಬಂದ ನಂತರ ಅದನ್ನು ಈಡೇರಿಸುವುದು ಅನಿವಾರ್ಯವಾಗುತ್ತದೆ. ಇದಕ್ಕೆ ಸರ್ಕಾರದ ಹಣ ಸಾಲದಾದಾಗ ಸಾಲ ತಂದಾದರೂ ಅದನ್ನು ಈಡೇರಿಸುತ್ತವೆ. ಆದರೆ ಯಾವ ಸಂಸ್ಥೆಯೂ ಸಾಲವನ್ನು ಉಚಿತವಾಗಿ ನೀಡುವುದಿಲ್ಲ. ಅದಕ್ಕೆ ಬಡ್ಡಿ ವಿಧಿಸುತ್ತವೆ. ಕೊನೆಗೆ ಆದಾಯಕ್ಕಿಂತ ಬಡ್ಡಿಯ ಉರುಳು ಹೆಚ್ಚಾದಂತೆ ದೇಶದಲ್ಲಿ, ರಾಜ್ಯಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗುವುದಿಲ್ಲ. ಅಲ್ಲದೇ ಅನೇಕ ಸಲ ಸಾಲ ಮಾಡಿದ ಸರ್ಕಾರ ಮುಂದೆ ಅಧಿಕಾರಕ್ಕೆ ಬರುವುದಿಲ್ಲ. ಆಗ ಹೊಸದಾಗಿ ಅಧಿಕಾರಕ್ಕೆ ಬರುವ ಸರ್ಕಾರ ಸಾಲ ಮರುಪಾವತಿಯ ಹೊಣೆ ಹೊರಬೇಕಾಗುತ್ತದೆ. ಕೊನೆಗೆ ಬಡ್ಡಿಯನ್ನಾದರೂ ಕಟ್ಟಬೇಕಾಗುತ್ತದೆ. ಇದು ಸರ್ಕಾರಕ್ಕೆ ದೊಡ್ಡ ಹೊರೆ. 'ಸಾಲವನು ಕೊಂಬಾಗ ಹಾಲೋಗರ ಉಂಡಂತೆ' ಎಂಬಂತೆ ಸಿಕ್ಕಸಿಕ್ಕಲ್ಲೆಲ್ಲಾ ಸಾಲ ಮಾಡುವುದು ಹೊಣೆಗೇಡಿತನ ಎನಿಸುವ ತನಕ ಈ ಜಾಯಮಾನ ಮುಂದುವರೆಯುತ್ತದೆ ಎನ್ನಿಸುತ್ತದೆ.

ಮೈಸೂರಿನ ಹೆಸರಾಂತ ಉದ್ಯಮಿ ಜಗನ್ನಾಥ ಶೆಣೈ ಅವರಿಂದ ಉತ್ತರಾಖಂಡ ಕುರಿತ ಪುಸ್ತಕ ಬಿಡುಗಡೆ

ಈ ದೇಶದ ಪ್ರಜೆಯಾಗಿ ಸಮಾಜಕ್ಕೆ ಏನಾದರೂ ಕೊಡುಗೆ ನೀಡುವ ತುಡಿತ ಇರಬೇಕು: ಶೆಣೈ

ಮೈಸೂರು, ಜು.30(ಜಿಎ)–ದೇಸಿರಾಜು ಅಸೋಸಿಯೇಟ್ಸ್ ಲಲಿತಾರಾವ್ ಚಾರಿಟೆಬಲ್ ಟ್ರಸ್ಟ್(ಡಿಎಲ್‌ಆರ್‌ಸಿಟಿ) ವತಿಯಿಂದ ಪ್ರಕಟಿಸಲಾಗಿರುವ ಉತ್ತರಾಖಂಡ ಕುರಿತ 'Where The Gods Dwell' ಪುಸ್ತಕವನ್ನು ಹೆಸರಾಂತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಬಿಡುಗಡೆ ಮಾಡಿದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಪುಸ್ತಕದ ಮೊದಲ ಪ್ರತಿಯನ್ನು ಉತ್ತರಾಖಂಡ ಆಸ್ಕೋಟ್ ರಾಜವಂಶಸ್ಥ ರಾಜ್ವಾಡ್ ಭಾನುರಾಜ್ ಸಿಂಗ್ ಪಾಲ್ ಸ್ವೀಕರಿಸಿದರು.

ಬಳಿಕ ಎಂ.ಜಗನ್ನಾಥ್ ಶೆಣೈ ಮಾತನಾಡಿ, ಪ್ರಪಂಚದ ಅನೇಕ ರಾಷ್ಟ್ರಗಳಿಗೆ ಸಂಕಷ್ಟ ಸಮಯದಲ್ಲಿ ನಮ್ಮ ದೇಶ ಸಹಾಯ, ಸಹಕಾರ ನೀಡುತ್ತಿದೆ. ಇಂತಹ ದೇಶದ ಪ್ರಜೆಗಳಾದ ನಮಗೂ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ತುಡಿತ ಇರುತ್ತದೆ. ನಾನೂ ಅದನ್ನು ಮೈಗೂಡಿಸಿಕೊಂಡಿರುವುದಾಗಿ ಹೇಳಿದರು.

ದೇಸಿರಾಜು ಅಸೋಸಿಯೇಟ್ಸ್ ಲಲಿತಾರಾವ್ ಚಾರಿಟೆಬಲ್ ಟ್ರಸ್ಟ್(ಡಿಎಲ್‌ಆರ್‌ಸಿಟಿ) ಮೂಲಕ ಸಮಾಜಮುಖಿ



ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಉತ್ತರಾಖಂಡ ಕುರಿತ **'Where The Gods Dwell'** ಪುಸ್ತಕವನ್ನು ಹೆಸರಾಂತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಉತ್ತರಾಖಂಡದ ಆಸ್ಕೋಟೆ ರಾಜವಂಶಸ್ಥ ರಾಜ್ವಾಡ್ ಭಾನುರಾಜ್ ಸಿಂಗ್ ಪಾಲ್, ಉದ್ಯಮಿ ರಾಘವೇಂದ್ರ ಪ್ರಸಾದ್ ಹಾಗೂ ಟ್ರಸ್ಟಿಗಳು ಇದ್ದಾರೆ.

ಕೆಲಸಗಳನ್ನು ಮಾಡುತ್ತಿದ್ದಾರೆ. ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ನಾವೂ ಈ ಟ್ರಸ್ಟ್ ಮೂಲಕ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಅವರೊಟ್ಟಿಗೆ ಇದ್ದೇವೆ. ಇವರಂತೆ ಅನೇಕ ಸಂಸ್ಥೆಗಳು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿವೆ. ಅನೇಕರ ಬಳಿ ಹಣವಿದೆ. ಆದರೆ, ಅವರಿಗೆ ಈ ರೀತಿ ಕಾರ್ಯಗಳಿಗೆ ನೀಡಬೇಕು ಎಂದು ಅನ್ನಿಸುವುದೇ ಇಲ್ಲ. ಈ ಭೂಮಿಯಿಂದ ನಿರ್ಗಮಿಸುವಾಗ ನಾವು ಸಮಾಜಕ್ಕೆ ಏನು ಕೊಡುಗೆ ನೀಡಿದ್ದೇವೆ ಎಂಬುದು ಬಹಳ ಮುಖ್ಯ ಎಂದರು.

ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ದೇಸಿರಾಜು ಅಸೋಸಿಯೇಟ್ಸ್ ಲಲಿತಾರಾವ್ ಚಾರಿಟೆಬಲ್ ಟ್ರಸ್ಟ್(ಡಿಎಲ್‌ಆರ್‌ಸಿಟಿ) ಸ್ಥಾಪನೆ ಮಾಡಲಾಯಿತು. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಟ್ರಸ್ಟ್ ಮೂಲಕ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ ರಾವ್ ಹೇಳಿದರು. ನಮ್ಮ ಸಂಸ್ಥೆಯು ಚೆನ್ನೈ, ಒಮನ್, ಮೈಸೂರು ಮತ್ತು ಉತ್ತರಖಂಡದಲ್ಲಿದ್ದು, ಇಲ್ಲಿನ ಹೆರಿಟೇಜ್ ಡಾಕ್ಯುಮೆಂಟರಿ ಮಾಡಬೇಕು ಎಂದು ನಿರ್ಧರಿಸಿ ಮೂರು ವರ್ಷಗಳಿಂದ ಅದರ ಕಾರ್ಯಗಳು ನಡೆಯುತ್ತಿವೆ. ಅದಕ್ಕೆ ಪೂರಕವಾಗಿ ಇಂದು 'Where The Gods Dwell' ಪುಸ್ತಕ ಬಿಡುಗಡೆಯಾಗಿದೆ. ಬರೆಯುವುದನ್ನು ಹೆಚ್ಚು ಜನ ಓದುವುದಿಲ್ಲ ಎಂದು ತಿಳಿದು ಸಂಪೂರ್ಣ ಫೋಟೋಗಳ ಮೂಲಕ ಪುಸ್ತಕ ಮಾಡಲಾಗಿದೆ. ಆರಂಭದಲ್ಲಿ ಅಲ್ಲಿನ ಕಟ್ಟಡ ವಿನ್ಯಾಸ ಮಾತ್ರ ಮಾಡಬೇಕು ಎಂದು ಅನ್ನಿಸಿತ್ತು. ಆದರೆ, ಉತ್ತರಖಂಡದ ಅದ್ಭುತ ಸ್ಥಳಗಳು, ಕುಮಾನ್, ಅದರ ನೈಸರ್ಗಿಕ ವೈಭವ, ವಾಸ್ತುಶಿಲ್ಪದ ಪರಂಪರೆ, ದೈವಿಕ ಮತ್ತು ಆಧ್ಯಾತ್ಮಿಕತೆ, ಸಂಸ್ಕೃತಿ ಮತ್ತು ಅದ್ಭುತ ಗುಡ್ಡಗಾಡುಗಳನ್ನು ನೋಡಿ ಅವೆಲ್ಲವನ್ನೂ ಈ ಪುಸ್ತಕದಲ್ಲಿ 4 ತಿಂಗಳಲ್ಲಿ ಮುದ್ರಣ ಮಾಡಲಾಗಿದೆ ಎಂದು ಪುಸ್ತಕದ ಕುರಿತು ವಿವರಿಸಿದರು.

> ಮೈಸೂರಿಗೂ ಉತ್ತರಾಖಂಡಕ್ಕೂ ಅವಿನಾಭಾವ ಸಂಬಂಧವಿದೆ. 1931ರಲ್ಲಿ ನಮ್ಮ ತಾತಾ ಉತ್ತರಾಖಂಡದ ಮಹಾರಾಜರಾಗಿ ಆಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿ ಮೈಸೂರಿನ ಮಹಾರಾಜ ಕೃಷ್ಣರಾಜ ಒಡೆಯರ್ ಅವರು ಕೈಲಾಸ್ ಮಾನಸ ಸರೋವರ ಯಾತ್ರೆಯಲ್ಲಿ ಭಾಗವಹಿಸಿದ್ದರು. ಅವರಿಗೆ 75 ಸೈನಿಕರ ರಕ್ಷಣೆ ಒದಗಿಸಿದ್ದೆವು. ನನ್ನದೂ ನಾಲ್ಕನೇ ತಲೆಮಾರು. ಅದನ್ನು ಇಂದು ನೆನಪಿಸಿಕೊಳ್ಳುತ್ತಿದ್ದರೆ ಮೈ ರೋಮಾಂಚನವಾಗುತ್ತಿದೆ. ಹಣವಿದ್ದರೆ ಜನರನ್ನು ಗಳಿಸಬಹುದು ಆದರೆ, ಆಶೀರ್ವಾದ ಪಡೆಯುವುದು ಮುಖ್ಯ. ನೀವೆಲ್ಲರೂ ನಮ್ಮ ಜನತೆ ಮತ್ತು ಕುಟುಂಬಕ್ಕೆ ಆಶೀರ್ವಾದ ಮಾಡಬೇಕು.
>
> –ರಾಜ್ವಾಡ್ ಭಾನುರಾಜ್ ಸಿಂಗ್ ಪಾಲ್, ಉತ್ತರಾಖಂಡದ ಆಸ್ಕೋಟೆ ರಾಜವಂಶಸ್ಥ

ಗೃಹ ಸಚಿವ ಆರಗ ಜ್ಞಾನೇಂದ್ರ ನಿವಾಸಕ್ಕೆ ಎಬಿವಿಪಿ ಕಾರ್ಯಕರ್ತರ ಮುತ್ತಿಗೆ

ಬೆಂಗಳೂರು,ಜು.30–ಸುಳ್ಯ ಬಳಿ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಎಬಿವಿಪಿ ಕಾರ್ಯಕರ್ತರು ಇಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಜಯಮಹಲ್ ನಿವಾಸದ ಮುಂದೆ ಪ್ರತಿಭಟನೆ ನಡೆಸಿದರು. ಈ ವೇಳೆ ಪೊಲೀಸರು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿದರಲ್ಲದೆ, 40 ಮಂದಿಯನ್ನು ವಶಕ್ಕೆ ಪಡೆದರು.

ಪ್ರವೀಣ್ ಹತ್ಯೆಗೆ ಸಂಬಂಧಿಸಿದಂತೆ ಗೃಹ ಸಚಿವರ ಗಮನ ಸೆಳೆಯುವ ಸಲುವಾಗಿ ಎಬಿವಿಪಿ ಕಾರ್ಯಕರ್ತರು ಗೃಹ ಸಚಿವರ ಮನೆಗೆ ಮುತ್ತಿಗೆ ಹಾಕಿ ಗೇಟ್‌ನಲ್ಲಿ ಮಲಗಿ ಪ್ರತಿಭಟನೆ ನಡೆಸಿದರು. 'ಬಿಜೆಪಿ ಸರ್ಕಾರ ಇದ್ದರೂ ಹಿಂದುತ್ವವಾದಿಗಳ ಹತ್ಯೆಯಾಗುತ್ತಿದೆ, ಹಿಂದುತ್ವವಾದಿಗಳ ರಕ್ಷಣೆ ಮಾಡದ ಸರ್ಕಾರಕ್ಕೆ ಧಿಕ್ಕಾರ, ಅಂದು ಹರ್ಷ... ಇಂದು ಪ್ರವೀಣ... ನಾಳೆ ನಾವು' ಎಂದು ಘೋಷಣೆ ಕೂಗುತ್ತಾ, ಗೃಹ ಸಚಿವರ ಮನೆಗೆ ನುಗ್ಗಲು ಯತ್ನಿಸಿದರು. ಪೊಲೀಸರು ಕಾರ್ಯಕರ್ತರನ್ನು ತಡೆಯಲು ಹರಸಾಹಸಪಟ್ಟು ಕೊನೆಗೆ ವಿಫಲರಾದರು. ಗೃಹ ಸಚಿವರ ಕಚೇರಿಗೆ ನುಗ್ಗಿದ ಎಬಿವಿಪಿ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿ, ಕೆಲವರನ್ನು ವಶಕ್ಕೆ ಪಡೆದರು. ಈ ವೇಳೆ ಪೊಲೀಸ್ ವಾಹನದ ಮುಂದೆ ಕಾರ್ಯಕರ್ತರು ಧರಣಿ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್, ಇಂದು ಬೆಳಗ್ಗೆ 9.30ರ ಸುಮಾರಿನಲ್ಲಿ ಕೆಲವು ಎಬಿವಿಪಿ ಕಾರ್ಯಕರ್ತರು ಏಕಾಏಕಿ ಗೃಹ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ಮುಂದಾದಾಗ ಪೊಲೀಸರು ಅವರನ್ನು ತಡೆದರು. ಆದರೆ ಕಾರ್ಯಕರ್ತರು ಅದನ್ನು ಲೆಕ್ಕಿಸದೇ ಗೇಟ್ ತೆರೆದು ಮನೆಯೊಳಗೆ ಪ್ರವೇಶಿಸಲು ಮುಂದಾದಾಗ ಪೊಲೀಸರು ಅನಿವಾರ್ಯವಾಗಿ ಅವರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಈಗಾಗಲೇ 40 ಮಂದಿಯನ್ನು ದಸ್ತಗಿರಿ ಮಾಡಿದ್ದೇವೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕೇಂದ್ರೀಯ ವಿದ್ಯಾಲಯ, ಮಾದಾಪುರ ಪೋಸ್ಟ್ ಚಾಮರಾಜನಗರ -571313

☎: 08226-297179

केन्द्रीय विद्यालय,मादपुर पोस्ट,चामराजनगर-५७१३१३

KENDRIYA VIDYALAYA, MADAPURA POST,CHAMARAJANAGAR-571313

E-mail: kvchamarajanagara@gmail.com Website: https://chamrajnagar.kvs.ac.in

KV CODE: 2284	Station Code: 772	Region Code: 02

ಪ್ರವೇಶಾತಿ ಸೂಚನೆ–2022–23

ತರಗತಿ XI – ವಿಜ್ಞಾನ ವಿಭಾಗ (ಪಿ.ಸಿ.ಎಂ.ಬಿ / ಪಿ.ಸಿ.ಎಂ.ಸಿ)

1. ನೋಂದಣಿ ನಮೂನೆಯನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ: 01.08.2022 ರಿಂದ 08.08.2022 ರವರೆಗೆ ಸಂಜೆ 3 ಗಂಟೆಯವರೆಗೆ
2. ಆಸಕ್ತ ಅಭ್ಯರ್ಥಿಗಳು ನೋಂದಣಿ ನಮೂನೆ ಮತ್ತು ಅರ್ಹತಾ ಮಾನದಂಡಗಳನ್ನು ಡೌನ್ಲೋಡ್ ಮಾಡಲು ವಿದ್ಯಾಲಯ ವೆಬ್ಸೈಟ್ **https://chamrajnagar.kvs.ac.in** ಗೆ ಭೇಟಿ ನೀಡಬಹುದು.
3. ಭರ್ತಿ ಮಾಡಿದ ನೋಂದಣಿ ಅರ್ಜಿಯ ಜೊತೆಗೆ ಮಾರ್ಕ್ಸ್ ಸ್ಟೇಟ್ಮೆಂಟ್(ಪ್ರತಿಗಳು) ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ದಿನಾಂಕ 08.08.2022ರ ಒಳಗೆ ಕಚೇರಿಗೆ ತಲುಪಿಸತಕ್ಕದ್ದು

4 ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

प्रवेश सूचना 2022-23

कक्षा ग्यारहवीं - विज्ञान विभाग(पी.सी.एम.बी/पी.सी.एम.सी)

1. पंजीकरण फॉर्म जमा करने की तिथि और समय: 01.08.2022 से 08.08.2022 शाम 3 बजे तक।
2. इच्छुक उम्मीदवार पंजीकरण फॉर्म और पात्रता मानदंड डाउनलोड करने के लिए विद्यालय की वेबसाइट https://chamrajnagar.kvs.ac.in पर जा सकते हैं।
3. सभी प्रकार से मार्क्स स्टेटमेंट भरे हुए पंजीकरण फॉर्म (स्कैन की गई प्रतियां) के साथ में 08.08.2022 को या उससे पहले कार्यालय में प्रस्तुत करें|
4. देर से आवेदन पर विचार नहीं किया जाएगा।

ADMISSION NOTICE–2022-23

CLASS XI- SCIENCE STREAM(PCMB/PCMC)

1. Date & Time for submission of Registration Form: 01.08.2022 to 08.08.2022 upto 3 PM.
2. Interested candidates may visit Vidyalaya Website https://chamrajnagar.kvs.ac.in for downloading the Registration Form and Eligibility criteria
3. Duly filled Registration Forms along with Marks statement and related documents should be submitted to office on or before 08.08.2022.
4. **Late application shall not be entertained**

Fee Details: 1. Admission fee-25/-(for Non KV students)
2. for three months
a. Tuition Fee: 1200/-
b. Computer fee: 300/-
c. Computer Science fee: 450/-(only for computer Science Students)
d. VVN fee: 1500/-

Sd/- Principal I/C

ಮೈಸೂರು ಮಿತ್ರ ಭಾನುವಾರ 31 ಜುಲೈ 2022

ಆರ್ಥಿಕತೆಯ ಜೀವಾಳ: ಜಿಟಿಡಿ

ಮೂರನೇ ಪುಟದಿಂದ

ಷೇರು ಬಂಡವಾಳ, 1 ಲಕ್ಷ 56 ಸಾವಿರ ಕೋಟಿ ರೂ. ದುಡಿಯುವ ಬಂಡವಾಳ, 1 ಲಕ್ಷ 15 ಸಾವಿರ ಕೋಟಿ ರೂ. ಠೇವಣಿ ಇದ್ದು, ಸಹಕಾರ ಸಂಸ್ಥೆಗಳ ಮೂಲಕ 4 ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಸಲಾಗಿದೆ ಎಂದರು. ಕಳೆದ ವರ್ಷ ಕೇಂದ್ರ ಸರ್ಕಾರ ಸಹಕಾರ ವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ ಕೇಂದ್ರದಲ್ಲಿ ಸಹಕಾರ ಸಚಿವಾಲಯ ರಚಿಸಿ ಸಹಕಾರಿ ಮುಖಂಡರು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ಜವಾಬ್ದಾರಿ ವಹಿಸಿರುವುದು ಸ್ವಾಗತಾರ್ಹ ಎಂದರು. ಅಮುಲ್ ಸಂಸ್ಥೆ ಕಳೆದ ಸಾಲಿನಲ್ಲಿ 61 ಸಾವಿರ ಕೋಟಿ ವ್ಯವಹಾರ ನಡೆಸಿದ್ದು, ಗುಜರಾತ್ ರಾಜ್ಯವೊಂದರಲ್ಲೇ ಒಂದು ಲಕ್ಷ ಕೋಟಿ ರೂ.ಗೂ ಅಧಿಕ ವ್ಯವಹಾರ ನಡೆದಿರುವುದು ಹೆಮ್ಮೆಯ ವಿಚಾರವಾಗಿದೆ. ಹಾಲು ಉತ್ಪಾದನೆಯಲ್ಲಿ ಗುಜರಾತ್ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದ್ದರೆ, ಕರ್ನಾಟಕ 2ನೇ ಸ್ಥಾನದಲ್ಲಿದೆ. ಗುಜರಾತ್‌ನಲ್ಲಿ 36 ಲಕ್ಷ, ಕರ್ನಾಟಕದಲ್ಲಿ 26 ಲಕ್ಷ ರೈತರು ಹಾಲು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ 15 ಸಾವಿರಕ್ಕೂ ಅಧಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು, 16 ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಕೆಎಂಎಫ್ ಸೇರಿ 20 ಸಾವಿರ ಕೋಟಿ ರೂ.ಗಳಿಗೂ ಅಧಿಕ ವ್ಯವಹಾರ ನಡೆಸುತ್ತಿವೆ. ಹುಣಸೂರಿನಲ್ಲಿ ಇದೀಗ 200ನೇ ಹಾಲು ಉತ್ಪಾದಕರ ಕೇಂದ್ರ ಸ್ಥಾಪನೆಯಾಗಿದ್ದು, 17588 ಸದಸ್ಯರು ಪ್ರತಿ ತಿಂಗಳು 44.78 ಲಕ್ಷ ರೂ. (ವಾರ್ಷಿಕ 14 ಕೋಟಿ ರೂ.) ವಹಿವಾಟು ನಡೆಸುತ್ತಿದ್ದಾರೆ. ಪ್ರತಿಯೊಬ್ಬ ಸಹಕಾರಿ ಸದಸ್ಯರು ಇದನ್ನು ಅರ್ಥ ಮಾಡಿಕೊಂಡು ಸಹಕಾರಿ ಸಂಘಗಳ ಅಗತ್ಯತೆ ಅರಿಯಬೇಕು ಎಂದರು.

ಪ್ರತಿವರ್ಷ 15 ಲಕ್ಷ ಕೋಟಿ ನೆರವು: ಪ್ರತಿವರ್ಷ ದೇಶದಲ್ಲಿ 15 ಲಕ್ಷ ಕೋಟಿ ರೂ.ಗೂ ಅಧಿಕ ಆರ್ಥಿಕ ನೆರವನ್ನು ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕ್‌ಗಳು, ಅಪೆಕ್ಸ್ ಬ್ಯಾಂಕ್ ಮತ್ತು ರಾಷ್ಟ್ರೀಕೃತ, ವಾಣಿಜ್ಯ ಬ್ಯಾಂಕುಗಳ ಮೂಲಕ ನೀಡಲಾಗುತ್ತಿದೆ. ವಿಶೇಷವಾಗಿ ಸಹಕಾರ ಸಂಸ್ಥೆಗಳು ರೈತರಿಗೆ ಸುಲಭವಾಗಿ ಸಾಲ ನೀಡುವ ವ್ಯವಸ್ಥೆ ಅಳವಡಿಸಿಕೊಂಡಿದ್ದು, ರಾಜ್ಯ ಸರ್ಕಾರ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 3 ಲಕ್ಷ ರೂ. ಅಲ್ಪಾವಧಿ ಸಾಲ ಮತ್ತು 10 ಲಕ್ಷ ರೂ.ವರೆಗೆ ಮಧ್ಯಮಾವಧಿ ಸಾಲ ನೀಡುತ್ತಿದೆ ಎಂದರು.

ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, 21 ಡಿಸಿಸಿ ಬ್ಯಾಂಕುಗಳು ಮತ್ತು 5 ಸಾವಿರಕ್ಕೂ ಅಧಿಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಈ ವರ್ಷ 33 ಲಕ್ಷ ರೈತರಿಗೆ ಅಂದಾಜು 24 ಸಾವಿರ ಕೋಟಿ ಕೃಷಿ ಸಾಲ ನೀಡಲಾಗುತ್ತಿದೆ. ರೈತರು ಸಹಕಾರ ಸಂಘಗಳ ಮೂಲಕ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಾವಲಂಬಿಗಳಾಗುವುದರ ಮೂಲಕ ಉತ್ತಮ ಜೀವನ ನಡೆಸಲು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ಕೆಎಂಎಫ್‌ನಿಂದ 96 ಲಕ್ಷ ಲೀಟರ್ ಹಾಲು ಸಂಗ್ರಹ: ಈ ವೇಳೆ ವರ್ಗೀಸ್ ಕುರಿಯನ್ ಮತ್ತು ಎಂ.ವಿ.ಕೃಷ್ಣಪ್ಪ ಅವರನ್ನು ಮತ್ತೊಮ್ಮೆ ಸ್ಮರಿಸುತ್ತೇನೆ. ಪ್ರತಿದಿನ ಕೆಎಂಎಫ್ ಅಂದಾಜು 96 ಲಕ್ಷ ಲೀಟರ್ ಹಾಲು ಸಂಗ್ರಹಣೆ ಜೊತೆಗೆ 27 ಕೋಟಿ ರೂ.ಗಳನ್ನು ರೈತರಿಗೆ ಬಟವಾಡೆ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಅಮುಲ್ ಮಾದರಿಯಲ್ಲಿ ಕೆಎಂಎಫ್ ಕೂಡ ಹಾಲು, ಮೊಸರು, ಮಜ್ಜಿಗೆ ಮಾರಾಟದ ಜೊತೆಗೆ ಹೆಚ್ಚುವರಿ ಹಾಲನ್ನು ಹಾಲಿನ ಪುಡಿಯಾಗಿ ತಯಾರಿಸಿ, ಕ್ಷೀರ ಭಾಗ್ಯ ಯೋಜನೆಯಡಿಯಲ್ಲಿ ರಾಜ್ಯದ ಅಂದಾಜು 64 ಲಕ್ಷ ಶಾಲಾ ಮಕ್ಕಳು ಮತ್ತು 39 ಲಕ್ಷ ಅಂಗನವಾಡಿ ಮಕ್ಕಳಿಗೆ ಪೌಷ್ಟಿಕಾಂಶಭರಿತ ಹಾಲಿನ ಪುಡಿಯನ್ನು ರಾಜ್ಯ ಸರ್ಕಾರದ ನೆರವಿನೊಂದಿಗೆ ವಿತರಿಸುತ್ತಿರುವುದು ಮತ್ತು 145ಕ್ಕೂ ಅಧಿಕ ಬಗೆಯ ಸಿಹಿ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವುದರಿಂದ ರಾಜ್ಯದ ಹೈನುಗಾರರು ಆರ್ಥಿಕವಾಗಿ ಚೈತನ್ಯಶೀಲರಾಗಿದ್ದಾರೆ. ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಹಾಲು ಉತ್ಪಾದನೆ ಒಂದು ಕೋಟಿ ಲೀಟರ್ ದಾಟಲಿದ್ದು, ವಿಶೇಷವಾಗಿ ಹೈನುಗಾರಿಕೆಯಲ್ಲಿ ಮಹಿಳೆಯರು ತೊಡಗಿಸಿಕೊಂಡಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ ಎಂದರು.

1524 ಪಟ್ಟಣ ಸಹಕಾರ ಬ್ಯಾಂಕ್: ಪಟ್ಟಣ ಪ್ರದೇಶಗಳ ಸಹಕಾರಿಗಳಿಗೆ ಅನುಕೂಲವಾಗುವಂತೆ ದೇಶದಲ್ಲಿ 1524 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, 3 ಲಕ್ಷ ಕೋಟಿ ರೂ. ಠೇವಣಿ ಹೊಂದಿವೆ. ಹಾಗೆಯೇ, ರಾಜ್ಯದಲ್ಲಿ 263 ಪಟ್ಟಣ ಸಹಕಾರ ಬ್ಯಾಂಕುಗಳು 45 ಸಾವಿರ ಕೋಟಿ ರೂ. ಠೇವಣಿ ಹೊಂದಿದ್ದು, 34 ಸಾವಿರ ಕೋಟಿ ರೂ. ಸಾಲ ವಿತರಿಸಿ ಉತ್ತಮ ಸೇವೆ ನೀಡುತ್ತಿವೆ. ಕೃಷಿಗೆ ಪೂರಕವಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ನೇತೃತ್ವದಲ್ಲಿ ರೈತರಿಗೆ ಬೇಡಿಕೆಗೆ ತಕ್ಕಂತೆ ರಸಗೊಬ್ಬರಗಳನ್ನು ಸರಬರಾಜು ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರದ ಪ್ರತಿಷ್ಠಿತ ಸಹಕಾರ ಸಂಸ್ಥೆ ಇಫ್ಕೋ ವಾರ್ಷಿಕ 95 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಉತ್ಪಾದನೆ ಮಾಡುತ್ತಿದ್ದು, ವಾರ್ಷಿಕ 60 ಸಾವಿರ ಕೋಟಿ ರೂ. ವ್ಯವಹಾರ ನಡೆಸುತ್ತಿದೆ. ಹಾಗೆಯೇ ಕ್ರಿಬ್ಕೋ ಸಂಸ್ಥೆಯು 50 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಉತ್ಪಾದನೆ ಮತ್ತು ಬಿತ್ತನೆ ಬೀಜಗಳ ಸರಬರಾಜು ಮಾಡುವುದರ ಮೂಲಕ ವಾರ್ಷಿಕ 15 ಸಾವಿರ ಕೋಟಿ ರೂ. ವಹಿವಾಟು ನಡೆಸುತ್ತಿದೆ ಎಂದು ತಿಳಿಸಿದರು.

ಹುಣಸೂರಲ್ಲಿ ದಾಖಲೆ ಬರೆದ ಸಹಕಾರ ಸಮ್ಮಿಲನ

●ಕಣ್ಣು ಹಾಯಿಸಿದಷ್ಟು ಕಿಲೋಮೀಟರ್‌ಗಳುದ್ದದ ವರ್ಣರಂಜಿತ ಮೆರವಣಿಗೆ ●ಬಣ್ಣ ಬಣ್ಣದ ಸಮವಸ್ತ್ರ ಧರಿಸಿದ 200 ಹಾಲು ಉತ್ಪಾದಕ ಸಂಘಗಳ ಸಾವಿರಾರು ಸದಸ್ಯರ ಅತ್ಯುತ್ಸಾಹ ●ನಾನಾ ಕಲಾ ತಂಡಗಳ ಹಿಮ್ಮೇಳ; ದಾಖಲೆ ಪುಟ ಸೇರಿದ ಮುನೇಶ್ವರ ಕಾವಲ್ ಮೈದಾನ ●ಸಹಕಾರಿ ಮಹಿಳಾ ಶಕ್ತಿ ಕಂಡು ಬೆಕ್ಕಸ ಬೆರಗಾದ ಸಂಸದ ಪ್ರತಾಪ್ ಸಿಂಹ; ಸಹಕಾರಿ ಧುರೀಣ ಜಿಟಿಡಿ, ಅವರ ಪುತ್ರ ಹರೀಶ್‌ಗೌಡ, ಮೈಮುಲ್ ಅಧ್ಯಕ್ಷ ಪ್ರಸನ್ನರ ಸಂಘಟನಾ ಶಕ್ತಿಗೆ ಶ್ಲಾಘನೆ





ಹುಣಸೂರು, ಜು. 30– ವರ್ಣರಂಜಿತ ಮೆರವಣಿಗೆ... ಸಾಂಸ್ಕೃತಿಕ ಕಲಾ ತಂಡಗಳ ಮೆರಗು... ಮುನೇಶ್ವರ ಕಾವಲ್ ಮೈದಾನದಲ್ಲಿ ಬೃಹತ್ ಸಮಾವೇಶ... ಒಟ್ಟಾರೆ ಹುಣಸೂರಿನಲ್ಲಿ ಶನಿವಾರ ಸಹಕಾರಿಗಳದ್ದೇ ಕಲರವ... ಇದು ಎಂಸಿಡಿಸಿಸಿ ಬ್ಯಾಂಕ್ ಮತ್ತು ಮೈಮುಲ್ ಜಂಟಿಯಾಗಿ ಏರ್ಪಡಿಸಿದ್ದ "ಸಹಕಾರ ಸಮ್ಮಿಲನ" ಕಾರ್ಯಕ್ರಮ ಅದ್ಧೂರಿಯಾಗಿ ನೆರವೇರಿತು.

ಇಂದು 200ನೇ ಹಾಲು ಉತ್ಪಾದಕ ಸಂಘ ಉದ್ಘಾಟನೆಯಾಯಿತು. ಅಲ್ಲದೆ ಹಲವು ಸಂಘಗಳ ಕಟ್ಟಡ ಹಾಗೂ ಬಿಎಂಸಿ ಕೇಂದ್ರಗಳ ಉದ್ಘಾಟನೆ, ಎಂಸಿಡಿಸಿಸಿ ಬ್ಯಾಂಕ್‌ನ ಮೊಬೈಲ್ ಆ್ಯಪ್ ಬಿಡುಗಡೆ ಹತ್ತು ಹಲವು ಕಾರ್ಯಕ್ರಮಗಳನ್ನು ಒಂದೇ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೂ ಮುನ್ನಾ, ಹುಣಸೂರು ಪಟ್ಟಣದ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಸಾವಿರಾರು ಸಹಕಾರಿಗಳು ಜಮಾಯಿಸಿದ್ದರು. ಅದರಲ್ಲೂ ಮಹಿಳಾ ಸಹಕಾರಿಗಳು ತಮ್ಮ ತಮ್ಮ ಸಂಘದ ಸಮವಸ್ತ್ರ ಧರಿಸಿ ಗಮನ ಸೆಳೆದರು. ಅಲಂಕೃತ ವಾಹನದಲ್ಲಿ ಸಹಕಾರಿ ಧುರೀಣರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಅವರ ಪುತ್ರರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಸಂಸದ ಪ್ರತಾಪ್ ಸಿಂಹ, ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ನಿರ್ದೇಶಕ ಕೆ.ಎಸ್. ಕುಮಾರ್ ಸೇರಿದಂತೆ ಗಣ್ಯರನ್ನು ಮೆರವಣಿಗೆ ಮೂಲಕ ಕಾರ್ಯಕ್ರಮ ಆಯೋಜಿಸಲಾಗಿದ್ದ ಮುನೇಶ್ವರ ಕಾವಲ್ ಮೈದಾನಕ್ಕೆ ಕರೆದೊಯ್ಯಲಾಯಿತು.

ಮೆರವಣಿಗೆಯ ಮುಂಚೂಣಿಯಲ್ಲಿ ಸುಮಾರು 200 ಮಹಿಳಾ ಸಹಕಾರ ಸಂಘಗಳ 3000 ಮಹಿಳೆಯರು ತಮ್ಮ ತಮ್ಮ ಸಂಘಕ್ಕೆ ನಿಗದಿಪಡಿಸಿಕೊಂಡಿದ್ದ ಬಣ್ಣದ ಸೀರೆಗಳನ್ನುಟ್ಟು ಕಳಸ ಹೊತ್ತು ಸಾಗಿದರು. ಅವರ ಹಿಂದೆ ಡೊಳ್ಳು ಕುಣಿತ, ವೀರಗಾಸೆ, ಕೇರಳದ ಚಂಡೆ ಮೇಳ, ವಾದ್ಯ, ನಾದಸ್ವರ, ಯಕ್ಷಗಾನ ಹಾಗೂ ಗಾರುಡಿ ಗೊಂಬೆ ಸಾಂಸ್ಕೃತಿಕ ತಂಡಗಳು ಇಡೀ ಮೆರವಣಿಗೆಗೆ ರಂಗು ತುಂಬಿತು.

ಆಂಜನೇಯಸ್ವಾಮಿ ದೇವಸ್ಥಾನದಿಂದ ಮುನೇಶ್ವರ ಕಾವಲ್ ಮೈದಾನದವರೆಗಿನ ಒಂದು ಕಿಲೋಮೀಟರ್‌ಗೂ ಹೆಚ್ಚು ಮಾರ್ಗ ಸಂಪೂರ್ಣವಾಗಿ ಸಹಕಾರಿಗಳಿಂದಲೇ ತುಂಬಿತ್ತು. ಮೆರವಣಿಗೆ ಕಲ್ಪತರು ವೃತ್ತ ತಲುಪುತ್ತಿದ್ದಂತೆಯೇ ಅಲಂಕೃತ ವಾಹನದಲ್ಲಿದ್ದ ಗಣ್ಯರಿಗೆ ಕ್ರೇನ್ ಮೂಲಕ ಬೃಹತ್ ಹಾರ ಹಾಕಲಾಯಿತು.

ಸಹಕಾರ ಸಮ್ಮಿಲನ ಕಾರ್ಯಕ್ರಮಕ್ಕಾಗಿ ಮುನೇಶ್ವರ ಕಾವಲ್ ಮೈದಾನದಲ್ಲಿ ಬೃಹತ್ ವಾಟರ್ ಫ್ರೂಫ್ ಪೆಂಡಾಲ್ ನಿರ್ಮಿಸಲಾಗಿತ್ತು. ಸುಮಾರು ಆರು ಸಾವಿರಕ್ಕೂ ಹೆಚ್ಚು ಕುರ್ಚಿಗಳನ್ನು ಹಾಕಲಾಗಿತ್ತಾದರೂ, ಅದು ಸಾಲದೇ ಸಾವಿರಾರು ಮಂದಿ ನಿಂತೇ ಗಣ್ಯರ ಮಾತುಗಳನ್ನು ಆಲಿಸುತ್ತಿದ್ದದ್ದು ಕಂಡು ಬಂತು. ಸಮಾವೇಶದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಮಧ್ಯಾಹ್ನದ ಊಟ ಮತ್ತು ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು.



ಅಬ್ಬಾ... ಎಷ್ಟೊಂದ್ ಜನ: ಸಮಾವೇಶದಲ್ಲಿ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಹುಣಸೂರಿನಲ್ಲಿ ಹನುಮ ಜಯಂತಿ ನಂತರ ಅಷ್ಟೇ ಬೃಹತ್ ಪ್ರಮಾಣದ ಜನಸಂಖ್ಯೆಯನ್ನು ಇಲ್ಲಿ ನೋಡುತ್ತಿದ್ದೇನೆ. ಈ ಪ್ರಮಾಣದಲ್ಲಿ ಸಹಕಾರಿಗಳು ಆಗಮಿಸಲು ಸಹಕಾರ ಧುರೀಣ ಜಿ.ಟಿ.ದೇವೇಗೌಡರ ಮಾರ್ಗದರ್ಶನದಲ್ಲಿ ಎರಡು ಶಕ್ತಿಗಳಾದ ಜಿ.ಡಿ. ಹರೀಶ್‌ಗೌಡ ಮತ್ತು ಪಿ.ಎಂ. ಪ್ರಸನ್ನ ಅವರ ಅವಿರತ ಶ್ರಮವೇ ಕಾರಣ. ಜಿ.ಟಿ. ದೇವೇಗೌಡರೊಂದಿಗೆ ನಾನು ಕೆಲಸ ಮಾಡುತ್ತಿದ್ದು, ನನ್ನ ಮತ್ತು ಅವರ ನಡುವೆ ತಂದೆ–ಮಗನಂತಹ ಸಂಬಂಧವಿದೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು, 2008ರಲ್ಲಿ ಹಾಲು ಉತ್ಪಾದಕರಿಗೆ ಲೀಟರ್‌ಗೆ 2 ರೂ. ಪ್ರೋತ್ಸಾಹ ಧನ ನೀಡುವ ಮೂಲಕ ಹಾಲು ಉತ್ಪಾದನೆಗೆ ಇಂಬು ನೀಡಿದರು ಎಂದರು.

ಸದಾ ಜಿಟಿಡಿ ಆಶೀರ್ವಾದವಿರಲಿ: ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಹೆಚ್.ಪಿ. ಮಂಜುನಾಥ್, ಸಂಕಷ್ಟದಲ್ಲಿದ್ದ ಎಂಸಿಡಿಸಿಸಿ ಬ್ಯಾಂಕ್‌ನ ಶಕ್ತಿ ವೃದ್ಧಿಸಲು ಸಹಕಾರಿಗಳು ಸಹಕಾರಿ ತತ್ವದ ಮೇಲೆ ಇಟ್ಟಿರುವ ನಂಬಿಕೆಯೇ ಮೂಲ ಕಾರಣ. ಸಹಕಾರಿಗಳ ನಂಬಿಕೆಯನ್ನು, ನಾಯಕರಾದವರು, ಸದ್ಬಳಕೆ ಮಾಡಿಕೊಂಡಲ್ಲಿ ಅಭಿವೃದ್ಧಿ ಸಾಧ್ಯ ಎನ್ನುವುದನ್ನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಸಾಬೀತು ಮಾಡಿದ್ದಾರೆ ಎಂದರಲ್ಲದೇ, ನಾನು ಚುನಾವಣೆಗಳಲ್ಲಿ ಸ್ಪರ್ಧಿಸಿದಾಗಲೆಲ್ಲಾ ಜಿ.ಟಿ. ದೇವೇಗೌಡರು ಒಂದಲ್ಲಾ ಒಂದು ರೀತಿ ನನಗೆ ಆಶೀರ್ವದಿಸಿದ್ದಾರೆ. ಹಾಗಾಗಿಯೇ ನಾನು ಗೆಲ್ಲುತ್ತಾ ಬಂದಿದ್ದೇನೆ. ಈ ಬಾರಿಯೂ ಕೂಡ ಅವರ ಆಶೀರ್ವಾದ ನನಗಿರಲಿ ಎಂದು ಮನವಿ ಮಾಡಿದರು.

ಎಲ್ಲೇ ನಿಂತರೂ ಹರೀಶ್‌ಗೌಡರು ಗೆಲ್ತಾರೆ: ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಜಿಲ್ಲೆಯ ಯುವ ಪೀಳಿಗೆಗೆ ಜಿ.ಡಿ. ಹರೀಶ್‌ಗೌಡ ಮಾರ್ಗದರ್ಶಕರಾಗಿದ್ದಾರೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಅವರು ಗೆಲ್ಲುತ್ತಾರೆ ಎಂಬ ವಿಶ್ವಾಸದ ಮಾತುಗಳು ಸಾರ್ವಜನಿಕರಿಂದ ಕೇಳಿ ಬರುತ್ತಿವೆ. 2018ರಲ್ಲೇ ಅವರು ಶಾಸಕರಾಗಬೇಕು ಎಂಬ ಆಗ್ರಹದ ಮಾತುಗಳು ಕೇಳಿ ಬಂದಿದ್ದವು. ಆದರೆ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮಾತಿಗೆ ಗೌರವ ನೀಡಿ ಹರೀಶ್‌ಗೌಡ ಚುನಾವಣಾ ಕಣದಿಂದ ಹಿಂದೆ ಸರಿದು, ತಮ್ಮ ಬೆಂಬಲಿಗರು ಹಾಗೂ ಅಭಿಮಾನಿಗಳನ್ನು ಸಮಾಧಾನಪಡಿಸಿ ಬೇರೊಬ್ಬರು ಗೆಲ್ಲಲು ಕಾರಣಕರ್ತರಾಗುವ ಮೂಲಕ ಕಲಿಯುಗದಲ್ಲಿ ತ್ಯಾಗಮಯಿಯಾದರು ಎಂದು ಬಣ್ಣಿಸಿದರು.

ಮೈಮುಲ್ ನಿರ್ದೇಶಕ ಕೆ.ಎಸ್. ಕುಮಾರ್, ಟಿಎಪಿಸಿಎಂಎಸ್ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದರು. ಮೈಮುಲ್ ನಿರ್ದೇಶಕಿ ಶಿವಗಾಮಿ, ಎಂಸಿಡಿಸಿಸಿ ಬ್ಯಾಂಕ್ ಹಾಗೂ ಮೈಮುಲ್ ನಿರ್ದೇಶಕರು, ತಾಲೂಕಿನ ಹಾಲು ಉತ್ಪಾದಕರ ಸಂಘಗಳ ಸದಸ್ಯರು ಹಾಗೂ ಸಹಕಾರಿಗಳು ಭಾಗವಹಿಸಿದ್ದರು.

ಒಗ್ಗೂಡಿ ಶ್ರಮಿಸಿದರೆ ಜಿಲ್ಲೆಯ 7 ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲುವು ನಿಶ್ಚಿತ

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯ

ಮದ್ದೂರು, ಜು.30– ಕಾಂಗ್ರೆಸ್ ಕಾರ್ಯಕರ್ತರು ಒಗ್ಗೂಡಿ ಶ್ರಮಿಸಿದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ 7 ಕ್ಷೇತ್ರಗಳನ್ನು ಗೆಲುವುದು ನಿಶ್ಚಿತ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಶಿವಪುರದ ವೆಂಕಟೇಶ್ವರ ಸಮುದಾಯ ಭವನದಲ್ಲಿ ಶನಿವಾರ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ದಿನೇಶ್ ಗೂಳಿಗೌಡ ಮತ್ತು ಮಧು ಜಿ.ಮಾದೇಗೌಡ ಅವರ ಗೆಲುವಿನಿಂದ ಜಿಲ್ಲೆಯ ಕಾಂಗ್ರೆಸ್‌ಗೆ ಹೊಸ ಹುರುಪು ಬಂದಿದೆ. ಜಿಲ್ಲೆಯಲ್ಲಿ ಬದಲಾವಣೆಯ ಗಾಳಿ ಬೀಸಿದ್ದು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 7 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಭಾರಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಪುರಸಭೆ ಸದಸ್ಯೆ ಪ್ರಿಯಾಂಕ ಅಪ್ಪು ಪಿ.ಗೌಡ ಕಾಂಗ್ರೆಸ್ ಸೇರ್ಪಡೆಯಾದರು.

ಕಾಂಗ್ರೆಸ್ ನಾಯಕರಲ್ಲಿ ಯಾವುದೇ ಒಡಕಿಲ್ಲ. ಎಲ್ಲರೂ ಒಗ್ಗಟ್ಟಾಗಿದ್ದೇವೆ. ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 18 ವರ್ಷಗಳಿಂದ ಕಾಂಗ್ರೆಸ್‌ಯೇತರ ಶಾಸಕರು ಅಧಿಕಾರ ನಡೆಸಿದ್ದಾರೆ. ಜನರು ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸವಿಟ್ಟಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವುದೇ ನಮ್ಮ ಗುರಿ ಎಂದು ಕಾರ್ಯಕರ್ತರು ದುಡಿಯಬೇಕು ಎಂದರು.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿ, ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ 2.16 ಲಕ್ಷ ಮಂದಿ ಮತದಾರರಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಜಂಟಿ ನಾಯಕತ್ವದೊಂದಿಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ. ತಾಪಂ ಮತ್ತು ಜಿಪಂ ಚುನಾವಣೆಗಳಿಗೆ ಸನ್ನದ್ಧರಾಗಿರಬೇಕು. ಪಕ್ಷವನ್ನು ಬಲಪಡಿಸಬೇಕು ಎಂದರು.

ವಿಧಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಮಾತನಾಡಿ, ಪ್ರತಿ ಬೂತ್ ಮಟ್ಟದಲ್ಲಿ 15 ಮಂದಿ ಕಾರ್ಯಕರ್ತರನ್ನು ಗುರುತಿಸಿ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಬೇಕು. ಮುಂದಿನ ಚುನಾವಣೆಯಲ್ಲಿ ತಾಲೂಕಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವ ಎಲ್ಲಾ ಲಕ್ಷಣಗಳು ಇವೆ. ಕಾರ್ಯಕರ್ತರು ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಶ್ರಮಿಸಬೇಕು ಎಂದರು.

ಇದೇ ವೇಳೆ ಪುರಸಭೆ ಸದಸ್ಯೆ ಪ್ರಿಯಾಂಕ ಅಪ್ಪು ಪಿ.ಗೌಡ ಗಣ್ಯರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು.

ಸಭೆಯಲ್ಲಿ ಮದ್ದೂರು ವಿಧಾನಸಭೆ ಅಭ್ಯರ್ಥಿ ಎಸ್.ಗುರುಚರಣ್, ಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಶಿವಲಿಂಗಯ್ಯ, ಎಸ್‌ಸಿ– ಎಸ್‌ಟಿ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ್ ಕಂಠಿ, ಪುರಸಭಾ ಮಾಜಿ ಅಧ್ಯಕ್ಷ ಎಂ.ಸಿ.ಬಸವರಾಜು, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಜಿಪಂ ಮಾಜಿ ಸದಸ್ಯ ರಾಜೀವ್, ಮುಖಂಡರಾದ ತಗ್ಗಹಳ್ಳಿ ಯಶೋಧಾ, ಅಜ್ಜಹಳ್ಳಿ ರಾಮಕೃಷ್ಣ, ನಾಗಣ್ಣ, ಹೊಂಬಯ್ಯ ಇದ್ದರು.

ದೇಶದ ಭವಿಷ್ಯ ಯುವಜನರ ಮೇಲಿದೆ: ಪ್ರೊ.ರಂಗಪ್ಪ



ಮಂಡ್ಯ, ಜು.30– ಸ್ಪರ್ಧಾತ್ಮಕ ಜಗತ್ತಿನಲ್ಲಿ, ಸ್ಪರ್ಧೆ ಅನಿವಾರ್ಯವಾಗಿದೆ. ಸ್ಪರ್ಧೆ ಇದ್ದಾಗ ಮಾತ್ರ ನಾವೂ ಮುಂದುವರಿಯಲು ಸಾಧ್ಯ. ಈ ಸ್ಪರ್ಧಾತ್ಮಕ ಯುಗಕ್ಕೆ ಅನುಗುಣವಾಗಿ ಯುವಜನರು ನಡೆಯುವುದರ ಜೊತೆಗೆ ಭಾರತವನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ಯುವ ಅಗತ್ಯತೆ ಇದೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಂಗಪ್ಪ ಹೇಳಿದರು.

ತಾಲೂಕಿನ ಸಿದ್ದಯ್ಯನ ಕೊಪ್ಪಲು ಕಾವೇರಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಕಾವೇರಿ ಶಿಕ್ಷಣ ಮತ್ತು ಸಂಶೋಧನಾ ಟ್ರಸ್ಟ್‌ನಿಂದ ನಡೆದ ಪದವಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುವಜನರು ಉನ್ನತ ವಿದ್ಯಾಭ್ಯಾಸ ಮಾಡಿದರೆ ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ. ಬೇರೆ ದೇಶಗಳೊಂದಿಗೆ ನಾವು ಸ್ಪರ್ಧೆ ಮಾಡಬೇಕಾದರೆ ನಮ್ಮಲ್ಲಿ ಕೌಶಲ್ಯ ಬಹಳ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ದೇಶವನ್ನು ಕಟ್ಟಬೇಕಾಗಿದೆ. ದೇಶದ ಭವಿಷ್ಯ ಯುವಜನರ ಮೇಲಿದೆ ಎಂದರು.

ಕಾಲೇಜಿನ ಕಾರ್ಯದರ್ಶಿ ನಾಗೇಂದ್ರ ಮಾತನಾಡಿದರು. ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷ ಪ್ರೊ.ಎಚ್.ಪಿ.ರಾಜು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿವಿ ಮೆಟೀರಿಯಲ್ ಸೈನ್ಸ್ ಸಂಯೋಜಕ ಪ್ರೊ.ಎಸ್.ಶ್ರೀಕಂಠಸ್ವಾಮಿ, ಪ್ರಾಂಶುಪಾಲ ಪ್ರೊ.ಎ.ಎಸ್.ಶ್ರೀಕಂಠಪ್ಪ ಉಪಪ್ರಾಂಶುಪಾಲ ಮಂಜುನಾಥ್ ಇದ್ದರು.



ಹೊಸಹಳ್ಳಿ ಗ್ರಾಮ ಪಂಚಾಯಿತಿಗೆ ಅವಿರೋಧವಾಗಿ ಆಯ್ಕೆಯಾದ ನೂತನ ಉಪಾಧ್ಯಕ್ಷ ಕೆ.ಎಸ್.ವಿಶ್ವನಾಥ್ ಅವರನ್ನು ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರು ಅಭಿನಂದಿಸಿದರು.


ಇಂದು ಚಾಮುಂಡೇಶ್ವರಿ ದೇವಿ ವಿಗ್ರಹಕ್ಕೆ ಮಹಾಮಸ್ತಕಾಭಿಷೇಕ

ಮಂಡ್ಯ, ಜು.30– ಜಿಲ್ಲೆಯ ಗಡಿ ಗ್ರಾಮ ಚನ್ನಪಟ್ಟಣದ ಗೌಡಗೆರೆಯ ಚಾಮುಂಡೇಶ್ವರಿ ಬಸವಪ್ಪ ಅವರ ಪುಣ್ಯ ಕ್ಷೇತ್ರದಲ್ಲಿ ಜು.31ರಂದು ಮಹಾಮಸ್ತಕಾಭಿಷೇಕ ಜರುಗಲಿದೆ ಎಂದು ಕ್ಷೇತ್ರದ ಧರ್ಮದರ್ಶಿ ಜಿ.ಬಿ.ಮಲ್ಲೇಶ್ ತಿಳಿಸಿದ್ದಾರೆ.



60 ಅಡಿ ಎತ್ತರದ ಸೌಮ್ಯ ಸ್ವಭಾವದ ಶ್ರೀಚಾಮುಂಡೇಶ್ವರಿ ಲೋಹದ ವಿಗ್ರಹ 2021ರ ಆಗಸ್ಟ್ 8 ರಂದು ಉದ್ಘಾಟನೆಗೊಂಡಿತ್ತು. ಕಾರ್ಯಕ್ರಮದ ಸಾನ್ನಿಧ್ಯವನ್ನು ಸಿದ್ಧಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿ ರಾಮನಗರ ಶಾಖಾ ಮಠದ ಶ್ರೀಅನ್ನದಾನೇಶ್ವರ ಸ್ವಾಮೀಜಿ, ಮಲ್ಲಿಕಾರ್ಜುನ ಮಠದ ಶ್ರೀಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ ಭಾಗವಹಿಸುವರು ಎಂದರು.

ಧಾರ್ಮಿಕ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಮೈಸೂರು ರಾಜಮನೆತನದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ ಡಿ.ಕೆ.ಸುರೇಶ್, ಚಿತ್ರ ನಟರಾದ ಶಿವರಾಜ್‌ಕುಮಾರ್, ಸುದೀಪ್ ಆಗಮಿಸಲಿದ್ದಾರೆ ಎಂದು ವಿವರಿಸಿದರು.



ವಿಶ್ವ ಹುಲಿ ದಿನದ ಅಂಗವಾಗಿ ಶನಿವಾರ ಮೈಸೂರಿನ ಶ್ರೀಚಾಮರಾಜೇಂದ್ರ ಮೃಗಾಲಯಕ್ಕೆ ಭೇಟಿ ನೀಡಿದ ಶ್ರೀರಂಗಪಟ್ಟಣದ ಮುಖಂಡ ಇಂಡುವಾಳು ಸಚ್ಚಿದಾನಂದ ಅವರು ಎರಡು ಹುಲಿಗಳನ್ನು ದತ್ತು ಪಡೆದು, ಗಂಡು ಹುಲಿಗೆ 'ನಂದು' ಮತ್ತು ಹೆಣ್ಣು ಹುಲಿಗೆ 'ನಿಧಿ' ಎಂದು ನಾಮಕರಣ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮೈಸೂರು ಮೃಗಾಲಯ ಉಪನಿರ್ದೇಶಕ ಮೋಹನ್ ಬಿದರಿ, ಮಂಡ್ಯ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ಶ್ರೀಧರ್ ಇದ್ದರು.

ವೆಂಕಟೇಶ್ವರ ದೇವಾಲಯದಲ್ಲಿ ಶ್ರಾವಣ ಪೂಜೆ

ಭಾರತೀನಗರ, ಜು.30– ಮೊದಲನೇ ಶ್ರಾವಣ ಮಾಸದ ಅಂಗವಾಗಿ ಮುಡಿನ ಹಳ್ಳಿ ಶ್ರೀಲಕ್ಷ್ಮೀ ವೆಂಕಟೇಶ್ವರ ಹಾಗೂ ಕೆ.ಎಂ.ದೊಡ್ಡಿ ಶ್ರೀವೆಂಕಟೇಶ್ವರ ದೇವಸ್ಥಾನಗಳಲ್ಲಿ ಶನಿವಾರ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ಬೆಳಗ್ಗೆಯಿಂದಲೇ ಹೋಮ, ಹವನ, ಅಭಿಷೇಕ, ಮಹಾ ಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಿದವು. ಮುಡಿನಹಳ್ಳಿ ಲಕ್ಷ್ಮೀ ವೆಂಕಟೇಶ್ವರ, ಕೆ.ಎಂ.ದೊಡ್ಡಿಯ ಶ್ರೀವೆಂಕಟೇಶ್ವರ ದೇವಾಲಯಗಳನ್ನು ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು.

ಬಳಿಕ, ಭಕ್ತರಿಗೆ ಪ್ರಸಾದ ವಿತರಣೆ ನಡೆಯಿತು. ಪೂಜಾ ಕಾರ್ಯಕ್ರಮ ನೇತೃತ್ವವನ್ನು ಕೂಳಗೆರೆ ಪ್ರಕಾಶ್, ಗಿರೀಶ್ ಮತ್ತು ಹರೀಶ್ ವಹಿಸಿದ್ದರು.



ಗ್ರಾಮೀಣರಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಎಸ್‌ಟಿಜಿ ಸಂಸ್ಥೆ ಆರಂಭ: ಸಿಎಸ್‌ಪಿ

ವಿದ್ಯಾರ್ಥಿಗಳ ವಿನಿಮಯಕ್ಕಾಗಿ ಅಮೇರಿಕಾದ ಯುನಿವರ್ಸಿಟಿಯೊಂದಿಗೆ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಹಿ

ಚಿನಕುರಳಿ, ಜು.30– ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಎಸ್‌ಟಿಜಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಲಾಗಿದೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಚಿನಕುರಳಿ ಎಸ್‌ಟಿಜಿ ಪಬ್ಲಿಕ್ ಶಾಲೆಯಲ್ಲಿ 'ಮೈತ್ರೀಮ್ ಭಜತ' ಕಾರ್ಯಕ್ರಮದಡಿ ಅಮೇರಿಕದ ಸಾಗಿನಾವ್ ವ್ಯಾಲಿ ಸ್ಟೇಟ್ ಯುನಿವರ್ಸಿಟಿಯೊಂದಿಗೆ ವಿದ್ಯಾರ್ಥಿ ವಿನಿಮಯಕ್ಕಾಗಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯು ಪರಸ್ಪರ ಸಹಿ ಹಾಕಿ ಬಳಿಕ ಅವರು ಮಾತನಾಡಿದರು.



ನನ್ನ ಪುತ್ರ ಸಿ.ಪಿ.ಶಿವರಾಜು ಅಮೇರಿಕದಲ್ಲಿ, ಅಣ್ಣನ ಮಗ ಸಿ.ಹರೀಶ್ ಅವರು ಲಂಡನ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ಅವರು ಓದುವಂತಹ ದಿನಗಳಲ್ಲಿಯೇ ನೀವು ಪ್ರಪಂಚದ ಯಾವುದೇ ದೇಶದಲ್ಲಿ ವಿದ್ಯಾಭ್ಯಾಸ ಮಾಡಿದರು, ಕೊನೆಗೆ ನಿಮ್ಮ ಸೇವೆ ನಮ್ಮ ಮಣ್ಣಿನಲ್ಲಿ ಮಾಡಬೇಕು ಎಂದು ನಾನು ತಿಳಿಸಿದೆ, ಅದರಂತೆ ಸಿ.ಪಿ.ಶಿವರಾಜು ಹಾಗೂ ಸಿ.ಅಶೋಕ್ ಅವರುಎಸ್‌ಜಿಟಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಗ್ರಾಮೀಣ ಪ್ರದೇಶದ ಮಕ್ಕಳಿಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ನೀಡಬೇಕು ಎನ್ನುವ ಉದ್ದೇಶದಿಂದ ಅಂತಾರಾಷ್ಟ್ರ ಮಟ್ಟದ ಅಮೇರಿಕದ ಸಾಗಿನಾವ್ ವ್ಯಾಲಿ ಸ್ಟೇಟ್ ಯುನಿವರ್ಸಿಟಿಯೊಂದಿಗೆ ವಿದ್ಯಾರ್ಥಿ ವಿನಿಮಯ ಒಪ್ಪಂದಕ್ಕೆ ಎಸ್‌ಟಿಜಿ ಶಾಲೆಯೂ ಸಹಿ ಹಾಕಲಾಗಿದೆ. ಅಮೇರಿಕದ ಸಾಗಿನಾವ್ ವ್ಯಾಲಿ ಸ್ಟೇಟ್ ಯುನಿವರ್ಸಿಟಿಯ ಮೂವರು ಮಕ್ಕಳು ಹಾಗೂ ಓರ್ವ ಶಿಕ್ಷಕರು ಎಸ್‌ಟಿಜಿ ಶಿಕ್ಷಣ ಸಂಸ್ಥೆಗೆ ಬಂದು ಇಲ್ಲಿನ ಕಲೆ, ಸಂಸ್ಕೃತಿ, ಪರಿಸರ, ಸಾಹಿತ್ಯದ ಬಗ್ಗೆ ಅಧ್ಯಾಯ ನಡೆಸಲಿದ್ದಾರೆ. ಹಾಗೆಯೇ ನಮ್ಮ ಶಾಲೆಯ ಮೂವರು ವಿದ್ಯಾರ್ಥಿಗಳು ಹಾಗೂ ಓರ್ವ ಶಿಕ್ಷಕರು ಅಮೇರಿಕಕ್ಕೆ ತೆರಳಿ ಅಲ್ಲಿನ ಶಿಕ್ಷಣ, ಕಲೆ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಧ್ಯಯನ ನಡೆಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಮೇರಿಕ ಯುನಿವರ್ಸಿಟಿಯೊಂದಿಗೆ 2019ರಲ್ಲಿಯೇ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಲ್ಲಿನ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಅಧ್ಯಾಯನ ಮಾಡಿದ್ದರು. ಅದೇ ರೀತಿ ಇಲ್ಲಿನ ವಿದ್ಯಾರ್ಥಿಗಳು ಅಮೇರಿಕಕ್ಕೆ ಹೋಗಿ ಅಧ್ಯಾನ ನಡೆಸಿದ್ದಾರೆ. ಆದರೆ, ಕೋವಿಡ್‌ನಿಂದ ಎರಡು ವರ್ಷ ವಿನಿಮಯ ಹಮ್ಮಿಕೊಳ್ಳಲು ಸಾಧ್ಯವಾಗಿರಲಿಲ್ಲ. ಹಾಗಾಗಿ, 2024ರಲ್ಲಿ ಮತ್ತೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದರು.

ಸಿ.ಪಿ.ಶಿವರಾಜು ಮಾತನಾಡಿ, ನಮ್ಮ ತಂದೆ ಸಿ.ಎಸ್. ಪುಟ್ಟರಾಜು ಅವರು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬುದಾಗಿ ಸಂಸ್ಥೆಯನ್ನು ಆರಂಭಿಸಿದರು. ಅವರ ಆಶಯದಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ ಇದೀಗ ವಿಶ್ವದ ಅತಿದೊಡ್ಡ ರಾಷ್ಟ್ರವಾದ ಅಮೇರಿಕದ ಸಾಗಿನಾವ್ ವ್ಯಾಲಿ ಸ್ಟೇಟ್ ಯುನಿವರ್ಸಿಟಿಯೊಂದಿಗೆ ವಿದ್ಯಾರ್ಥಿ ವಿನಿಮಯಕ್ಕೆ ಸಹಿ ಹಾಕಿದ್ದೇವೆ. ಇದು ಮುಂದಿನ ದಿನಗಳಲ್ಲಿ ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ಅಮೇರಿಕದ ಸಾಗಿನಾವ್ ವ್ಯಾಲಿ ಸ್ಟೇಟ್ ಯುನಿವರ್ಸಿಟಿಯ ಡೀನ್ ಡಾ.ಜೇಮ್ಸ್ ಇ.ಟಾರ್ ಮಾತನಾಡಿ, ಚಿನಕುರಳಿಯಂತಹ ಗ್ರಾಮೀಣ ಪ್ರದೇಶದಲ್ಲಿ ಎಸ್‌ಟಿಜಿಯಂತಹ ಶಿಕ್ಷಣ ಸಂಸ್ಥೆ ಇರುವುದು ನಿಜಕ್ಕೂ ಖುಷಿಯಾಗಿದೆ. ಮಕ್ಕಳಿಗೆ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ ಗ್ರಾಮೀಣ ಪ್ರದೇಶದ ಮಕ್ಕಳಾದರೂ ಇಂಗ್ಲೀಷ್ ಭಾಷೆಯನ್ನು ಇಷ್ಟೊಂದು ಚೆನ್ನಾಗಿ ಮಾತನಾಡುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಜೊತೆಗೆ ಇಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ನೋಡಿ ತುಂಬಾ ಖುಷಿಯಾಯಿತು. ಇಂತಹ ಶಿಕ್ಷಣ ಸಂಸ್ಥೆಯೊಂದಿಗೆ ನಮ್ಮ ಯುನಿವರ್ಸಿಟಿ ವಿದ್ಯಾರ್ಥಿ ವಿನಿಮಯಕ್ಕೆ ಒಪ್ಪಂದಕ್ಕೆ ಸಹಿ ಹಾಕಿರುವುದು ಖುಷಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಗಿನಾವ್ ವ್ಯಾಲಿ ಸ್ಟೇಟ್ ಯುನಿವರ್ಸಿಟಿ ಪ್ರೊಫೆಸರ್ ಡಾ.ಡೇವಿಡ್, ಬೆಳಗಾವಿಯ ಕಿತ್ತೂರು ರಾಣಿ ಚೆನ್ನಮ್ಮ ಸೈನಿಕ್ ಶಾಲೆಯ ಅಧ್ಯಕ್ಷ ಮಹೇಂದ್ರ ಎಸ್.ಕಂಠಿ, ಸದಸ್ಯೆ ಗೀತಾಕಂಠಿ, ಪ್ರಾಂಶುಪಾಲರಾದ ಕರ್ನಲ್ ಆರ್.ಎಸ್.ಖತ್ರಿ, ಮಾಚಮ್ಮ, ಆಡಳಿತಾಧಿಕಾರಿ ನಿವೇದಿತಾ ನಾಗೇಶ್, ಪಿಆರ್‌ಓ ಬಿ.ಕೆ.ಗೋಪಾಲ್ ಸೇರಿದಂತೆ ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ಇದ್ದರು.

ಪೆಟ್ರೋಲ್ ಮಾಫಿಯಾ ಬಯಲು

ಹಾಸನದಿಂದ ಬಂದ ಟ್ಯಾಂಕರ್‌ನಲ್ಲಿ 200 ಲೀಟರ್ ಪೆಟ್ರೋಲ್ ನಾಪತ್ತೆ

- ಪೆಟ್ರೋಲ್ ಅಳತೆ ಮಾಡುವ ಅಳತೆಗೋಲು ಮಾರ್ಪಾಡು
- ತೂಕ ಮತ್ತು ಅಳತೆ ಇಲಾಖೆ ಅಧಿಕಾರಿಗಳಿಂದ ಪ್ರಕರಣ ದಾಖಲು
- ಪೆಟ್ರೋಲ್ ಮಾಫಿಯಾದ ವಿರುದ್ಧ ಡೀಲರ್‌ಗಳ ಆಕ್ರೋಶ
- ಟ್ಯಾಂಕರ್ ವಶ; ಅಧಿಕಾರಿಗಳಿಂದ ಚಾಲಕ, ಕ್ಲೀನರ್ ವಿಚಾರಣೆ
- ತನಿಖೆ ನಡೆಸುವಂತೆ ಮೈಸೂರು ಪೊಲೀಸ್ ಆಯುಕ್ತರಿಗೆ ದೂರು







ಮೈಸೂರು, ಜು.30(ಆರ್‌ಕೆ)–ಮೈಸೂರಲ್ಲಿ ಮತ್ತೊಮ್ಮೆ ಪೆಟ್ರೋಲ್ ಮಾಫಿಯಾ ಬಯಲಾಗಿದೆ. ಹಾಸನದಿಂದ ಬಂದ ಟ್ಯಾಂಕರ್‌ನಲ್ಲಿ 200 ಲೀಟರ್ ಪೆಟ್ರೋಲ್ ನಾಪತ್ತೆ ಪ್ರಕರಣ ಶುಕ್ರವಾರ ರಾತ್ರಿ ಮೈಸೂರಲ್ಲಿ ಬೆಳಕಿಗೆ ಬಂದಿದೆ. ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂದು ಕೆಲ ಬಂಕ್‌ನವರು ದೂರಿದ್ದಾರೆ.

ಹಾಸನದ ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (HPCL) ಟರ್ಮಿನಲ್‌ನಿಂದ ಮೈಸೂರಿನ ದಾಸಪ್ಪ ಸರ್ಕಲ್‌ನ ಶ್ರೀ ಗಣೇಶ ಸರ್ವೀಸ್ ಸ್ಟೇಷನ್ ಬಂಕ್‌ಗೆ ಬಂದ ಟ್ಯಾಂಕರ್‌ನಲ್ಲಿ 200 ಲೀಟರ್ ಪೆಟ್ರೋಲ್ ಕಡಿಮೆ ಇರುವುದು ಬೆಳಕಿಗೆ ಬಂದಿದೆ.

ಬಂಕ್‌ಗೆ ಬಂದ ಟ್ಯಾಂಕರ್‌ನ ಮುಚ್ಚಳ ತೆಗೆದು ನೋಡಿದಾಗ ಪೆಟ್ರೋಲ್ ಪ್ರಮಾಣ ಕಡಿಮೆ ಇತ್ತು. ಅಲ್ಲದೇ ಅವರು ತಂದಿದ್ದ ಅಳತೆಗೋಲು (ಡಿಪ್ ರಾಡ್) ಸಹ ಅದಕ್ಕೆ ತಕ್ಕಂತೆ ತುಂಡಾಗಿದ್ದು, ಪೆಟ್ರೋಲ್ ಕಳವಾಗಿರುವುದು ಖಚಿತವಾಗುತ್ತಿದ್ದಂತೆಯೇ ಬಂಕ್ ಮಾಲೀಕರಾದ ನಿರ್ಮಲಾ ಅವರು ಪೆಟ್ರೋಲ್ ಡೀಲರ್ಸ್ ಅಸೋಸಿಯೇಷನ್ ಪದಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕಾಗಮಿಸಿದ ಸಂಘದ ಪದಾಧಿಕಾರಿಗಳು, ಟ್ಯಾಂಕರ್ ಚಾಲಕ ಹಾಸನದ ಬಾಲರಾಜು ಮತ್ತು ಕ್ಲೀನರ್‌ನನ್ನು ವಿಚಾರಿಸಿದಾಗ ಆರಂಭದಲ್ಲಿ ನಮಗೇನೂ ಗೊತ್ತಿಲ್ಲ. ಪೆಟ್ರೋಲ್ ಲೋಡ್ ಆಗಿ ಸೀಲ್ ಮಾಡಿದ ನಂತರ ನಾವು ಎಲ್ಲಿಯೂ ನಿಲ್ಲಿಸಿಲ್ಲ. ಬೇಕಿದ್ದರೆ ಟ್ಯಾಂಕರ್ ಜೊತೆಯಲ್ಲಿರುವ ಅಳತೆಗೋಲಿನಿಂದ ಚೆಕ್ ಮಾಡಿಕೊಳ್ಳಿ ಎಂದು ವಾದಿಸಿದ್ದಾರೆ. ಕಡೆಗೆ ಟ್ಯಾಂಕರ್ ಬೀಗ ತೆಗೆದು ಪರೀಕ್ಷಿಸಲು ಮುಂದಾದಾಗ ಅಳತೆ ಗೋಲು ತುಂಡಾಗಿರುವುದು ಕಂಡು ಬಂತು. ಅವರ ಕೃತ್ಯಕ್ಕೆ ತಕ್ಕಂತೆ ಅದನ್ನು ಮಾರ್ಪಾಡು ಮಾಡಲಾಗಿತ್ತು. ಹಾಗಾಗಿ ಅದರಿಂದ ಅಳತೆ ಮಾಡಿದರೆ ಅಳತೆ ಸರಿಯಾಗಿತ್ತು. ಆದರೆ ಪೆಟ್ರೋಲ್ ಬಂಕ್‌ನಲ್ಲಿದ್ದ ಅಳತೆ ಗೋಲಿನಿಂದ ಪರಿಶೀಲಿಸಿದಾಗ ಪೆಟ್ರೋಲ್ ಕಡಿಮೆ ಇರುವುದು ಸ್ಪಷ್ಟವಾಯಿತು. ಟ್ಯಾಂಕರ್ ಮತ್ತು ಚಾಲಕನನ್ನು ರಾತ್ರಿ ಬಂಕ್‌ನಲ್ಲಿಯೇ ಇರಿಸಿಕೊಂಡಿದ್ದ ಮಾಲೀಕರು, ಇಂದು ಬೆಳಗ್ಗೆ ತೂಕ ಮತ್ತು ಅಳತೆ ಇಲಾಖೆ ಅಧಿಕಾರಿಗಳನ್ನು ಕರೆಸಿ, ಮಹಜರು ನಡೆಸಿದಾಗ 200 ಲೀಟರ್ ಪೆಟ್ರೋಲ್ ಕಡಿಮೆ ಇರುವುದು ತಿಳಿಯಿತು. ಇಲಾಖೆ ಉಪ ನಿರ್ದೇಶಕಿ ಸರಳಾ ಅವರ ನೇತೃತ್ವದಲ್ಲಿ ಸುಮಾರು ಎರಡು ತಾಸು ಪರಿಶೀಲನೆ ನಡೆಸಿದ ಅಧಿಕಾರಿಗಳಿಗೆ ಟರ್ಮಿನಲ್‌ನಲ್ಲಿ ಲೋಡ್ ಆದ ನಂತರ ಮೈಸೂರಿಗೆ ಬರುವ ಮಾರ್ಗ ಮಧ್ಯೆ ಟ್ಯಾಂಕರ್‌ನಿಂದ ಪೆಟ್ರೋಲ್ ತೆಗೆದು, ಹಾಲಿ ಅಳತೆ ತೋರಿಸುವಂತೆ ಅಳತೆ ಗೋಲನ್ನು ತುಂಡರಿಸಿದ್ದಾರೆ ಎಂಬುದು ತಿಳಿಯಿತು.

ಪ್ರಕರಣ ದಾಖಲಿಸಿಕೊಂಡಿರುವ ತೂಕ ಮತ್ತು ಅಳತೆ (ಮಾಪನ) ಇಲಾಖೆ ಅಧಿಕಾರಿಗಳು, ಟ್ಯಾಂಕರ್ ಅನ್ನು ಇಂಧನ ಸಮೇತ ಜಪ್ತಿ ಮಾಡಿದ್ದು, ಚಾಲಕ ಮತ್ತು ಕ್ಲೀನರ್‌ನನ್ನು ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ಹಾಸನದ ಹೆಚ್‌ಪಿಸಿಎಲ್ ಟರ್ಮಿನಲ್‌ನಿಂದ ಪ್ರತೀ ದಿನ ಸುಮಾರು 500 ಟ್ಯಾಂಕರ್‌ಗಳು ಹಲವು ಪೆಟ್ರೋಲ್ ಬಂಕ್‌ಗಳಿಗೆ ಇಂಧನ ಪೂರೈಸುತ್ತಿದ್ದು, ಮಾರ್ಗ ಮಧ್ಯೆ ಪೆಟ್ರೋಲ್ ಕಳವು, ಕಲಬೆರಕೆ ಮಾಡುವ ಮಾಫಿಯಾ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ಡೀಲರ್‌ಗಳು ಗಂಭೀರ ಆರೋಪ ಮಾಡಿದ್ದಾರೆ.

ಪ್ರತೀ ಟ್ಯಾಂಕರ್‌ನಿಂದ 100 ರಿಂದ 200 ಲೀಟರ್‌ನಂತೆ ಪೆಟ್ರೋಲ್, ಡೀಸೆಲ್ ಕಳವು ಮಾಡುತ್ತಿದ್ದು, ಕೆಲವು ಟ್ಯಾಂಕರ್‌ಗಳಲ್ಲಿ ಇಂಧನ ತೆಗೆದು ಸೀಮೆಎಣ್ಣೆ ಬೆರೆಸಿ ಪೂರೈಸುತ್ತಿರುವುದರಿಂದ ಕೋಟ್ಯಾಂತರ ರೂ. ನಷ್ಟವಾಗುತ್ತಿದೆ ಎಂದು ಪೆಟ್ರೋಲ್ ಡೀಲರ್‌ಗಳು ಆಪಾದಿಸುತ್ತಿದ್ದು, ತೈಲ ನಿಗಮದ ಅಧಿಕಾರಿಗಳೂ ಟ್ಯಾಂಕರ್ ಚಾಲಕರು ಮತ್ತು ಮಾಲೀಕರೊಂದಿಗೆ ಶಾಮೀಲಾಗಿ ಈ ಕೃತ್ಯ ನಡೆಸುತ್ತಿದ್ದಾರೆ. ಈ ಮಾಫಿಯಾ ವ್ಯಾಪಕವಾಗಿ ಕಾರ್ಯ ಪ್ರವೃತ್ತವಾಗಿದೆ ಎಂದು ದೂರು ನೀಡಿದ್ದಾರೆ. ಇಂದು ಸಂಜೆ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರನ್ನು ಭೇಟಿ ಮಾಡಿದ ಸಂಘಗಳ ಪದಾಧಿಕಾರಿಗಳು ಇದರ ಬಗ್ಗೆ ಸಮಗ್ರ ತನಿಖೆ ನಡೆಸಿ, ಮಾಫಿಯಾಗೆ ಕಡಿವಾಣ ಹಾಕಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಲಿಖಿತ ದೂರು ಸಲ್ಲಿಸಿದರು.

ಅಖಿಲ ಕರ್ನಾಟಕ ಪೆಟ್ರೋಲ್ ಡೀಲರ್ಸ್ ಫೆಡರೇಷನ್ ಅಧ್ಯಕ್ಷ ಕೆ.ಎಂ.ಬಸವೇಗೌಡ, ಜಿಲ್ಲಾಧ್ಯಕ್ಷೆ ಶಶಿಕಲಾ ನಾಗರಾಜ್, ಕಾರ್ಯದರ್ಶಿ ರಂಜಿತ ಹೆಗ್ಡೆ, ಪದಾಧಿಕಾರಿಗಳಾದ ಎಂ.ಎಸ್. ಲೋಕೇಶ್, ಎಸ್.ಆರ್. ಪಾಟೀಲ್ ಸೇರಿದಂತೆ ಹಲವು ಪೆಟ್ರೋಲ್ ಬಂಕ್ ಮಾಲೀಕರು ಈ ಸಂದರ್ಭ ಉಪಸ್ಥಿತರಿದ್ದರು.

ನಂತರ ಜಿಲ್ಲಾಧಿಕಾರಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕರಿಗೂ ದೂರು ನೀಡಿರುವ ಸಂಘದ ಪದಾಧಿಕಾರಿಗಳು, ಪೆಟ್ರೋಲ್, ಡೀಸೆಲ್ ಕಳವು ಮತ್ತು ಕಲಬೆರಕೆ ಮಾಫಿಯಾ ತಡೆಗಟ್ಟುವಂತೆ ಮನವಿ ಮಾಡಿದ್ದಾರೆ.

ಲಾಡ್ಜ್‌ನಲ್ಲಿ ಗ್ರಾಹಕರ 30 ಲಕ್ಷ ಮೌಲ್ಯದ ಪದಾರ್ಥ ಕದ್ದ ಖದೀಮರ ಬಂಧನ



ಮೈಸೂರು, ಜು.30(ಎಸ್‌ಬಿಡಿ)– ಲಾಡ್ಜ್‌ನಲ್ಲಿ ಗ್ರಾಹಕರೊಬ್ಬರ ಸುಮಾರು 30 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ದೋಚಿದ್ದ ಇಬ್ಬರು ಖದೀಮರನ್ನು ಮೈಸೂರಿನ ದೇವರಾಜ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲಕ್ಷ್ಮಿ ವಿಲಾಸ ರಸ್ತೆಯ ರಾಜ್‌ಮಹಲ್ ಡಿಲಕ್ಸ್ ಲಾಡ್ಜ್‌ನಲ್ಲಿ ಜು.19ರಂದು ಗ್ರಾಹಕರೊಬ್ಬರ ಚಿನ್ನಾಭರಣ, ಬೆಳ್ಳಿ ಪದಾರ್ಥ ಹಾಗೂ ನಗದು ಸೇರಿ 30.18 ಲಕ್ಷ ರೂ. ಮೌಲ್ಯದ ವಸ್ತುಗಳ ಕಳ್ಳತನವಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ದೇವರಾಜ ಠಾಣೆ ಪೊಲೀಸರು ಸಿಸಿಟಿವಿ ದೃಶ್ಯಾವಳಿ ಇನ್ನಿತರ ತಾಂತ್ರಿಕ ಸಾಕ್ಷ್ಯಾಧಾರಗಳೊಂದಿಗೆ ತನಿಖೆ ನಡೆಸಿ, ಜು.21ರಂದು ಓರ್ವ ಆರೋಪಿಯನ್ನು ಬಂಧಿಸಲಾಗಿತ್ತು. ವಿಚಾರಣೆ ವೇಳೆ ಆತ ನೀಡಿದ ಮಾಹಿತಿ ಮೇರೆಗೆ ಜು.26ರಂದು ಮತ್ತೋರ್ವನನ್ನು ಬಂಧಿಸಲಾಗಿದೆ. ಬಂಧಿತರಿಂದ 621 ಗ್ರಾಂ ಚಿನ್ನಾಭರಣ, 350 ಗ್ರಾಂ ಬೆಳ್ಳಿ ಪೂಜಾ ಬಟ್ಟಲು, 40 ಸಾವಿರ ರೂ. ನಗದು, ಕೃತ್ಯಕ್ಕೆ ಬಳಸಿದ ಕಾರು ಹಾಗೂ 2 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಗ್ರಾಹಕರ ಚಲನವಲನ ಗಮನಿಸಿ ಅವರ ಕೊಠಡಿಯೊಳಗೆ ನುಗ್ಗಿ ಕಳ್ಳತನ ಮಾಡಿದ್ದಾಗಿ ಆರೋಪಿಗಳು ವಿಚಾರಣೆ ವೇಳೆ ಹೇಳಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಗೀತಾ ಪ್ರಸನ್ನ ಹಾಗೂ ದೇವರಾಜ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಮಾರ್ಗದರ್ಶನದಲ್ಲಿ ದೇವರಾಜ ಠಾಣೆ ಇನ್‌ಸ್ಪೆಕ್ಟರ್ ದಿವಾಕರ್, ಸಬ್‌ಇನ್‌ಸ್ಪೆಕ್ಟರ್‌ಗಳಾದ ರಾಜು ಹಾಗೂ ಲೀಲಾವತಿ, ಸಿಬ್ಬಂದಿ ಸೋಮಶೆಟ್ಟಿ, ಸುರೇಶ್, ವೇಣುಗೋಪಾಲ್, ನಂದೀಶ್ ಮತ್ತು ಪ್ರದೀಪ್ ಕಾರ್ಯಾಚರಣೆ ನಡೆಸಿ, ಪ್ರಕರಣ ಭೇದಿಸಿದ್ದಾರೆ.

ಜಮೀನು ಪೋಡಿಗೆ 35 ಸಾವಿರ ಲಂಚ: ಸರ್ವೇಯರ್ ಎಸಿಬಿ ಬಲೆಗೆ

ಮೈಸೂರು, ಜು.30(ಎಸ್‌ಬಿಡಿ)– ಹೊಸದಾಗಿ ಜಮೀನಿನ ಪೋಡಿ ಮಾಡಿಕೊಡಲು ರೈತರೊಬ್ಬರಿಂದ 35 ಸಾವಿರ ಲಂಚ ಪಡೆದ ಸರ್ವೇಯರ್ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಮೈಸೂರು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರ ಕಚೇರಿಯ ಸರ್ವೇಯರ್ ಮಂಜುನಾಥ್ ಲಂಚ ಪಡೆಯುವಾಗಲೇ ಎಸಿಬಿ ಅಧಿಕಾರಿಗಳು ದಾಳಿ ನಡೆಸಿ, ವಶಕ್ಕೆ ಪಡೆದಿದ್ದಾರೆ. ಪಿರಿಯಾಪಟ್ಟಣ ತಾಲೂಕು ರಾವಂದೂರು ಹೋಬಳಿ ಹೆಮ್ಮಿಗೆ ಗ್ರಾಮದ ರೈತರೊಬ್ಬರು, ಗ್ರಾಮದ ಸರ್ವೆ ನಂ.60/1 ಮತ್ತು 60/2 ಜಮೀನಿನ ಹಳೆಯ ಪೋಡಿಯನ್ನು ರದ್ದುಪಡಿಸಿ, ಅನುಭವದಂತೆ ಹೊಸದಾಗಿ ಪೋಡಿ ಮಾಡಿಕೊಡಲು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ನಂತರ ಈ ಸಂಬಂಧ ಜು.19 ಹಾಗೂ 25ರಂದು ಕಚೇರಿಗೆ ಭೇಟಿ ನೀಡಿದಾಗ ಪೋಡಿ ಮಾಡಿಕೊಡಲು 35 ಸಾವಿರ ರೂ. ಲಂಚ ನೀಡುವಂತೆ ಸರ್ವೇಯರ್ ಮಂಜುನಾಥ್ ಬೇಡಿಕೆಯಿಟ್ಟು, ಹಣಕ್ಕಾಗಿ ಒತ್ತಡ ಹೇರಿದ್ದರು.

ಇದರಿಂದ ರೋಸಿಹೋದ ರೈತ, ಜು.29ರಂದು ಮೈಸೂರಿನ ಎಸಿಬಿ ಠಾಣೆಯಲ್ಲಿ ದೂರು ನೀಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಎಸಿಬಿ ಪೊಲೀಸರು ಲಂಚಕ್ಕಾಗಿ ಒತ್ತಾಯಿಸುತ್ತಿದ್ದ ಸರ್ವೇಯರ್‌ಗೆ ಖೆಡ್ಡಾ ತೋಡಿದರು. ಹಾಗೆಯೇ ಸಿದ್ಧಾರ್ಥನಗರದ ಡಿಎಫ್‌ಆರ್‌ಎಲ್ ಬಳಿ ಮಂಜುನಾಥ್, ರೈತನಿಂದ 35 ಸಾವಿರ ರೂ. ಲಂಚ ಪಡೆಯುವಾಗ ಎಸಿಬಿ ಅಧಿಕಾರಿಗಳು ಹಾಗೂ ಸಿಬ್ಬಂದಿ ತಂಡ ದಾಳಿ ನಡೆಸಿದೆ. ಲಂಚದ ಹಣದೊಂದಿಗೆ ಆರೋಪಿಯನ್ನು ಬಂಧಿಸಿ, ಪ್ರಕರಣದ ತನಿಖೆ ಮುಂದುವರೆಸಲಾಗಿದೆ.

ಮುಂದುವರೆದ ಆನ್‌ಲೈನ್ ದೋಖಾ

ಇನ್ಸೂರೆನ್ಸ್ ಹೆಸರಲ್ಲಿ ವ್ಯಕ್ತಿಗೆ 89 ಸಾವಿರ ವಂಚನೆ

ಮೈಸೂರು, ಜು. 30–ವಿದ್ಯುತ್ ಬಿಲ್ ಪಾವತಿಸಬೇಕೆಂದು ಕರೆ ಮಾಡಿ ಆನ್‌ಲೈನ್ ಮೂಲಕ ವಂಚಿಸುತ್ತಿದ್ದ ಖದೀಮರು, ಇದೀಗ ಇನ್ಸೂರೆನ್ಸ್ ಹೆಸರಿನಲ್ಲಿ ವಂಚನೆ ಎಸಗಲಾರಂಭಿಸಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂ ನಿವಾಸಿ ಕೆ. ಸುಷ್ಮಿತಾ ಜೋಷಿ(24) ಎಂಬುವರಿಗೆ 9584738481 ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ, ಇನ್ಸೂರೆನ್ಸ್‌ಗೆ ಸಂಬಂಧಿಸಿದಂತೆ ಹಣ ಪಾವತಿಸಬೇಕೆಂದು ತಿಳಿಸಿ ಅವರ ಕ್ರೆಡಿಟ್ ಕಾರ್ಡ್ ಮಾಹಿತಿ ಹಾಗೂ ಓಟಿಪಿ ಪಡೆದು 89,354 ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತ ಎರಡು ಕುಟುಂಬಕ್ಕೆ ಮನೆ ಹಸ್ತಾಂತರ



ಮಡಿಕೇರಿ, ಜು.30– ತಿತಿಮತಿಯ ಮರಪ್ಪಾಲದಲ್ಲಿ ಈ ಹಿಂದೆ ನೆರೆ ಸಂತ್ರಸ್ತರಾದ ಎರಡು ಕುಟುಂಬಗಳಿಗೆ ಮನೆ ಹಸ್ತಾಂತರಿಸಲಾಯಿತು. ಮುರಿದ ಮನೆಯೊಂದರಲ್ಲಿ ಮಹಿಳೆಯೊಬ್ಬರು ತನ್ನ ಮಗನೊಂದಿಗೆ ವಾಸಿಸುತ್ತಿದ್ದರು. ಇದನ್ನು ಮನಗಂಡ ಜಮಾತೆ ಇಸ್ಲಾಮಿ ಹಿಂದ್ ಗೋಣಿಕೊಪ್ಪಲು ಕಾರ್ಯಕರ್ತರು, ಬೆಂಗಳೂರಿನ ಹಿರಾ ಮದರಸದ ಮಕ್ಕಳು ಸಂಗ್ರಹಿಸಿದ ಸುಮಾರು 11 ಲಕ್ಷ ರೂ. ವೆಚ್ಚದಲ್ಲಿ ಎಚ್.ಆರ್.ಎಸ್.ನ ಸಹಕಾರದೊಂದಿಗೆ ನಿರ್ಮಿಸಲಾದ ಎರಡು ಮನೆಗಳನ್ನು ಸ್ಥಳೀಯ ಪಂಚಾಯತ್ ಅಧ್ಯಕ್ಷೆ ಎಚ್.ಆಶಾ ಮತ್ತು ಇತರ ಸದಸ್ಯರ ಸಮ್ಮುಖದಲ್ಲಿ ಹಸ್ತಾಂತರಿಸಿದರು.

ಆ.2ರಂದು ಆಟಿಡೊಂಜಿ ದಿನ ಮೊಗೇರ ಕೂಟ

ಸೋಮವಾರಪೇಟೆ, ಜು.30– ಜಿಲ್ಲಾ ಮೊಗೇರ ಸೇವಾ ಸಮಾಜದ ವತಿಯಿಂದ ಆ.2ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದಲ್ಲಿರುವ ಕೊಡವ ಸಮಾಜದಲ್ಲಿ 'ಆಟಿಡೊಂಜಿ ದಿನ ಮೊಗೇರ ಕೂಟ' ಕಾರ್ಯಕ್ರಮ ನಡೆಯಲಿದೆ ಎಂದು ಸೇವಾ ಸಮಾಜದ ತಾಲೂಕು ಅಧ್ಯಕ್ಷ ಬಿ.ಎಂ. ದಾಮೋದರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ತುಳುನಾಡಿನ ಆಚಾರ–ವಿಚಾರ ಪದ್ಧತಿ ಪರಂಪರೆಯನ್ನು ಜನಾಂಗದವರಿಗೆ ತಿಳಿಸುವ ಹಾಗೂ ಆಟಿ ತಿಂಗಳ ಮಹತ್ವವನ್ನು ತಿಳಿಸುವ ಉದ್ದೇಶದಿಂದ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಟಿ ತಿಂಗಳ ವಿಶೇಷ ಖಾದ್ಯ ಆಹಾರವನ್ನು ಬಡಿಸಲಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅಧಿಕ ಅಂಕಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಮಾಹಿತಿಗೆ ಸಂಪರ್ಕಿಸಿ ಮೊ.9449998576, 9482397841

ವಿರಾಜಪೇಟೆ ಅದ್ದೂರಿ ಗೌರಿ–ಗಣೇಶೋತ್ಸವದಲ್ಲಿ

ರಾತ್ರಿ 10ರ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶವಿಲ್ಲ



ವಿರಾಜಪೇಟೆ, ಜು.30– ವಿರಾಜಪೇಟೆಯ ಐತಿಹಾಸಿಕ ಶ್ರೀ ಗೌರಿ–ಗಣೇಶೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಮುಂದಾಗಿರುವ ಶ್ರೀಗೌರಿ–ಗಣೇಶ ನಾಡಹಬ್ಬ ಒಕ್ಕೂಟದ ಪದಾಧಿಕಾರಿಗಳು ಇಲ್ಲಿನ ಪುರಭವನದಲ್ಲಿ ಪೂರ್ವಭಾವಿ ನಡೆಸಿದರು.

ಈ ವೇಳೆ ಮಾತನಾಡಿದ ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಶ್ರೀ ಗೌರಿ–ಗಣೇಶನ ಪ್ರತಿಷ್ಠಾಪನೆ ಮಾಡುವ ಸಮಿತಿಗಳು ಪೂಜೆ ಪುನಸ್ಕಾರಗಳನ್ನು ತಮಗೆ ಅನುಕೂಲವಾಗುವಂತೆ ಮಾಡಿಕೊಳ್ಳಲು ನಮ್ಮ ಅಭ್ಯಂತರವಿಲ್ಲ. ಆದರೆ ರಾತ್ರಿ 10 ಗಂಟೆಯ ನಂತರ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಗೌರಿ–ಗಣೇಶ ಪ್ರತಿಷ್ಠಾಪಿಸುವ ಸಮಿತಿಗಳು ರಾತ್ರಿ 10 ಗಂಟೆ ಒಳಗೆ ಕಾರ್ಯಕ್ರಮಗಳನ್ನು ಮುಗಿಸಿಕೊಳ್ಳಬೇಕು. ಇದು ಸರ್ಕಾರದ ಆದೇಶ. ನಿಮಗೆ ಹೆಚ್ಚು ಸಮಯ ಬೇಕಾದಲ್ಲಿ ಶಾಸಕರ ಒಪ್ಪಿಗೆ ಪಡೆಯಿರಿ, ನನ್ನ ಅಭ್ಯಂತರವಿಲ್ಲ. ನಮ್ಮಿಂದ ಎಲ್ಲಾ ರೀತಿಯ ಸಹಕಾರ ನೀಡುತ್ತೇವೆ. ನಿಯಮವನ್ನು ಪಾಲಿಸುವ ಮೂಲಕ ಶಾಂತಿಯುತವಾಗಿ ಉತ್ಸವ ನಡೆಸುವಂತಾಗಬೇಕು ಎಂದರು.

ಪುರಸಭೆಯ ಮುಖ್ಯಾಧಿಕಾರಿ ಚಂದ್ರ ಕುಮಾರ್ ಮಾತನಾಡಿ, ಗಣೇಶೋತ್ಸವಕ್ಕೆ ಸದಾ ನಮ್ಮ ಸಹಕಾರವಿದೆ, ಗಣೇಶ ಮೂರ್ತಿಯ ಪ್ರತಿಷ್ಠಾಪನಾ ಸಮಿತಿ ಸದಸ್ಯರು ಸ್ವಚ್ಛತೆ ಕಾಪಾಡಬೇಕು, ನಮ್ಮ ವ್ಯಾಪ್ತಿಗೆ ಬರುವ ಎಲ್ಲಾ ರಸ್ತೆಗಳ ಗುಂಡಿ ಮುಚ್ಚುವುದು ಮತ್ತು ಪವಿತ್ರ ಗೌರಿ ಕೆರೆಯನ್ನು ಸ್ವಚ್ಛಗೊಳಿಸಿ ಗಣೇಶನ ವಿಸರ್ಜನೋತ್ಸವಕ್ಕೆ ತೆಪ್ಪದ ವ್ಯವಸ್ಥೆ ಹಾಗೂ ವಿದ್ಯುತ್ ದೀಪಗಳ ಅಲಂಕಾರ ಮಾಡಿ ಕೊಡುವುದು ನಮ್ಮ ಜವಾಬ್ದಾರಿ. ಸಾರ್ವ ಜನಿಕರು ಸಿಕ್ಕ ಸಿಕ್ಕ ಕಡೆಗಳಲ್ಲಿ ಕಸವನ್ನು ಹಾಕದೆ ತಮ್ಮ ಜವಾಬ್ದಾರಿಯನ್ನು ಅರಿತು ನಡೆಯುವುದು ಉತ್ತಮ ಎಂದರು.

ನಾಡಹಬ್ಬ ಒಕ್ಕೂಟದ ಅಧ್ಯಕ್ಷ ಸಾಯಿನಾಥ್ ನಾಯಕ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿರಾಜಪೇಟೆಯಲ್ಲಿ ಹಿಂದಿನಿಂದಲೂ ಗೌರಿ–ಗಣೇಶೋತ್ಸವ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ಇಲ್ಲಿನ ಜನರ ಸಹಕಾರದಿಂದ ಪ್ರತಿ ವರ್ಷ ಅದ್ದೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಕಳೆದ ಎರಡು ವರ್ಷದಿಂದ ಕೋವಿಡ್ ಮತ್ತು ಪ್ರಕೃತಿ ವಿಕೋಪದ ಕಾರಣದಿಂದ ಸಾಧ್ಯವಾಗಿಲ್ಲ. ಈ ವರ್ಷ 21 ಸಮಿತಿಯವರು ಗಣೇಶನ ಪ್ರತಿಷ್ಠಾಪನೆ ಮಾಡಿ 10 ದಿನಗಳ ಕಾಲ ಪೂಜೆ ಸಲ್ಲಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿದ್ಯುತ್ ಅಲಂಕಾರ ಮಂಟಪಗಳಲ್ಲಿ ಪಟ್ಟಣದ ಮುಖ್ಯ ಬೀದಿಗಳಲ್ಲಿ ರಾತ್ರಿಯೆಲ್ಲಾ ಮೆರವಣಿಗೆ ನಡೆಸಿ ಮರುದಿನ ವಿಸರ್ಜನೋತ್ಸವ ಮಾಡಲಾಗುವುದು. ಆದುದರಿಂದ ಪೊಲೀಸ್ ಇಲಾಖೆ ರಾತ್ರಿ 10 ಗಂಟೆಗೆ ನಿಬಂಧನೆಯನ್ನು ಸಡಿಲಿಕೆ ಮಾಡುವ ಮೂಲಕ ಉತ್ಸವಕ್ಕೆ ಅವಕಾಶ ಮಾಡಿಕೊಡಬೇಕು ಎಂದರು.

ಗೌರಿ–ಗಣೇಶ ಸಮಿತಿಯ ಸದಸ್ಯರುಗಳು ಮಾತನಾಡಿ ಮುಖ್ಯ ರಸ್ತೆಗಳು ಗುಂಡಿಬಿದ್ದಿವೆ. ಇಲಾಖೆಯ ಅಧಿಕಾರಿಗಳು ಹಬ್ಬದ ವೇಳೆಗೆ ರಸ್ತೆಯನ್ನು ಸರಿಪಡಿಸುವಂತೆ ಆಗ್ರಹಿಸಿದಾಗ, ಲೋಕೋಪಯೋಗಿ ಇಲಾಖೆಯ ಅಭಿಯಂತರ ರಾಮಣ್ಣಗೌಡ ಮಾತನಾಡಿ, ಆದಷ್ಟು ಬೇಗ ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು ಎಂದರು. ಸಮಿತಿಯ ಟಿ.ಪಿ. ಕೃಷ್ಣ ಸಭೆಯಲ್ಲಿ ಮಾತನಾಡಿ, ಕಳೆದ ಎರಡು ವರ್ಷ ಕೊಡಗಿನಲ್ಲಿ ಪ್ರಕೃತಿ ವಿಕೋಪ, ನಂತರದಲ್ಲಿ ಕೋವಿಡ್ ಕಾರಣದಿಂದ ಗಣೇಶೋತ್ಸವ ಆಚರಣೆ ಸಾಧ್ಯವಾಗಿಲ್ಲ. ಈ ವರ್ಷವಾದರೂ ಹಿಂದಿನಂತೆಯೇ ವಿಜೃಂಭಣೆಯಿಂದ ಆಚರಿಸಬೇಕು. ಇದಕ್ಕೆ ಪೊಲೀಸ್ ಇಲಾಖೆಯ ಸಹಕಾರ ಅಗತ್ಯ ಎಂದರು.

ಪುರಸಭೆ ಸದಸ್ಯ ರಜನಿಕಾಂತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಸೆಸ್ಕ್ ಇಲಾಖೆ ಅಧಿಕಾರಿ ದಿಲೀಪ್, ಪುರಸಭೆ ಉಪಾಧ್ಯಕ್ಷ ವಿನಾಂಕ್ ಕುಟ್ಟಪ್ಪ, ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ, ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿಗಳಾದ ಶ್ರೀಧರ್ ಹಾಗೂ ರವಿಕುಮಾರ್ ಮತ್ತು ವಿವಿದ ಇಲಾಖೆಯ ಅಧಿಕಾರಿಗಳು, ಗಣೇಶೋತ್ಸವ 21 ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಖಂಡಿಸಿ

ಶನಿವಾರಸಂತೆಯಲ್ಲಿ ಬೃಹತ್ ಪ್ರತಿಭಟನೆ



ಮಡಿಕೇರಿ,ಜು.30–ಕೊಡಗಿನ ಗಡಿ ಭಾಗವಾದ ಶನಿವಾರಸಂತೆಯಲ್ಲಿ ಪ್ರವೀಣ್ ನೆಟ್ಟಾರು ಹತ್ಯೆಯನ್ನು ಖಂಡಿಸಿ ಹಿಂದೂ ಪರ ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಿ, ಹಿಂದೂ ಕಾರ್ಯಕರ್ತರಿಗೆ ರಕ್ಷಣೆ ನೀಡುವಲ್ಲಿ ಸರಕಾರ ವಿಫಲವಾಗಿದೆ ಎಂದು ತೀವ್ರವಾಗಿ ಖಂಡಿಸಿದವು.

ವಿಶ್ವ ಹಿಂದೂ ಪರಿಷತ್, ಬಜರಂಗದಳ, ಹಿಂದೂ ಜಾಗರಣಾ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಶನಿವಾರ ಮಧ್ಯಾಹ್ನ ನೂರಾರು ಹಿಂದೂ ಕಾರ್ಯಕರ್ತರು ಕೇಸರಿ ಧ್ವಜಗಳೊಂದಿಗೆ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಸಮಾವೇಶಗೊಂಡು, 'ಮಾನವ ಸರಪಳಿ' ರಚಿಸುವ ಮೂಲಕ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣವನ್ನು ವಿರೋಧಿಸಿದರು.

ಹಿಂದೂ ಕಾರ್ಯಕರ್ತ ಹರ್ಷ ಸೇರಿದಂತೆ ಪ್ರವೀಣ್ ನೆಟ್ಟಾರುವರೆಗೆ ಹಲವು ಹಿಂದೂ ಕಾರ್ಯಕರ್ತರ ಹತ್ಯೆ ನಡೆದಿದ್ದರೂ, ರಾಜ್ಯ ಸರ್ಕಾರ ದುಷ್ಕರ್ಮಿಗಳ ವಿರುದ್ಧ ಕಠಿಣ ನಿಲುವು ತಳೆದಿಲ್ಲವೆಂದು ಪ್ರತಿಭಟನಾಕಾರರು ಆರೋಪಿಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಕಂದಾಯ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಕಂದಾಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಸಂಚಾಲಕ ಅನೀಶ್ ಮಾತನಾಡಿ, ಪ್ರವೀಣ್ ನೆಟ್ಟಾರು ಹತ್ಯಾ ಪ್ರಕರಣದಲ್ಲಿ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಸೂಕ್ತ ಕ್ರಮ ಕೈಗೊಳ್ಳದೆ ಮೌನವಾಗಿದ್ದಾರೆ. ಪ್ರಸ್ತುತ ಹಿಂದೂ ಕಾರ್ಯಕರ್ತರ ಹತ್ಯೆ ಆರೋಪಿಗಳಿಗೆ ಜೈಲಿನಲ್ಲೆ ಹೈಫೈ ಜೀವನ ನಡೆಸಲು ಅನುವು ಮಾಡಿಕೊಡುತ್ತಿದ್ದಾರೆ ಎಂದು ಕಟುವಾಗಿ ನುಡಿದರು. ಹಿಂದೂ ಕಾರ್ಯಕರ್ತರ ರಕ್ಷಣೆಗೆ ಬಿಜೆಪಿ ಸರ್ಕಾರ ಇದೆಯೆಂದು ನಾವು ಭಾವಿಸಿದ್ದೆವು. ಆದರೆ, ಹಿಂದೂಗಳ ರಕ್ಷಣೆಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲವೆಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ವಿಹಿಂಪ ತಾಲೂಕು ಸಂಚಾಲಕ ಜೀವನ್ ನೇಗಳ್ಳೆ ಮಾತನಾಡಿ, ಸಂಸದ ತೇಜಸ್ವಿ ಸೂರ್ಯ ಅವರು ತಮ್ಮ ಹೇಳಿಕೆಯಲ್ಲಿ, ಎಲ್ಲ ಮನೆಗಳನ್ನು ಕಾಯಲು ಸಾಧ್ಯವೇ ಎಂದು ಹಿಂದೂ ಕಾರ್ಯಕರ್ತರನ್ನು ಗುರಿಯಾಗಿಸಿ ಹಗುರವಾಗಿ ಮಾತನಾಡಿದ್ದಾರೆ. ನಮ್ಮನ್ನು ಕಾಯುವುದು ಬೇಡ. ವಿಶ್ವ ಹಿಂದೂ ಪರಿಷತ್, ಬಜರಂಗದಳ ಕಾರ್ಯಕರ್ತರು ನಮ್ಮನ್ನು ನಾವು ಕಾಯುತ್ತೇವೆ ಎಂದು ತೀಕ್ಷ್ಣವಾಗಿ ನುಡಿದರು.

ಬಿಜೆಪಿ ಮುಖಂಡ ರಘು ಮಾತನಾಡಿ, ಈ ರಾಷ್ಟ್ರದಲ್ಲಿ ಹಿಂದೂಗಳ ಹತ್ಯೆಯಾಗುತ್ತಿರುವುದು ಒಂದು ದೊಡ್ಡ ದುರಂತ. ತಪ್ಪು ಮಾಡಿದವರಿಗೆ ಗಲ್ಲು ಶಿಕ್ಷೆಯಾಗಲಿ. ಹತ್ಯಾ ಆರೋಪಿಗಳನ್ನು ಕೇವಲ ಬಂಧಿಸಿ ಜಾಮೀನಿನಲ್ಲಿ ಬಿಡುಗಡೆ ಮಾಡಬೇಡಿ ಎಂದು ಸರ್ಕಾರವನ್ನು ಆಗ್ರಹಿಸಿದರು.

ಪ್ರತಿಭಟನೆಯ ಸಂದರ್ಭ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಅರ್ಧ ಗಂಟೆಗಳ ಕಾಲ ರಸ್ತೆ ತಡೆ ನಡೆಸಿ ಹತ್ಯಾ ಪ್ರಕರಣದ ಬಗ್ಗೆ ಆಕ್ರೋಶ ವ್ಯಕ್ತಡಿಸಿದರು. ಪ್ರತಿಭಟನೆಯಲ್ಲಿ ವಿ.ಹಿಂ.ಪ ಹೋಬಳಿ ಅಧ್ಯಕ್ಷ ಧನಂಜಯ್, ಹೋಬಳಿ ಕಾರ್ಯದರ್ಶಿ ತನ್ಮಯಿ, ಬಜರಂಗ ದಳದ ಪುನಿತ್, ಹಿಂದೂ ಸಂಘಟನೆಗಳ ಪ್ರಮುಖರು, ಕಾರ್ಯಕರ್ತರು ಪಾಲ್ಗೊಂಡಿದ್ದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಶನಿವಾರಸಂತೆ ಪಟ್ಟಣ ವ್ಯಾಪ್ತಿಯಲ್ಲಿ ಬಿಗಿ ಪೊಲೀಸ್ ಬಂದೋ ಬಸ್ತ್ ಮಾಡಲಾಗಿತ್ತು. ಸೂಕ್ಷ್ಮ ಪ್ರದೇಶವಾದ ಹಿನ್ನೆಲೆಯಲ್ಲಿ ಮುಂಜಾಗೃತಾ ಕ್ರಮವಾಗಿ ಮದ್ಯ ಮಳಿಗೆಗಳನ್ನು ಕೂಡ ಬಂದ್ ಮಾಡಲಾಗಿತ್ತು.



ದಕ್ಷಿಣಕನ್ನಡ ಜಿಲ್ಲೆ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದಲ್ಲಿ ನಡೆದಿರುವ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣವನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳ ಸಂಘಟನೆಗಳ ವತಿಯಿಂದ ಪೊನ್ನಂಪೇಟೆ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಆಮ್ ಆದ್ಮಿಯಿಂದ ಗ್ರಾಮ ಸಂಪರ್ಕ ಅಭಿಯಾನ

ಮಡಿಕೇರಿ,ಜು.30– ಆಮ್ ಆದ್ಮಿ ಪಾರ್ಟಿಯ ಕೊಡಗು ಜಿಲ್ಲಾ ಘಟಕದ ವತಿಯಿಂದ ಗ್ರಾಮ ಸಂಪರ್ಕ ಅಭಿಯಾನ ನಡೆಯಿತು. ಮೂರ್ನಾಡು ಹಾಗೂ ವಿರಾಜಪೇಟೆ ಪಟ್ಟಣದಲ್ಲಿ ಸಾರ್ವಜನಿಕರಿಗೆ ಕರಪತ್ರವನ್ನು ನೀಡಿ ಪಕ್ಷದ ಉದ್ದೇಶ ಮತ್ತು ಸಾಧನೆಗಳನ್ನು ಪ್ರಚಾರ ಮಾಡಲಾಯಿತು.

ಆಮ್ ಆದ್ಮಿ ಪಾರ್ಟಿಯ ಜಿಲ್ಲಾ ಸಂಚಾಲಕ ಎಂ.ಕೆ.ಅಪ್ಪಯ್ಯ ಮಾತನಾಡಿ, ವಿರಾಜಪೇಟೆ ಹಾಗೂ ಮೂರ್ನಾಡು ಪಟ್ಟಣದಲ್ಲಿ ಜನ ಸಂಪರ್ಕ ಅಭಿಯಾನಕ್ಕೆ ಸುಮಾರು 2 ಸಾವಿರಕ್ಕಿಂತಲೂ ಹೆಚ್ಚು ಜನರಿಂದ ಪಕ್ಷದ ಬಗ್ಗೆ ಉತ್ತಮ ಸ್ಪಂದನೆ ದೊರೆತ್ತಿದ್ದು, ಮುಂದಿನ ದಿನಗಳಲ್ಲಿ ಪಕ್ಷವನ್ನು ಬೆಂಬಲಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಅಲ್ಲದೆ ಮೂರ್ನಾಡು ಭಾಗದಲ್ಲಿ ಅನೇಕರು ಸ್ವಯಂ ಪ್ರೇರಿತರಾಗಿ ತಮ್ಮ ಹೆಸರು ಮತ್ತು ಮೊಬೈಲ್ ಸಂಪರ್ಕ ಸಂಖ್ಯೆ ನೀಡಿ ಪಾರ್ಟಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಾಗಿ ವಿಶ್ವಾಸ ವ್ಯಕ್ತಪಡಿಸಿದ್ದು, ಇದೊಂದು ಆಶಾದಾಯಕ ಬೆಳವಣಿಗೆಯಾಗಿದೆ ಎಂದರು.

ಈ ಸಂದರ್ಭ ಪಕ್ಷದ ಜಿಲ್ಲಾ ಮುಖಂಡರುಗಳಾದ ಬಾಲ ಸುಬ್ರಮಣ್ಯ, ಕೆ.ಸಿ. ವೆಂಕಟೇಶ್, ಮಂಜುನಾಥ್ ಮತ್ತು ಎನ್.ಬಿ.ಉದಯಕುಮಾರ್ ಹಾಜರಿದ್ದರು.

ನಾಳೆ ರಕ್ತದಾನ ಶಿಬಿರ

ಸೋಮವಾರಪೇಟೆ, ಜು.30– ಇಲ್ಲಿನ ತಥಾಸ್ತು ಸಾತ್ವಿಕ ಸಂಸ್ಥೆ ವತಿಯಿಂದ ಮಡಿಕೇರಿ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಆ.1ರಂದು ಬೆಳಿಗ್ಗೆ 11ಕ್ಕೆ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಚ್.ವಿ.ಉದಯ ಮಾಳವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ವಿಶೇಷ ಪೂಜೆ

ಕುಶಾಲನಗರ, ಜು.30– ಪಟ್ಟಣದ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಮೊದಲ ಶನಿವಾರ ರಿಜಿಡ್ ಗ್ರೂಪ್ ವತಿಯಿಂದ ಹೋಮ ಮತ್ತು ವಿಶೇಷ ಪೂಜೆ ನಡೆಸಲಾಯಿತು.



ಕಳೆದ 16 ವರ್ಷದಿಂದ ರಿಜಿಡ್ ಗ್ರೂಪ್ ವತಿಯಿಂದ ವಿಶೇಷ ಪೂಜೆ ಆಯೋಜಿಸಿಕೊಂಡು ಬರುತ್ತಿದ್ದು, ಶನಿವಾರ ಶನಿಕಥಾ ಶ್ರವಣದ ಜೊತೆಗೆ ಮೃತ್ಯುಂಜಯ ಹೋಮ, ನವಗ್ರಹ ಹೋಮ, ಕನ್ನಿಕಾ ಪರಮೇಶ್ವರಿ ಹೋಮ ಮತ್ತು ಶನಿದೇವರ ವಿಶೇಷ ಪೂಜೆಯನ್ನು ಅರ್ಚಕ ಯೋಗೀಶ್ ಭಟ್ ಮತ್ತು ಗಿರೀಶ್ ಭಟ್ ನೇತೃತ್ವದಲ್ಲಿ ನಡೆಸಲಾಯಿತು. ಆರ್ಯವೈಶ್ಯ ಮಂಡಳಿಯ ಅಧ್ಯಕ್ಷ ಬಿ.ಎಲ್.ಉದಯಕುಮಾರ್ ಮತ್ತು ಆಡಳಿತ ಮಂಡಳಿ ಸದಸ್ಯರು, ರಿಜಿಡ್ ಗ್ರೂಪ್‌ನ ಕೆ.ಎಸ್.ನಾಗೇಶ್, ವಿ.ವಿ.ತಿಲಕ್, ಎನ್.ವಿ.ಬಾಬು, ಎ.ಎಸ್.ಕುಮಾರ್, ನಾಗಪ್ರವೀಣ್, ಎ.ವಿ.ಸಂತೋಷ್, ಪಿ.ಕೆ.ರಘು, ವಿ.ಆರ್.ಮಂಜುನಾಥ್, ಎಸ್.ಎಂ.ನಾಗೇಂದ್ರ ಎಸ್.ಎಸ್.ಮನೋಹರ್, ಗಾಯತ್ರಿ ಬಾಬು, ಶಾಲಿನಿ ನಾಗೇಶ್, ರಮೇಶ್ ಇತರರು ಇದ್ದರು.

2.91 ಲಕ್ಷ ರೂ. ಹಿಂದಿರುಗಿಸಿದ ಮಾದಪ್ಪನ ಭಕ್ತ



ಹನೂರು,ಜು.30–ಲಾಡು ಪ್ರಸಾದದ ಜೊತೆ ಸಿಬ್ಬಂದಿ ಹಣದ ಬ್ಯಾಗನ್ನು ಕೊಟ್ಟು ತೀವ್ರ ಚರ್ಚೆಗೆ ಕಾರಣವಾಗಿದ್ದ ತಾಲೂಕಿನ ಯಾತ್ರಾ ಕ್ಷೇತ್ರ ಮಲೆಮಹದೇಶ್ವರ ಬೆಟ್ಟದ ಪ್ರಕರಣ ಸುಖಾಂತ್ಯ ಕಂಡಿದ್ದು, ಹಣ ಮತ್ತೆ ಪ್ರಾಧಿಕಾರದ ಬೊಕ್ಕಸ ಸೇರಿದೆ.

ಬೆಂಗಳೂರು ಮೂಲದ ಭಕ್ತ ನರಸಿಂಹ ಎಂಬುವರು ಮಾದಪ್ಪನ ಹಣವನ್ನು ಹಿಂದಿರುಗಿಸಿದ್ದಾರೆ.

ಗುರುವಾರ ಭೀಮನ ಅಮಾವಾಸ್ಯೆ ಪ್ರಯುಕ್ತ ಭಕ್ತರ ದಂಡೇ ಹರಿದು ಬಂದಿತ್ತು. ಈ ವೇಳೆ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಾಧಿಕಾರದ ಸಿಬ್ಬಂದಿಯೊಬ್ಬರು ಭಕ್ತರಿಗೆ ವಿಶೇಷ ದರದ ಟಿಕೆಟ್ ನೀಡಿ, ಲಾಡು ಪ್ರಸಾದದ ಜೊತೆ 2.91 ಲಕ್ಷ ಹಣವಿದ್ದ ಬ್ಯಾಗ್ ಅನ್ನು ಕಣ್ತಪ್ಪಿ ನೀಡಿದ್ದರು. ಹಣ ಕಳೆದಿದ್ದ ಸಂಬಂಧ ಮಲೆ ಮಹದೇಶ್ವರಬೆಟ್ಟ ಠಾಣೆಯ ಪೊಲೀಸರಿಗೆ ದೂರು ನೀಡಲಾಗಿತ್ತು. ಅಲ್ಲದೆ ನಷ್ಟವಾದ ಹಣವನ್ನು ಸಿಬ್ಬಂದಿಯೇ ಭರಿಸುವಂತೆ ಪ್ರಾಧಿಕಾರದ ಅಧಿಕಾರಿಗಳು ತಾಕೀತು ಮಾಡಿದ್ದರು.

ಕಣ್ತಪ್ಪಿನಿಂದ ನಡೆದ ಘಟನೆ ಆಗಿದ್ದರಿಂದ ಯಾವುದೇ ಪ್ರಕರಣ ದಾಖಲಿಸಿಕೊಳ್ಳದೆ ಕಾರ್ಯಾಚರಣೆ ಕೈಗೊಂಡ ಪೊಲೀಸರು, ಸಿಸಿಟಿವಿ ಮೂಲಕ ಗುರುತು ಪತ್ತೆ ಹಚ್ಚಿ ಭಕ್ತನನ್ನು ಸಂಪರ್ಕಿಸಿ ಹಣವನ್ನು ವಾಪಸ್ ಮಾಡಿಸಿದ್ದಾರೆ. ಸದ್ಯ ಲಾಡುಪ್ರಸಾದ ಜೊತೆ ಹೋಗಿದ್ದ ಹಣ ಮತ್ತೆ ಪ್ರಾಧಿಕಾರಕ್ಕೆ ಮರಳಿದೆ.

ಸ್ಮೃತಿ ಇರಾನಿ ವಿರುದ್ಧ ಜಿಲ್ಲಾ ಯುವ ಕಾಂಗ್ರೆಸ್ ಪ್ರತಿಭಟನೆ



ಚಾಮರಾಜನಗರ,ಜು.30–ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಬಗ್ಗೆ ಹಗುರವಾಗಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಮಾತನಾಡಿ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಜಿಲ್ಲಾ ಯುವ ಕಾಂಗ್ರೆಸ್‌ನಿಂದ ನಗರದಲ್ಲಿ ಪ್ರತಿಭಟಿಸಲಾಯಿತು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್ ಅವರ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾನಿರತರು, ಸತ್ತಿರಸ್ತೆಯಲ್ಲಿ ರಸ್ತೆತಡೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಅಬ್ದುಲ್ ಅಜೀಜ್ ಮಾತನಾಡಿ, ಗುರುವಾರ ಲೋಕಸಭೆಯಲ್ಲಿ ರಾಷ್ಟ್ರಪತಿ ವಿಚಾರವಾಗಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾಗಾಂಧಿ ಅವರ ಬಗ್ಗೆ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವಹೇಳನಕಾರಿಯಾಗಿ ಮಾತನಾಡಿ ಅಪಮಾನ ಮಾಡಿರುವುದು ಖಂಡನೀಯ. ಕೂಡಲೇ ಅವರು ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಯುವ ಕಾಂಗ್ರೆಸ್‌ನಿಂದ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹೊಸಹಳ್ಳಿ ಮಧುಸೂದನ್, ಹೆಚ್.ಎಂ.ಮಧು, ಉಪಾಧ್ಯಕ್ಷರಾದ ಸೋಮಶೇಖರ್, ನಾಗೇಂದ್ರ ನಾಯಕ, ಕಾರ್ಯದರ್ಶಿಗಳಾದ ನಾಗೇಶ್, ಪ್ರದೀಪ್ ಗೌಡ, ಶ್ರೀನಿವಾಸ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ವರುಣ್‌ಕುಮಾರ್, ಸುರೇಶ್, ಮಾದೇಶ್, ಚೇತನ್, ಕಾರ್ಯದರ್ಶಿ ಸೋಮೇಶ್ ಇದ್ದರು.

ಹುಲಿ ಸಂಖ್ಯೆ ರಾಜ್ಯದಲ್ಲೇ ಹೆಚ್ಚು

ಕೊಳ್ಳೇಗಾಲ, ಜು.30–ನಮ್ಮ ರಾಷ್ಟ್ರೀಯ ಪ್ರಾಣಿಯಾದ ಹುಲಿಗಳ ಸಂಖ್ಯೆ ಕರ್ನಾಟಕದಲ್ಲಿಯೇ ಅತಿ ಹೆಚ್ಚಿದ್ದು, ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ನಮ್ಮ ಜಿಲ್ಲೆಯ ಬಂಡೀಪುರ ಎಂಬುದು ನಮ್ಮ ಹೆಮ್ಮೆ ಎಂದು ಕೊಳ್ಳೇಗಾಲ ವನ್ಯಜೀವಿ ವಲಯ ಅರಣ್ಯಾಧಿಕಾರಿ ವಾಸು ಅಭಿಪ್ರಾಯಪಟ್ಟರು.

ಜೆಎಸ್‌ಬಿ ಪ್ರತಿಷ್ಠಾನದಿಂದ ದಿವ್ಯಜ್ಞಾನ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪ್ರಕೃತಿ ಸಂರಕ್ಷಣಾ ದಿನ ಮತ್ತು ಅಂತಾರಾಷ್ಟ್ರೀಯ ಹುಲಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಭೂಮಿಯಲ್ಲಿ ಅಳಿವಿನಂಚಿನಲ್ಲಿರುವ ಪ್ರಾಣಿ–ಪಕ್ಷಿಗಳು ಹಾಗೂ ಗಿಡ–ಮರಗಳನ್ನು ಸಂರಕ್ಷಿಸುವುದು ವಿಶ್ವ ಪ್ರಕೃತಿ ಸಂರಕ್ಷಣಾ ದಿನ ಆಚರಿಸುವ ಮುಖ್ಯ ಉದ್ದೇಶ. ಭೂತಾಯಿಯನ್ನು ರಕ್ಷಿಸುವಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮಾಡುವುದು ಬಹಳ ಮುಖ್ಯ. ಜಿಲ್ಲೆಯಲ್ಲಿ ರಾಜ್ಯದ ಒಟ್ಟು ಶೇ.49 ರಷ್ಟು ಪ್ರದೇಶ ಅರಣ್ಯದಿಂದ ಆವೃತವಾಗಿರುವುದು ನಮ್ಮೆಲ್ಲರಿಗೂ ವರದಾನ ಎಂದರು.

ಉಪವಲಯ ಅರಣ್ಯಾಧಿಕಾರಿ, ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕೃತ ಪ್ರಭುಸ್ವಾಮಿ ಮಾತನಾಡಿದರು. ಈ ಸಂದರ್ಭದಲ್ಲಿ ಜೆಎಸ್‌ಬಿ ಪ್ರತಿಷ್ಠಾನದ ಶಶಿಕುಮಾರ್, ಶಾಲೆಯ ಕಾರ್ಯದರ್ಶಿ ವೀರಭದ್ರಯ್ಯ, ಅರಣ್ಯ ಇಲಾಖೆಯ ಮಹೇಶ್ ಕಟ್ನವಾಡಿ, ರಾಮಚಂದ್ರ, ಶಿಕ್ಷಕಿಯರಾದ ಭವ್ಯಶ್ರೀ, ತೇಜಸ್ವಿನಿ, ರಮ್ಯಶ್ರೀ, ಶೋಭಾ, ದಿವ್ಯಕುಮಾರಿ, ಸೋಫಿಯಾ, ದಿವ್ಯಶ್ರೀ, ಜಲಜಾ, ನಾಗವೇಣಿ ಇತರರು ಹಾಜರಿದ್ದರು.

ತೆಂಗಿನ ಸಸಿಗಳ ಮಾರಾಟ

ಚಾಮರಾಜನಗರ, ಜು.30–ಸುವರ್ಣಾವತಿ ತೋಟಗಾರಿಕೆ ಕ್ಷೇತ್ರದಲ್ಲಿ ಇಲಾಖೆಯಿಂದ ದೃಢೀಕರಿಸಿದ ತೆಂಗಿನ ಸಸಿಗಳನ್ನು ರೈತರಿಗೆ ಇಲಾಖಾ ದರದಲ್ಲಿ ಪ್ರತಿ ಗಿಡಕ್ಕೆ 75 ರೂ.ರಂತೆ ಮಾರಾಟ ಮಾಡಲಾಗುತ್ತದೆ. ಮಾಹಿತಿಗೆ ಮೊ.9620106225, 9008394393.

ಹಿಂದೂ ಕಾರ್ಯಕರ್ತರ ಹತ್ಯೆ ಖಂಡಿಸಿ

ಹಿಂದೂ ಹಿತರಕ್ಷಣಾ ವೇದಿಕೆ ಭಾರೀ ಪ್ರತಿಭಟನೆ



ಚಾಮರಾಜನಗರ, ಜು.30–ರಾಜ್ಯದಲ್ಲಿ ನಡೆಯುತ್ತಿರುವ ಹಿಂದು ಕಾರ್ಯಕರ್ತರ ಹತ್ಯೆಯನ್ನು ಖಂಡಿಸಿ ಹಿಂದೂ ಹಿತರಕ್ಷಣಾ ವೇದಿಕೆಯಿಂದ ನಗರದಲ್ಲಿ ಶನಿವಾರ ಭಾರೀ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಚಾಮರಾಜೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನದವರೆಗೆ ತೆರಳಿ ಭವನದ ಪ್ರವೇಶ ದ್ವಾರದ ಮುಂದೆ ಕೆಲ ಕಾಲ ಪ್ರತಿಭಟಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಮ್ಮ ವಿವಿಧ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳ ಮೂಲಕ ಅಶಾಂತಿ ಸೃಷ್ಟಿಸಿ, ಹಿಂದೂಗಳ ಪರವಾಗಿ ಧ್ವನಿ ಎತ್ತುವವರನ್ನು ಕೊಲೆ ಮಾಡುವ ಮೂಲಕ ಜನರಲ್ಲಿ ಭಯದ ವಾತಾವರಣ ಉಂಟು ಮಾಡುತ್ತಿರುವ ರಾಷ್ಟ್ರದ್ರೋಹಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ರಾಷ್ಟ್ರದ್ರೋಹಿ ಕೆಲಸದಲ್ಲಿ ತೊಡಗಿರುವ ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪರಿವಾರ ಸಂಘಟನೆಯ ಪ್ರವೀಣ್ ನೆಟ್ಟಾರು ಹತ್ಯೆ ಸಾಮಾನ್ಯ ವ್ಯಕ್ತಿಗಳಲ್ಲಿ ಭಯದ ವಾತಾವರಣ ಸೃಷ್ಟಿಸಿದೆ. ಹಿಂದೂ ಪರ ಹೋರಾಟಗಳಲ್ಲಿ ಯಾರೂ ಭಾಗವಹಿಸಬಾರದು ಎಂಬ ಭಯ ಉಂಟು ಮಾಡಲು ಇಂತಹ ಕೃತ್ಯ ಮಾಡುತ್ತಿದ್ದು, ಅರಾಜಕತೆ ಸೃಷ್ಟಿಸಲಾಗುತ್ತಿದೆ ಎಂದು ದೂರಿದರು.

ಹಿಂದಿನಿಂದಲೂ ನಿರಂತರವಾಗಿ ನಡೆಯುತ್ತಿರುವ ಹಿಂದೂ ಕಾರ್ಯಕರ್ತರ ಹತ್ಯೆ ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ, ಅಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ಮರಣ ದಂಡನೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಸರ್ಕಾರ ಇಂತಹ ಪ್ರಕರಣಗಳು ಮರುಕಳಿಸದಂತೆ ಕಠಿಣ ನಿಲುವು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶಾಸಕ ಸಿ.ಎಸ್.ನಿರಂಜನ ಕುಮಾರ್, ಮಾಜಿ ಶಾಸಕ ಶಾಸಕರಾದ ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ, ನಂಜುಂಡಸ್ವಾಮಿ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಸುಂದರ್, ಚಾ.ನಗರ ನಗರಸಭಾ ಅಧ್ಯಕ್ಷೆ ಆಶಾ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ. ಬಸವಣ್ಣ, ಚಾಮುಲ್ ಅಧ್ಯಕ್ಷ ನಾಗೇಂದ್ರ, ಜಿಪಂ ಮಾಜಿ ಅಧ್ಯಕ್ಷೆ ಜಿ. ನಾಗಶ್ರೀಪ್ರತಾಪ್, ಆರ್‌ಎಸ್‌ಎಸ್ ಮುಖಂಡ ಸಂದೇಶ್, ಬಿಜೆಪಿ ಮುಖಂಡರಾದ ಅಮ್ಮನಪುರ ಮಲ್ಲೇಶ್, ಮಂಗಲ ಶಿವಕುಮಾರ್, ಕುಲಗಾಣ ಶಾಂತಮೂರ್ತಿ, ಎಂಆರ್‌ಎಫ್ ನಾಗರಾಜು, ಮನೋಜ್ ಪಟೇಲ್, ಮಹೇಶ್, ದತ್ತೇಶ್‌ಕುಮಾರ್, ಡಾ. ಎ.ಆರ್.ಬಾಬು, ಸೋಮನಾಯಕ, ವೃಷಬೇಂದ್ರಪ್ಪ ಬಸವಣ್ಣ ಶಿವಕುಮಾರ್, ಶಿವರಾಜು, ಎಂ.ರೇವಣ್ಣ ಎಸ್.ಬಾಲಸುಬ್ರಮಣ್ಯ, ಕೆವೀರಭದ್ರಸ್ವಾಮಿ ಇತರರು ಪ್ರತಿಭಟನೆಯಲ್ಲಿದ್ದರು.

ಹನೂರಲ್ಲಿ ಉಪ್ಪಾರ ವಿದ್ಯಾರ್ಥಿಗಳಿಗೆ ಪುರಸ್ಕಾರ, ಭಗೀರಥ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ



ಹನೂರು, ಜು.30–ಪಟ್ಟಣದ ಶ್ರೀ ಗೌರಿಶಂಕರ್ ಕಲ್ಯಾಣ ಮಂಟಪದಲ್ಲಿ ಉಪ್ಪಾರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಭಗೀರಥ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮವನ್ನು ಬಿಜೆಪಿ ಜಿಲ್ಲಾ ಓಬಿಸಿ ಮೋರ್ಚಾ ಸಂಯೋಜಕ ಜನಧ್ವನಿ ವೆಂಕಟೇಶ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಯಾವುದೇ ನಿರೀಕ್ಷೆ ಇಲ್ಲದೆ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಕಾಡಂಚಿನ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ನಾವು 21ನೇ ಶತಮಾನದಲ್ಲಿದ್ದರೂ ಇನ್ನೂ ಸಾಕಷ್ಟು ಸಮಸ್ಯೆಗಳ ನಡುವೆಯೇ ಜೀವನ ಮಾಡು ತ್ತಿದ್ದೇವೆ. ಇಂತಹ ಸಮಸ್ಯೆಗಳಿಗೆ ಮುಕ್ತಿ ಸಿಗಬೇಕಾದರೆ ನಾವೆಲ್ಲರೂ ಒಂದಾಗಬೇಕು. ನಮಗಾಗಿ ಅಲ್ಲದಿದ್ದರೂ ನಮ್ಮ ಮುಂದಿನ ಪೀಳಿಗೆಗಾಗಿ ನಾವೆಲ್ಲರೂ ಒಗ್ಗಟ್ಟಾಗಲೇಬೇಕು. ಇನ್ನು ಮುಂದಾದರೂ ಒಟ್ಟಾಗಿ ಸೇರಿ ಸಮಸ್ಯೆಗಳಿಗೆ ಮುಕ್ತಿ ನೀಡುವುದರೊಂದಿಗೆ ಕಾಡಂಚಿನ ಗ್ರಾಮಗಳಲ್ಲಿ ನಾವು ಜನರ ಸೇವೆಗೆ ಮುಂದಾಗಿದ್ದೇವೆ. ಹಾಗಾಗಿ ಸೇವೆಯನ್ನೇ ನಂಬಿರುವ ನಮಗೆ ಎಲ್ಲರೂ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ್ ಮಾತನಾಡಿ, ಓದುವ ಮಕ್ಕಳಿಗೆ ಪ್ರೋತ್ಸಾಹ, ಪುರಸ್ಕರಿಸಿರುವುದು ಖುಷಿ ವಿಚಾರ. ಅಲ್ಲದೆ, ವೆಂಕಟೇಶ್ ಅವರು ಹನೂರು ಭಾಗದಲ್ಲಿ ಅನೇಕ ಜನಪ್ರಿಯ ಕಾರ್ಯಕ್ರಮದೊಂದಿಗೆ ಜನರ ಸೇವೆ ಮಾಡುತ್ತಿದ್ದಾರೆ. ಇಂಥವರಿಗೆ ಎಲ್ಲರೂ ಸಹಕಾರ ನೀಡಿದರು.

ಬಳಿಕ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುನಲ್ಲಿ ಅತೀ ಹೆಚ್ಚು ಅಂಕ ಪಡೆದ ಮಕ್ಕಳನ್ನು ಪುರಸ್ಕರಿಸಲಾಯಿತು.

ಈ ಸಂದರ್ಭದಲ್ಲಿ ಓಬಿಸಿ ಜಿಲ್ಲಾ ಅಧ್ಯಕ್ಷ ನಟರಾಜೇಗೌಡ, ಮಂಜು ನಾಥ ಸ್ವಾಮೀಜಿ, ಎಸ್‌ಟಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಜಯಸುಂದರ್, ಮಹಾ ದೇವ ಸ್ವಾಮೀಜಿ, ನರಸಿಂಹಮೂರ್ತಿ, ಸೋಮಣ್ಣ ಉಪ್ಪಾರ್, ಮಹದೇವ ಶೆಟ್ಟಿ, ಸತ್ತೇಗಾಲ ರಾಜಣ್ಣ, ಶ್ರೀನಿವಾಸ್, ಲೋಕೇಶ್ ಸೇರಿದಂತೆ ಇತರರಿದ್ದರು.

ಇಂದು ಧ್ರುವನಾರಾಯಣ್ ಹುಟ್ಟುಹಬ್ಬ ಜಿಲ್ಲಾದ್ಯಂತ ಸೇವಾ ಕಾರ್ಯಕ್ರಮ

ಚಾಮರಾಜನಗರ, ಜು.30–ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ 61ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಭಾನುವಾರ (ಜು.31) ಅವರ ಅಭಿಮಾನಿ ಬಳಗದ ಆಶ್ರಯದಲ್ಲಿ ನಗರ ಸೇರಿದಂತೆ ಜಿಲ್ಲಾದ್ಯಂತ ವಿವಿಧ ಸೇವಾ ಕಾರ್ಯಕ್ರಮಗಳು ನಡೆಯಲಿವೆ. ನಗರದ ರೈಲ್ವೆ ನಿಲ್ದಾಣದ ಬಳಿ ಇರುವ ಮಾಂಗಲ್ಯ ಕನ್ವೆಷನ್ ಹಾಲ್‌ನಲ್ಲಿ ಬೆಳಗ್ಗೆ 8ರಿಂದ ಮಧ್ಯಾಹ್ನ 2ರವರೆಗೆ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಾಗೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ನಡೆಯಲಿರುವ ವೇದಿಕೆ ಕಾರ್ಯಕ್ರಮದಲ್ಲಿ ಸರ್ವಧರ್ಮ ಗುರುಗಳು ಭಾಗವಹಿಸಲಿದ್ದಾರೆ. ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಯಡಬೆಟ್ಟದಲ್ಲಿ ನಿರ್ಮಾಣ ಹಂತದಲ್ಲಿರುವ ನಳಂದ ಬೌದ್ಧ ವಿವಿಯ ಕಾರ್ಯದರ್ಶಿ ಬೋಧಿದತ್ತ ತೇರಾ ಬಂತೆ ಶಿಬಿರವನ್ನು ಉದ್ಘಾಟಿಸುವರು. ನಗರದ ಸಿಎಸ್‌ಐ ಚರ್ಚ್ ಧರ್ಮಗುರು ರೆ.ಪುಟ್ಟರಾಜು ಹಾಗೂ ಏಹಸಾನೀಯ ಅರಬ್ಬಿ ಕಾಲೇಜಿನ ಮೌಲ್ವಿ ಜನಾಬ್ ಮೌಲಾನ ಮೊಹಮ್ಮದ್ ಇಸ್ಮಾಯಿಲ್ ರಜ್ವಿ ಅವರು ಉಪಸ್ಥಿತರಿರುವರು.



ಧ್ರುವನಾರಾಯಣ್ ಅವರ ಹುಟ್ಟೂರು ತಾಲೂಕಿನ ಹೆಗ್ಗವಾಡಿಯ ಶಾಲೆ ಹಾಗೂ ಕುಂದುಗುಳಿ ಶಾಲೆಯಲ್ಲಿ ಮಕ್ಕಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮ ನಡೆಯಲಿದೆ. ಕೊಳ್ಳೇಗಾಲದ ಯೂನಿಯನ್ ಕ್ಲಬ್‌ನಲ್ಲಿ ರಕ್ತದಾನ ಶಿಬಿರ ಹಾಗೂ ಕಣ್ಣಿನ ತಪಾಸಣಾ ಶಿಬಿರವನ್ನೂ ಅಭಿಮಾನಿಗಳು ಹಮ್ಮಿಕೊಂಡಿದ್ದಾರೆ. ಗುಂಡ್ಲುಪೇಟೆಯ ಪೃಥ್ವಿ ಬುದ್ಧಿಮಾಂದ್ಯ ಶಾಲಾ ಮಕ್ಕಳಿಗೆ ಊಟದ ವ್ಯವಸ್ಥೆ, ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು–ಹಂಪಲು ವಿತರಣೆ, ಹನೂರು ತಾಲೂಕಿನ ಕೌದಳ್ಳಿಯ ವೃದ್ಧಾಶ್ರಮ ವಾಸಿಗಳಿಗೆ ಊಟದ ವ್ಯವಸ್ಥೆಯನ್ನೂ ಮಾಡಲಾಗಿದೆ

'ಫೆಸ್ಟಿನೀವಾ' ಲೈಫ್‌ಸ್ಟೈಲ್ ಎಕ್ಸ್‌ಪೋ...



ಮೈಸೂರಿನ ನಜರ್‌ಬಾದ್‌ನ ವಿಂಡ್ ಚೈಮ್ಸ್‌ನಲ್ಲಿ ಏರ್ಪಡಿಸಿರುವ ಲಕ್ಸುರಿ, ಫ್ಯಾಷನ್ ಹಾಗೂ ಲೈಫ್‌ಸ್ಟೈಲ್ ಎಕ್ಸಿಬಿಷನ್ ಅನ್ನು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀಮತಿ ರ್‍ಯಾಲಿ ಗಣಪತಿ ಅವರು ಶನಿವಾರ ಉದ್ಘಾಟಿಸಿದರು. ಚಿತ್ರದಲ್ಲಿ ಅನಿಂದಾ ಶೆಟ್ಟಿ, ಇಂದಿರಾ ವೆಂಕಟರಾಮನ್, ಸುಚಿತಾ ಸಂಜಯ್, ಶುಭಾ ಸಂಜಯ್ ಅರಸ್, ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಹಾಗೂ ಎಕ್ಸಿಬಿಷನ್‌ನಲ್ಲಿ ಪಾಲ್ಗೊಂಡಿರುವ ಮಾರಾಟಗಾರರನ್ನು ಕಾಣಬಹುದು. ಎಕ್ಸಿಬಿಷನ್‌ಗೆ ಭಾನುವಾರ ಬೆಳಗ್ಗೆ 10ರಿಂದ ರಾತ್ರಿ 8.30ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಇಲ್ಲಿ ಗಳಿಸುವ ಲಾಭವನ್ನು ಮೈಸೂರು ತಾಲೂಕು ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೂಲ ಸೌಕರ್ಯ ಕಲ್ಪಿಸಲು ಬಳಸಲಾಗುತ್ತದೆ.

ಇಂದಿನಿಂದ ಕೆಆರ್‌ಎಸ್ ಹಿನ್ನೀರಲ್ಲಿ ಜೂನಿಯರ್ ರ್‍ಯಾಂಕಿಂಗ್ ಸೈಲಿಂಗ್ ರೇಸ್

ಸ್ಪರ್ಧೆಯಲ್ಲಿ ಭಾಗವಹಿಸಲು ನೂರಕ್ಕೂ ಹೆಚ್ಚು ಮಂದಿ ನೋಂದಣಿ

ಮೈಸೂರು, ಜು.30(ಆರ್‌ಕೆ)–ಶ್ರೀರಂಗಪಟ್ಟಣ ತಾಲೂಕು, ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ಹಿನ್ನೀರಲ್ಲಿ ನಾಳೆ(ಜು.31)ಯಿಂದ ನ್ಯಾಷನಲ್ ಜೂನಿ ಯರ್ ರ್‍ಯಾಂಕಿಂಗ್ ಸೈಲಿಂಗ್ ಚಾಂಪಿ ಯನ್‌ಶಿಪ್ ಸ್ಪರ್ಧೆ ಆರಂಭವಾಗಲಿದೆ. ಇಂಡಿಯನ್ ನೇವಿ ತಂಡ ಗಳು, ಕರ್ನಾಟಕದ ವಿವಿಧ ಜಿಲ್ಲೆಗಳು, ಗೋವಾ, ಭೋಪಾಲ್, ಮುಂಬೈ, ಹೈದರಾಬಾದ್, ತಮಿಳು ನಾಡು, ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಸುಮಾರು ನೂರಕ್ಕೂ ಹೆಚ್ಚು ಮಂದಿ ನಾವಿಕ ಪ್ರಾವೀಣ್ಯತೆ ಪಡೆದ ಕ್ರೀಡಾಪಟುಗಳು ಸೈಲಿಂಗ್ ಚಾಂಪಿಯನ್ ಶಿಪ್ ರೇಸ್‌ನಲ್ಲಿ ಭಾಗವಹಿಸಲು ಹೆಸರು ನೋಂದಾಯಿಸಿಕೊಂಡಿದ್ದಾರೆ.



ಗುರುವಾರೇ ತಮ್ಮ ದೋಣಿಗಳೊಂದಿಗೆ ರೇಸ್ ನಡೆಯುವ ಕೆಆರ್‌ಎಸ್ ಹಿನ್ನೀರು ಪ್ರದೇಶಕ್ಕೆ ಆಗಮಿಸಿರುವ ಸೈಲಿಂಗ್ ಚಾಂಪಿಯನ್‌ಗಳು, ಇಂದು ಬೋಟ್ ಗಳನ್ನು ಜೋಡಿಸಿಕೊಂಡು ಜಲಾಶಯದ ಹಿನ್ನೀರಿನಲ್ಲಿ ಪೂರ್ವಭಾವಿ ತಾಲೀಮು ನಡೆಸಿ ಸ್ಪರ್ಧೆಗೆ ತಯಾರಿ ನಡೆಸಿದರು. ಸ್ಥಳದಲ್ಲಿ ಅಗ್ನಿಶಾಮಕ ದಳ, ಆಂಬುಲೆನ್ಸ್, ತಜ್ಞ ಈಜು ಪಟುಗಳನ್ನು ತುರ್ತು ಕಾರ್ಯಾಚರಣೆಗಾಗಿ ನಿಯೋಜಿಸಲಾಗಿದ್ದು, ಕೆಆರ್‌ಎಸ್ ಮತ್ತು ಇಲವಾಲ ಠಾಣೆಗಳ ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದಾರೆ. ಆಹ್ವಾನಿತರನ್ನು ಹೊರತು ಪಡಿಸಿ ಉಳಿದ ಸಾರ್ವಜನಿಕರು ಸ್ಥಳಕ್ಕೆ ಧಾವಿಸದಂತೆ ಕ್ರಮ ಕೈಗೊಳ್ಳಲಾಗಿದೆ. ನ್ಯಾಷನಲ್ ಫೆಡರೇಷನ್ ಯಾಚಿಂಗ್ ಅಸೋಸಿ ಯೇಷನ್ ಆಫ್ ಇಂಡಿಯಾ ಸಹ ಯೋಗ ಹಾಗೂ ಮೈಸೂರು ಹೋಟೆಲ್ ಮಾಲೀಕರ ಸಂಘದ ಪ್ರಾಯೋಜಕತ್ವದಲ್ಲಿ ದಿ ರಾಯಲ್ ಮೈಸೂರು ಸೈಲಿಂಗ್ ಕ್ಲಬ್ (ಆರ್‌ಎಂ ಎಸ್‌ಸಿ) ಆಯೋಜಿಸಿರುವ ಜೂನಿಯರ್ ರ್‍ಯಾಂಕಿಂಗ್ ಸೈಲಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆಯು ನಾಳೆ (ಜು.31) ಬೆಳಗ್ಗೆ 9 ಗಂಟೆಗೆ ಆರಂಭವಾಗಿ ಆಗಸ್ಟ್ 4ರಂದು ಮುಕ್ತಾಯಗೊಳ್ಳಲಿದ್ದು, ಅಂದು ಸಂಜೆ ಕೆಆರ್‌ಎಸ್ ಹಿನ್ನೀರು ಬಳಿ ಏರ್ಪಡಿಸಿರುವ ಸಮಾ ರಂಭದಲ್ಲಿ ವಿಜೇತರಿಗೆ ರ್‍ಯಾಂಕಿಂಗ್ ಬಹುಮಾನ ಮತ್ತು ಸರ್ಟಿಫಿಕೇಟ್ ವಿತರಿಸಲಾಗುವುದು. ಸೈಲಿಂಗ್ ರೇಸ್‌ಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಸಕಲ ಸಿದ್ಧತೆ ಪೂರ್ಣಗೊಂಡಿದೆ.

ಫಲಿತಾಂಶ ಘೋಷಣೆ ಮಾನದಂಡಗಳನ್ನು ಪಾಲಿಸಿ ಕೊಂಡು ಸ್ಪರ್ಧೆಯಲ್ಲಿ ಪಾಲ್ಗೊಂಡ ನಾವಿಕ ಪಟುಗಳಿಗೆ ಅಂಕ ನೀಡಲು ರೆಫರಿಗಳು ತಯಾರಿ ಮಾಡಿಕೊಂಡಿದ್ದಾರೆ.

ಸಿಇಟಿ ಫಲಿತಾಂಶದ ಗೊಂದಲಕ್ಕೆ ವಿದ್ಯಾರ್ಥಿಗಳು, ಪೋಷಕರ ಬೇಸರ

ಮೈಸೂರು, ಜು.30(ಎಸ್‌ಬಿಡಿ)–ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)–2022ರ ಫಲಿತಾಂಶ ಗೊಂದಲಮಯವಾಗಿದೆ ಎಂದು ವಿದ್ಯಾರ್ಥಿಗಳು ಹಾಗೂ ಪೋಷಕರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಮೈಸೂರಿನ ಸೆಂದಿಲ್ ವೇಲು ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈ ಬಾರಿಯ ಸಿಇಟಿ ಫಲಿತಾಂಶ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಬರೆ ಎಳೆದಿದೆ. ಅದರಲ್ಲೂ ಪುನ ರಾವರ್ತಿತ(ರಿಪಿಟರ್ಸ್) ಅಭ್ಯರ್ಥಿಗಳಿಗೆ ಭಾರೀ ಅನ್ಯಾಯವಾಗಿದೆ. ಕಳೆದ ಬಾರಿ 20 ಸಾವಿರ ರ್‍ಯಾಂಕಿಂಗ್ ಪಡೆದವರಿಗೆ ಈ ಬಾರಿಯ ರ್‍ಯಾಂಕಿಂಗ್ 1 ಲಕ್ಷ ಮೀರಿದೆ. ನನ್ನ ಪುತ್ರನಿಗೂ ಇದೇ ರೀತಿ ಅನ್ಯಾಯ ವಾಗಿದೆ. ಇದನ್ನೆಲ್ಲಾ ನೋಡಿದರೆ ಹಣ ಮಾಡುವ ಸಲುವಾಗಿ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಂತಿದೆ. ರ್‍ಯಾಂಕಿಂಗ್ ಸಿಗದಿದ್ದರೆ ಹೆಚ್ಚು ಶುಲ್ಕ ಪಾವತಿಸಿ ಕಾಲೇಜುಗಳಿಗೆ ದಾಖಲಾಗುತ್ತಾರೆ ಎನ್ನುವ ಉದ್ದೇಶದಿಂದ ಹೀಗೆ ವಿದ್ಯಾರ್ಥಿಗಳ ಭವಿಷ್ಯ ವನ್ನೇ ಹಾಳು ಮಾಡಲು ಹೊರಟಿದ್ದಾರೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕೆಇಎ ಮುಂದೆ ಪ್ರತಿಭಟನೆ: ಬೆಂಗಳೂರಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ)ದ ಕಚೇರಿ ಎದುರು ವಿದ್ಯಾರ್ಥಿಗಳು ಹಾಗೂ ಪೋಷಕರು ಜಮಾಯಿಸಿ, ಸಿಇಟಿ ಫಲಿತಾಂಶದ ಗೊಂದಲ ವನ್ನು ಖಂಡಿಸಿದರು. ಕೋವಿಡ್ ಹಿನ್ನೆಲೆಯಲ್ಲಿ 2020–21ನೇ ಸಾಲಿನ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಿಲ್ಲ. ಅದು ಸರ್ಕಾರದ ನಿರ್ಧಾರವೇ ಹೊರತು ಮಕ್ಕಳ ತಪ್ಪಲ್ಲ. ಆದರೆ ಆ ಸಾಲಿನ ಅನೇಕ ವಿದ್ಯಾರ್ಥಿಗಳಿಗೆ ಸಿಇಟಿ ಫಲಿತಾಂಶದಲ್ಲಿ ಅನ್ಯಾಯ ವಾಗಿದೆ. ಕಳೆದ ಬಾರಿ ರ್‍ಯಾಂಕಿಂಗ್‌ಗಿಂತ ಉತ್ತಮ ರ್‍ಯಾಂಕಿಂಗ್ ಪಡೆಯಬೇಕೆಂಬ ಉದ್ದೇಶದಿಂದ ವರ್ಷವಿಡೀ ಓದಿ ಮತ್ತೆ ಪರೀಕ್ಷೆ ಬರೆದವರಿಗೆ ಕಡಿಮೆ ರ್‍ಯಾಂಕಿಂಗ್ ನೀಡಲಾಗಿದೆ ಎಂದು ಆರೋಪಿಸಿದ್ದಾರೆ.

ಫ್ರೆಶರ್ ಹಾಗೂ ರಿಪೀಟರ್ಸ್ ವಿದ್ಯಾರ್ಥಿಗಳ ಪಿಯು ಹಾಗೂ ಸಿಇಟಿ ಅಂಕ ಒಂದೇ ಆಗಿದ್ದರೂ ರ್‍ಯಾಂಕಿಂಗ್ ಮಾತ್ರ ಅಜಗಜಾಂತರವಾಗಿದೆ. ಫ್ರೆಶರ್‌ಗೆ 7 ಸಾವಿರ ರ್‍ಯಾಂಕಿಂಗ್ ನೀಡಿದ್ದರೆ ಅಷ್ಟೇ ಅಂಕ ಪಡೆದಿರುವ ರಿಪೀಟರ್‌ಗೆ 77 ಸಾವಿರ ರ್‍ಯಾಂಕಿಂಗ್ ನೀಡಿದ್ದಾರೆ. ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳುವಾಗ ಯಾವುದೇ ರೀತಿಯ ಸೂಚನೆ ನೀಡಿರಲಿಲ್ಲ. ಪಿಯುಸಿಯ ಐಚ್ಛಿಕ ವಿಷಯಗಳ ಒಟ್ಟು ಅಂಕ ಹಾಗೂ ಸಿಇಟಿಯ ಅಂಕವನ್ನು ತಲಾ ಶೇ.50ರಷ್ಟು ಪರಿಗಣಿಸುವುದಾಗಿ ತಿಳಿಸಿದ್ದರು.

ಆದರೆ ಕೋವಿಡ್ ಕಾಲಘಟ್ಟದ ಬ್ಯಾಚ್ ವಿದ್ಯಾರ್ಥಿಗಳಿಗೆ ಯಾವುದೇ ಮಾಹಿತಿಯನ್ನೂ ನೀಡದೆ ಮನಸ್ಸೋ ಇಚ್ಛೆ ರ್‍ಯಾಂಕಿಂಗ್ ನೀಡಲಾಗಿದೆ. ಈ ಬಾರಿ ಉತ್ತಮ ರ್‍ಯಾಂಕಿಂಗ್ ನಿರೀಕ್ಷೆಯಲ್ಲಿದ್ದ ವಿದ್ಯಾರ್ಥಿಗಳು ಹತಾಶರಾಗಿ ಶಿಕ್ಷಣವನ್ನೇ ಮೊಟಕುಗೊಳಿಸುವ ಮಾತನಾಡುತ್ತಿದ್ದಾರೆ. ಈ ಫಲಿತಾಂಶದ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಿ, ಸೂಕ್ತ ನಿರ್ಧಾರ ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ನೆರವಾಗಬೇಕೆಂದು ಆಗ್ರಹಿಸಿದ್ದಾರೆ.

ಇಂಜಿನಿಯರಿಂಗ್, ಆಯುರ್ವೇದ, ಫಾರ್ಮಸಿ, ಹೋಮಿಯೋಪತಿ, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್ ಗಳ ಪ್ರವೇಶಾತಿಗೆ ಜೂ.16ರಿಂದ 18ರಂದು ಸಿಇಟಿ ನಡೆಸಲಾಗಿತ್ತು.

ನಾಳೆಯಿಂದ ವಿಶ್ವ ಸ್ತನ್ಯಪಾನ ಸಪ್ತಾಹ

ಮಗುವಿಗೆ ಎದೆ ಹಾಲಿನ ಮಹತ್ವದ ಬಗ್ಗೆ ತಾಯಂದಿರಲ್ಲಿ ಜಾಗೃತಿ ಕಾರ್ಯಕ್ರಮ



ಮೈಸೂರು,ಜು.30(ಎಂಟಿವೈ)– ನವಜಾತ ಶಿಶುಗಳಿಗೆ ಎದೆ ಹಾಲಿನ ಮಹತ್ವ ತಿಳಿಸುವ ನಿಟ್ಟಿನಲ್ಲಿ ಭಾರತೀಯ ಶಿಶು ವೈದ್ಯರ ಸಂಘದ ಜಿಲ್ಲಾ ಶಾಖೆ ಹಾಗೂ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ ವತಿಯಿಂದ ಆ.1ರಿಂದ 8ರವರೆಗೆ ಜಿಲ್ಲೆಯ ವಿವಿಧೆಡೆ ವಿಶ್ವ ಸ್ತನ್ಯಪಾನ ಸಪ್ತಾಹದ ಅಂಗವಾಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಸೂತಿ ತಜ್ಞೆ ಡಾ.ರೂಪಾ ಪ್ರಕಾಶ್ ತಿಳಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎದೆ ಹಾಲನ್ನು ಕುಡಿಸಿ ತನ್ನ ಮತ್ತು ಶಿಶುವಿನ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ತಾಯಿಯ ಜವಾಬ್ದಾರಿಯಾಗಿದೆ. ಹೀಗಾಗಿ ಸ್ತನ್ಯಪಾನ ಉತ್ತೇಜಿಸುವ ಮೂಲಕ ಮುಂದಿನ ಪೀಳಿಗೆಯ ಆರೋಗ್ಯ ಕಾಪಾಡುವುದು ಸಪ್ತಾಹದ ಉದ್ದೇಶವಾಗಿದೆ. ನವಜಾತ ಶಿಶುಗಳಿಗೆ ಎದೆಹಾಲು ಉಣಿಸುವ ಸಂಬಂಧ ತಾಯಂದಿರಲ್ಲಿ ಕೆಲವು ಗೊಂದಲ ಹಾಗೂ ತಪ್ಪು ಕಲ್ಪನೆಗಳಿವೆ. ಮಕ್ಕಳ ಆರೋಗ್ಯ ಸದೃಢಗೊಳ್ಳಲು ಎದೆ ಹಾಲುಣಿಸು ವುದು ಮಹತ್ವವಾದುದು. ಈ ನಿಟ್ಟಿನಲ್ಲಿ ಭಾರತೀಯ ಶಿಶು ವೈದ್ಯರ ಸಂಘದ ಜಿಲ್ಲಾ ಶಾಖೆ ಹಾಗೂ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘ ಪ್ರತಿವರ್ಷ ಸ್ತನ್ಯಪಾನ ಸಪ್ತಾಹ ಆಯೋಜಿಸುತ್ತಾ ಬಂದಿದೆ. ಈ ಸಾಲಿನ ಕಾರ್ಯಕ್ರಮವನ್ನು 'ತಾಯಿಯ ಹಾಲು ಅಮೃತ' ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ ಎಂದರು. ತಾಯಂದಿರು ಶಿಶು ಜನಿಸಿದ ಅರ್ಧಗಂಟೆಯೊಳಗೆ ಎದೆಹಾಲನ್ನು ಕುಡಿಸ ಬೇಕು. ನವಜಾತ ಶಿಶುವನ್ನು ತಾಯಿಯ ಪಕ್ಕದಲ್ಲೇ ಇರುವಂತೆ ನೋಡಿಕೊಳ್ಳ ಬೇಕು. ಮಗು ಅತ್ತಾಗ ತಾಯಂದಿರು ಅರ್ಥ ಮಾಡಿಕೊಂಡು ಕೇಳಿದಾಗಲೆಲ್ಲಾ ಎದೆಹಾಲುಣಿಸುವುದನ್ನು ಕಲಿಯಬೇಕು. ಕಡ್ಡಾಯವಾಗಿ ಮೊದಲ ಆರು ತಿಂಗಳು ಎದೆ ಹಾಲನ್ನು ಹೊರತು ಪಡಿಸಿ, ನೀರು, ಜೇನುತುಪ್ಪ, ಒಣದ್ರಾಕ್ಷಿ ಚೀಪಿಸುವುದಕ್ಕೆ ಹೋಗಬಾರದು. ಶಿಶುಗಳಿಗೆ ಎರಡು ವರ್ಷ ಆಗುವವರೆಗೂ ಹಾಲುಣಿಸಬೇಕು. ಗರ್ಭಿಣಿ ಯಾಗಿದ್ದಾಗಲೇ ಎದೆ ಹಾಲಿನ ಮಹತ್ವ ಹಾಗೂ ಉಪಯೋಗವನ್ನು ತಿಳಿದುಕೊಳ್ಳಬೇಕು. ಶಿಶುಗಳಿಗೆ ಹಾಲುಣಿಸುವ ಭಂಗಿ ಯನ್ನು ಅತ್ಯವಶ್ಯಕವಾಗಿ ಪ್ರಸೂತಿ ತಜ್ಞರು ಅಥವಾ ದಾದಿ ಯರಿಂದ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಯಂದಿರು ಶಿಶು ಜನಿಸಿದ ಅರ್ಧಗಂಟೆಯೊಳಗೆ ಎದೆಹಾಲನ್ನು ಕುಡಿಸಬೇಕು. ನವಜಾತ ಶಿಶುವನ್ನು ತಾಯಿಯ ಪಕ್ಕದಲ್ಲೇ ಇರುವಂತೆ ನೋಡಿಕೊಳ್ಳಬೇಕು. ಮಗು ಅತ್ತಾಗ ತಾಯಂದಿರು ಅರ್ಥ ಮಾಡಿಕೊಂಡು ಕೇಳಿದಾಗಲೆಲ್ಲಾ ಎದೆಹಾಲುಣಿಸುವು ದನ್ನು ಕಲಿಯಬೇಕು. ಕಡ್ಡಾಯವಾಗಿ ಮೊದಲ ಆರು ತಿಂಗಳು ಎದೆ ಹಾಲನ್ನು ಹೊರತು ಪಡಿಸಿ, ನೀರು, ಜೇನುತುಪ್ಪ, ಒಣದ್ರಾಕ್ಷಿ ಚೀಪಿಸುವುದಕ್ಕೆ ಹೋಗಬಾರದು. ಶಿಶುಗಳಿಗೆ ಎರಡು ವರ್ಷ ಆಗುವವರೆಗೂ ಹಾಲುಣಿಸಬೇಕು.



ಸ್ತನ್ಯಪಾನ ಸಪ್ತಾಹ ಆ.1ರಂದು ಬೆಳಗ್ಗೆ 10.30ಕ್ಕೆ ಚೆಲು ವಾಂಬ ಆಸ್ಪತ್ರೆಯಲ್ಲಿ ಉದ್ಘಾಟನೆಗೊಳ್ಳಲಿದೆ. ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಆ.2ರಂದು ಕಾಮಾಕ್ಷಿ ಆಸ್ಪತ್ರೆಯಲ್ಲಿ, ಆ.3ರಂದು ಟಿ.ನರಸೀಪುರದ ಸರ್ಕಾರಿ ಆಸ್ಪತ್ರೆ, ಆ.4ರಂದು ಮೈಸೂರಿನ ಜಯನಗರ ಸರ್ಕಾರಿ ಆಸ್ಪತ್ರೆ, ಮಧ್ಯಾಹ್ನ 12ಕ್ಕೆ ಸೇಠ್ ಮೋಹನ್‌ದಾಸ್ ತುಳಸಿದಾಸ್ ಆಸ್ಪತ್ರೆ, ಆ.5ರಂದು ಮಧ್ಯಾಹ್ನ 3ಕ್ಕೆ ಮಂಡಿ ಮೊಹಲ್ಲಾದ ಮಿಷನ್ ಆಸ್ಪತ್ರೆ, ಆ.6ರಂದು ಮಧ್ಯಾಹ್ನ 2.30ಕ್ಕೆ ವಿಜಯನಗರದ ಕಾಂಗೂರೂ ಕೇರ್ ಆಸ್ಪತ್ರೆಗಳಲ್ಲಿ ಕಾರ್ಯಕ್ರಮ ನಡೆಯಲಿವೆ. ಆ.8ರಂದು ಮಧ್ಯಾಹ್ನ 2.30ಕ್ಕೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಪ್ತಾಹದ ಸಮಾರೋಪ ಸಮಾರಂಭ ಜರುಗಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ತಜ್ಞ ವೈದ್ಯರಾದ ಡಾ.ಎನ್. ಪ್ರದೀಪ್, ಡಾ.ನಂದೀಶ್, ಡಾ.ಪುಷ್ಪಲತಾ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.07.2022 ಭಾನುವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ತೃತೀಯ, ನಕ್ಷತ್ರ : ಮಖೆ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಬಿಇಎಂಎಲ್ ಬಸವ ಸಮಿತಿ:** ಬಸವ ಜಯಂತಿ, ಉದ್ಘಾಟನೆ: ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಸಾನ್ನಿಧ್ಯ: ಗಾವಡಗೆರೆ ಶ್ರೀ ಗುರುಲಿಂಗ ಜಂಗಮ ದೇವರ ಮಠದ ಪೀಠಾಧ್ಯಕ್ಷ ಶ್ರೀ ನಟರಾಜ ಸ್ವಾಮೀಜಿ, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಎಂ.ಸಿ.ದೇವರಾಜಪ್ಪ, ಮುಖ್ಯ ಅತಿಥಿಗಳು: ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಸ್ಥಳ: ನಟರಾಜ ಕಲ್ಯಾಣ ಮಂಟಪ, ಶ್ರೀ ಹೊಸಮಠ, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಜಿಲ್ಲಾ ಘಟಕ:** ಗ್ರಾಪಂ ಸದಸ್ಯರ ಸ್ವಾಭಿಮಾನಿ ಸಮಾವೇಶ, ಉದ್ಘಾಟನೆ: ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ, ಅಧ್ಯಕ್ಷತೆ : ಜಿಲ್ಲಾ ಸಮಿತಿ ಅಧ್ಯಕ್ಷ ನಾಗರಾಜು, ಮುಖ್ಯ ಅತಿಥಿಗಳು: ಎಂಎಲ್‌ಸಿಗಳಾದ ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಸ್ಥಳ:ವಸ್ತುಪ್ರದರ್ಶನ ಆವರಣ, ಬೆಳಗ್ಗೆ 10ಕ್ಕೆ.

■ **ಡಿಸೈನರ್ ಹಾಟ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಲೈಫ್ ಸ್ಟೈಲ್ ಎಕ್ಸಿಬಿಷನ್, ಸ್ಥಳ: ಸದರನ್ ಸ್ಟಾರ್ ಹೋಟೆಲ್, ವಿನೋಬ ರಸ್ತೆ, ಬೆಳಗ್ಗೆ 10.30 ರಿಂದ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಬೆಳಗ್ಗೆ ದತ್ತಸ್ವಾಮಿಗೆ ತೈಲಾಭಿಷೇಕ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಬಸವ ಸಮಿತಿ:** ಬಸವ ಜಯಂತಿ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಉಪಸ್ಥಿತರು: ವಿಶ್ರಾಂತ ಮುಖ್ಯೋಪಾಧ್ಯಾಯ ಗುರುಮಲ್ಲಪ್ಪ, ಅಧ್ಯಾತ್ಮ ಚಿಂತಕ ಶಂಕರ್ ದೇವನೂರು, ಅಧ್ಯಕ್ಷತೆ: ಬಸವ ಸಮಿತಿ ಪ್ರಭಾರ ಅಧ್ಯಕ್ಷ ಎಂ.ಡಿ.ಬಸವಲಿಂಗಪ್ಪ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ

■ **ವಿಶ್ವಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್:** ಪುನೀತ್ ರಾಜ್‌ಕುಮಾರ್ ನೆನಪು ಅಂಗವಾಗಿ ನೃತ್ಯ ಮತ್ತು ಏಕಪಾತ್ರಾಭಿನಯ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಶಾಸಕ ಬಿ. ಹರ್ಷವರ್ಧನ್, ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಮಾಜಿ ಅಧ್ಯಕ್ಷ ಎಂ. ಅಪ್ಪಣ್ಣ, ಪಾಲಿಕೆ ಸದಸ್ಯ ಶಿವಕುಮಾರ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಸಾಮಾಜಿಕ ನ್ಯಾಯ ವೇದಿಕೆ, ಮೈಸೂರು ಮತ್ತು ಜನಸೇವಾ ಕಲಾ ಬಳಗ:** ಎಸ್‌ಸಿ, ಎಸ್‌ಟಿ ಮಕ್ಕಳ ವಿದ್ಯಾಭ್ಯಾಸದ ಸಹಾಯಾರ್ಥ ಜಗಜ್ಯೋತಿ ಶ್ರೀ ಬಸವೇಶ್ವರ ಪೌರಾಣಿಕ ನಾಟಕ ಪ್ರದರ್ಶನ, ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಉಪಸ್ಥಿತರು: ಸಂಸದ ವಿ.ಶ್ರೀನಿವಾಸಪ್ರಸಾದ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ, ಜಿಪಂ ಮಾಜಿ ಸದಸ್ಯೆ ಮಂಗಳಾ ಸೋಮಶೇಖರ್, ವೇದಿಕೆ ಅಧ್ಯಕ್ಷ ಓ. ಶ್ಯಾಮ್‌ಭಟ್ಟರು, ಸಂಸದ ಪ್ರತಾಪ್ ಸಿಂಹ, ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ರಾಜ್ಯ ಉಪಾಧ್ಯಕ್ಷ ಎಂ. ರಾಜೇಂದ್ರ, ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಸ್ಥಳ: ಜೆ.ಕೆ. ಗ್ರೌಂಡ್ಸ್, ಎಂಎಎ ಸಭಾಂಗಣ, ರೈಲ್ವೆ ಸ್ಟೇಷನ್ ಎದುರು, ಮಧ್ಯಾಹ್ನ 12ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ:** ಶಿರಸಿ, ಸೋಂದಾದ ವಿದ್ವಾನ್ ಶ್ರೀ ಶಂಕರ ಭಟ್ಟ ಅವರಿಂದ ಶ್ರೀ ಕೃಷ್ಣ ಜನನ ಕುರಿತು ಹರಿಕಥೆ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಜಿ.ಎನ್.ಮೋಹನ್ ಸ್ನೇಹ ಬಳಗ:** ಜಿ.ಎನ್.ಮೋಹನ್ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ನಿವೃತ್ತ ಡಿಐಜಿ ಎಸ್.ಪಿ.ರಾಜೇಂದ್ರಪ್ರಸಾದ್, ಅಭಿನಂದಿತರು: ಡಿವೈಎಸ್ಪಿ ಜಿ.ಎನ್.ಮೋಹನ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸಂಜೆ 6ಕ್ಕೆ

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಕಮಲಮ್ಮ ಗೋಪಾಲಕೃಷ್ಣ ಚೆಟ್ಟಿ ನೆನಪಿನ ಕಾರ್ಯಕ್ರಮ, ವಿದುಷಿ ರೂಪಶ್ರೀ ಶಂಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಸಾಯಿಶಿವ ಲಕ್ಷ್ಮೀ ಕೇಶವ–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ.

■ **ರಂಗಾಯಣ:** ಪದ್ಮಶ್ರೀ ನಾಗರತ್ನಮ್ಮ ರಂಗ ಕಾರ್ಯಾಗಾರದ ಶಿಬಿರಾರ್ಥಿಗಳಿಂದ 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ' ನಾಟಕ ಪ್ರದರ್ಶನ, ನಿರ್ದೇಶನ: ಪ್ರವೀಣ್ ಬೆಳ್ಳಿ, ಸಂಗೀತ : ಆರ್.ಸಿ. ಧನಂಜಯ, ವರುಣ್ ಭಾರಿಘಾಟ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ:** ನಟನ ರಂಗಶಾಲೆ ವಿದ್ಯಾರ್ಥಿಗಳಿಂದ ನಾಟಕಕಾರ ಬಿ. ಸುರೇಶ ಅವರ 'ಅಡುಗೆ ಮನೆಯಲ್ಲೊಂದು ಹುಲಿ' ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಮೈಸೂರ್ ಮೈಮ್ ಟೀಂ :** ಹವ್ಯಾಸಿ ರಂಗಕರ್ಮಿಗಳಿಂದ ಬೇಕಾಗಿದ್ದಾರೆ!! ಯಾಕೆ ಏನು ಕೇಳಬೇಡಿ ಹಾಸ್ಯಮಯ ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.45ಕ್ಕೆ.

■ **ಗಾನಭಾರತೀ :** ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ: ಪ್ರಸನ್ನ, ಸಂಗೀತ: ಅನುಶೆಟ್ಟಿ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 7ಕ್ಕೆ

ಸುತ್ತೂರಿನಲ್ಲಿಂದು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸುರಂಗ ಕವಿಕೃತ ತ್ರಿಷಷ್ಠಿ ಪುರಾತನ ಚಾರಿತ್ರಂ ಕಾವ್ಯವಾಚನ ಮತ್ತು ಪ್ರವಚನ, ಪ್ರವಚನ : ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ: ಡಿ.ಎಂ.ಸಿದ್ದಲಿಂಗಸ್ವಾಮಿ, ಸ್ಥಳ: ಸುತ್ತೂರು, ಸಂಜೆ 7 ರಿಂದ.

ಕೆ.ಆರ್.ನಗರದಲ್ಲಿಂದು

■ **ತಾಲೂಕು ಆಡಳಿತ, ತಾಲೂಕು ಒಕ್ಕಲಿಗರ ಸಂಘ:** ಕೆಂಪೇಗೌಡರ ಜಯಂತ್ಯುತ್ಸವ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಶಾಸಕ ಸಾ.ರಾ.ಮಹೇಶ್, ತಹಸೀಲ್ದಾರ್ ಎಸ್.ಸಂತೋಷ್‌ರಿಂದ ಉಪನ್ಯಾಸ, ಅಭಿನಂದಿತರು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ, ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ, ಉದ್ಯಮಿ ಮಿರ್ಲೆ ವರದರಾಜು, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಡಾ.ಎಂ.ಬಿ.ಮಂಜೇಗೌಡ, ಕೆ.ವಿ.ಶ್ರೀಧರ, ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಉಪಸ್ಥಿತರು: ನವನಗರ ಅರ್ಬನ್ ಬ್ಯಾಂಕ್‌ನ ಅಧ್ಯಕ್ಷ ಕೆ.ಎನ್.ಬಸಂತ್, ಸ್ಥಳ: ಒಕ್ಕಲಿಗರ ಹೆಚ್.ಡಿ.ದೇವೇಗೌಡರ ಸಮುದಾಯ ಭವನ, ಬೆಳಗ್ಗೆ 10.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ. ವಿಶಾಲಾಕ್ಷಿ ಕರಡ್ಡಿ, 6.20 ಗೀತಾರಾಧನ, 6.35 "ಬದುಕು ಬದಲಿಸಿದ ಶೋಧ" ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಬಿ.ಶ್ರೀರಾಂ ಭಟ್, ನಿತಿನ್ ರಾಜಾರಾಮ್ ಶಾಸ್ತ್ರಿ ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ.ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ– ವಿಶ್ವ ಸ್ತನ್ಯಪಾನ ಸಪ್ತಾಹದ ಸಂದರ್ಭದಲ್ಲಿ ಸನ್ಯಪಾನದ ಮಹತ್ವ ಕುರಿತು ಡಾ. ವಾಮನ್ ರಾವ್ ಬಾಪಟ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30ಮಕ್ಕಳ ಮಂಟಪ–ವಿ.ವಿ.ಎಸ್. ಬಿ.ಎಂ. ಶ್ರೀ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು, ನಂತರ ಮನ್ ಕೀ ಬಾತ್– ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.05 ವನಿತಾ ವಿಹಾರ ಶ್ರೀ ವರಮಹಾಲಕ್ಷ್ಮಿ ವೈಭವ – ಸಂಗೀತ ರೂಪಕ, ಪ್ರಸ್ತುತಿ–ಶ್ರೀ ವಿದ್ಯಾಸುಧಾ ಸಂಗೀತ ಸಂಸ್ಥೆಯ ವಿದ್ಯಾರ್ಥಿನಿಯರು, 12.30 ದೇವರನಾಮ–ಬಿ.ಎನ್.ಮಂಜುಳಾ, 12.45 ಜನಪದಗೀತೆ–ಗೌರಮ್ಮ ಮತ್ತು ತಂಡ, 1.20 ಭಾವಗೀತೆ–ಎನ್.ಸಿ.ಸುವರ್ಣ, 2.35 ಚಲನಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ತುಳಸೀ ಜಲಂಧರ, ಪ್ರಸ್ತುತಿ – ಉಡುಪಿಯ ಅಂಬಲಪಾಡಿ ಶ್ರೀ ಲಕ್ಷ್ಮೀ ಜನಾರ್ದನ ಯಕ್ಷಗಾನ ಕಲಾ ಮಂಡಲಿಯ ಕಲಾವಿದರು, 7.00 AIR Nxt ನಮ್ಮ ಕನಸಿಗೆ ನಮ್ಮದೇ ಮಾತು–ಹೊಸ ಶಿಕ್ಷಣ ನೀತಿ ಕುರಿತು ಸಂವಾದ, ಭಾಗವಹಿಸುವವರು ಮೈಸೂರಿನ ಎಂ.ಎಂ.ಕೆ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿಯರು, 8.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.05 ಚಿಣ್ಣರ ಸುದ್ದಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ವಿದುಷಿ ಮಂಜು ಮೆಹ್ತಾ–ಸಿತಾರ್ ವಾದನ, 11.00 ಸವಿನೆನಪು

ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಖದೀಮರ ಬಂಧನ

ಮೈಸೂರು, ಜು. 30– ಇಬ್ಬರು ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸುವಲ್ಲಿ ಮಂಡಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ಮೈಸೂರಿನ ರಾಜೇಂದ್ರನಗರ ನಿವಾಸಿ ವೆಲ್ಡರ್ ಆಗಿರುವ ದಸ್ತಗಿರ್ ಅಹಮದ್ ಖಾನ್ ಅಲಿಯಾಸ್ ಅಮ್ರಾನ್ ಖಾನ್(19) ಮತ್ತು ಅಜೀಜ್ ಸೇಟ್‌ನಗರದ ಬೀಡಿ ಕಾಲೋನಿ ನಿವಾಸಿ ಮೆಕ್ಯಾನಿಕ್ ಅಖಿರ್ ಖಾನ್(23) ಬಂಧಿತರಾಗಿದ್ದು, ಜುಲೈ 28ರಂದು ಬೆಳಗ್ಗೆ ಮಂಡಿ ಠಾಣೆ ಪೊಲೀಸರು ಗಸ್ತು ತಿರುಗುತ್ತಿದ್ದ ವೇಳೆ ಇವರಿಬ್ಬರು ಸುಜುಕಿ ಆಕ್ಸಿಸ್ ಸ್ಕೂಟರ್‌ನಲ್ಲಿ ಬರುತ್ತಿದ್ದು, ಪೊಲೀಸರನ್ನು ಕಂಡೊಡನೆ ಯು ಟರ್ನ್ ತೆಗೆದುಕೊಂಡು ಹೋಗುತ್ತಿದ್ದಾಗ ಅನುಮಾನಗೊಂಡ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ, ಎರಡು ತಿಂಗಳ ಹಿಂದೆ ರಾಜೀವ್‌ನಗರ 2ನೇ ಹಂತದ 12ನೇ ಕ್ರಾಸ್‌ನಲ್ಲಿರುವ ಮನೆ ಮುಂಭಾಗ ನಿಲ್ಲಿಸಿದ್ದ ಈ ಸ್ಕೂಟರ್ ಅನ್ನು ನಕಲಿ ಕೀ ಬಳಸಿ ಕಳವು ಮಾಡಿದ್ದಲ್ಲದೇ, ಅದಕ್ಕೆ ನಂಬರ್ ಪ್ಲೇಟ್ ಬದಲಾಯಿಸಿಕೊಂಡು ಬೇರೆ ಬಣ್ಣವನ್ನು ಬಳಿದು ಓಡಿಸುತ್ತಿದ್ದರು ಎಂಬುದು ಬಯಲಾಗಿದೆ. ಇವರಿಬ್ಬರನ್ನು ಬಂಧಿಸಿರುವ ಪೊಲೀಸರು, ಸ್ಕೂಟರ್ ವಶಪಡಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೂರನೇ ಪುಟದಿಂದ

ಸಿಬಿಎಸ್‌ಇ ವಿದ್ಯಾರ್ಥಿಗಳ ಪಾಲು

ರ್‍ಯಾಂಕ್ ಪಡೆದ ಮಾತ್ರಕ್ಕೆ ಸೀಟು ಹಂಚಿಕೆ ಸಾಧ್ಯವಿಲ್ಲ. ದಾಖಲಾತಿ ಪರಿಶೀಲನೆಯ ನಂತರ ಅರ್ಹತೆಯನ್ನು ಪರಿಗಣಿಸಲಾಗುವುದು.

ನೀಟ್ ಪರೀಕ್ಷೆಯ ಫಲಿತಾಂಶ ಬಂದ ನಂತರ ಅದರ ಅಂಕಗಳ ಆಧಾರದ ಮೇಲೆ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಭಾರತೀಯ ವೈದ್ಯ ಪದ್ಧತಿ ಹಾಗೂ ಹೋಮಿಯೋಪತಿ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸಲಾಗುವುದು ಎಂದರು.

ಯಾವುದಾದರೂ ಅರ್ಹ ಅಭ್ಯರ್ಥಿಗೆ ರ್‍ಯಾಂಕ್ ನೀಡದೇ ಇದ್ದ ಪಕ್ಷದಲ್ಲಿ ಅಭ್ಯರ್ಥಿಯು ತನ್ನ ಎರಡನೇ ವರ್ಷದ ಪಿಯುಸಿ ಫೋಟೋ ಪ್ರತಿಯನ್ನು ಪ್ರಾಧಿಕಾರದ ಇ–ಮೇಲ್ ವಿಳಾಸಕ್ಕೆ ಕಳುಹಿಸಿ, ರ್‍ಯಾಂಕ್ ಪಡೆಯಬಹುದಾಗಿದೆ ಎಂದರು.

ರ್‍ಯಾಂಕ್ ಪಡೆದವರ ವಿವರ: ಇಂಜಿನಿಯರಿಂಗ್
1. **ಅಪೂರ್ವ ಟಂಡನ್**, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಯಲಹಂಕ, ಬೆಂಗಳೂರು
2. **ಸಿದ್ದಾರ್ಥ ಸಿಂಗ್**, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಮಾರತ್ತಹಳ್ಳಿ, ಬೆಂಗಳೂರು
3. **ಆತ್ಮಕುರಿ ವೆಂಕಟ ಮಾಧವನ್**, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಮಾರತ್ತಹಳ್ಳಿ, ಬೆಂಗಳೂರು

ಯೋಗ ವಿಜ್ಞಾನ
1. **ಕೃಷಿಕೇಶ್ ನಾಗಭೂಷಣ**, ನ್ಯಾಷನಲ್ ಸೆಂಟರ್ ಫಾರ್ ಎಕ್ಸಲೆನ್ಸ್, ಬೆಂಗಳೂರು
2. **ವೆಂಕಟೇಶ್ ವೀಣಾಧರ್ ಶೆಟ್ಟಿ**, ಮಾಧವ ಕೃಪಾ ಇಂಗ್ಲಿಷ್ ಸ್ಕೂಲ್, ಮಣಿಪಾಲ್, ಉಡುಪಿ
3. **ಎಸ್.ಆರ್.ಕೃಷ್ಣ** ಶ್ರೀಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು

ಕೃಷಿ
1. **ಅರ್ಜುನ್ ರವಿಶಂಕರ್**, ಎಚ್.ಎಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು
2. **ಸುಮಿತ್ ಎಸ್ ಪಾಟೀಲ್**, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು
3. **ಸುದೀಪ್ ವೈ.ಎಂ**, ವಿದ್ಯಾನಿಕೇತನ ಪಿಯು ಕಾಲೇಜ್, ತುಮಕೂರು

ಪಶು ವೈದ್ಯಕೀಯ ವಿಜ್ಞಾನ
1. **ಹೃಷಿಕೇಶ್ ನಾಗಭೂಷಣ** –ನ್ಯಾಷನಲ್ ಸೆಂಟರ್ ಫಾರ್ ಎಕ್ಸಲೆನ್ಸ್, ಬೆಂಗಳೂರು,
2. **ಮೋನಿಷಾ ಎಸ್.ಎ.**– ಚೈತನ್ಯ ಟೆಕ್ನೋ ಸ್ಕೂಲ್, ಕೆಆರ್ ಪುರ, ಬೆಂಗಳೂರು
3. **ಸುಭಾ ಕೌಶಿಕ್ ಚೈತನ್ಯ** –ಟೆಕ್ನೋ ಸ್ಕೂಲ್, ಬೆಂಗಳೂರು

'ಬಿ' ಫಾರ್ಮ (ಫಾರ್ಮಸಿ)

ಯಲಹಂಕದ ನ್ಯಾಷನಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿಯಾದ ಅಪೂರ್ವ (ಶೇ.97) ಮೊದಲ ಸ್ಥಾನ ಪಡೆದಿದ್ದಾರೆ. ಮಾರತಹಳ್ಳಿಯ ಶ್ರೀಚೈತನ್ಯ ಟೆಕ್ನೋ ಸ್ಕೂಲ್‌ನ ಸಿದ್ಧಾರ್ಥ್ ಸಿಂಗ್ (ಶೇ.97) ದ್ವಿತೀಯರಾಗಿದ್ದಾರೆ. ಕೆಇಎ ವೆಬ್‌ಸೈಟ್ kea.kar.nic.inನಲ್ಲಿಯೂ ಫಲಿತಾಂಶ ವೀಕ್ಷಿಸಬಹುದಾಗಿದೆ. ಜೂನ್ 16 ರಿಂದ 18ರವರೆಗೆ ಇಂಜಿನಿಯರಿಂಗ್, ಕೃಷಿ, ಪಶು ವೈದ್ಯಕೀಯ, ಫಾರ್ಮಸಿ ಹೀಗೆ ಮುಂತಾದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಪರೀಕ್ಷೆ ನಡೆದಿತ್ತು. ಸೆಪ್ಟೆಂಬರ್ 1ರಿಂದ ದಾಖಲೆಗಳ ಪರಿಶೀಲನೆ ಆರಂಭವಾಗಲಿದೆ.

ಎತ್ತ ಹೋದವು ಎತ್ತಿನಗಾಡಿಗಳು...!

✍ ಎಂ.ಆರ್.ಮಂಜುನಾಥ್





ಎತ್ತಿನಗಾಡಿ ಎಂದು ಹೇಳುತ್ತಿದ್ದಂತೆ ಗಾಡಿಯ ಪಯಣ ಅನುಭವಿಸಿ ಸಂಭ್ರಮಿಸಿದ ದಿನ ಬಹುತೇಕ ಎಲ್ಲರಿಗೂ ಮೈ ರೋಮಾಂಚನಗೊಳ್ಳುವುದು.

ಒಂದು ಕಾಲದಲ್ಲಿ ರೈತನ ಸಂಗಾತಿಯಂತಿದ್ದ ಎತ್ತಿನಗಾಡಿ, ಈಗ ಮೂಲೆ ಸೇರಿವೆ. ಹಿಂದೆ ಗ್ರಾಮೀಣ ಭಾಗದಲ್ಲಿ ರೈತರು ಬಹುತೇಕ ಮರದ ಎತ್ತಿನಗಾಡಿಗಳನ್ನೆ ಆಶ್ರಯಿಸಿದ್ದರು.

ತಮ್ಮ ದೈನಂದಿನ ಕೃಷಿ ಚಟುವಟಿಕೆಗಳಿಗೆ, ಬೇಸಾಯದ ಸಾಮಾನು ಸಾಗಿಸುವುದರಿಂದ ಹಿಡಿದು ಧಾನ್ಯ, ಗೊಬ್ಬರ, ಜಾನುವಾರುಗಳಿಗೆ ಮೇವು ತರಲು ಹೀಗೆ ಪ್ರತಿಯೊಂದಕ್ಕೂ ಎತ್ತಿನ ಗಾಡಿ ಅನಿವಾರ್ಯವಾಗಿತ್ತು. ಹಬ್ಬ, ಹರಿದಿನ, ಜಾತ್ರೆ, ಶುಭ ಸಮಾರಂಭ, ಧಾರ್ಮಿಕ ಸ್ಥಳಗಳಿಗೆ ಯಾತ್ರೆ, ಮಧುವಣಗಿತ್ತಿಯ ಮೆರವಣಿಗೆಯಂತಹ ಕಾರ್ಯಗಳಿಗೆ ಎತ್ತಿನಗಾಡಿ ಬಳಕೆ ಸಂಭ್ರಮದ ಕ್ಷಣವಾಗಿತ್ತು. ಅದರಲ್ಲೂ ಎತ್ತಿಗೆ ಅಲಂಕಾರ ಮಾಡಿಕೊಂಡು, ಗಾಡಿಗೆ ತರಾವರಿ ಬಣ್ಣ ಬಳಿದು ಹೊಡೆದುಕೊಂಡು ಹೋಗುತ್ತಿದ್ದರೆ ಗ್ರಾಮೀಣ ಜನರ ಕಣ್ಣಿಗೆ ಹಬ್ಬ ನೀಡುವ ಖುಷಿ ಸಂಗತಿ.

ಬೆಳ್ಳಂಬೆಳಗ್ಗೆ ತಂಡೋಪತಂಡವಾಗಿ ಎತ್ತಿನಗಾಡಿಯಲ್ಲಿ ಊಟದ ಗಂಟು ಕಟ್ಟಿಕೊಂಡು, ಇಲ್ಲ ಕುಕ್ಕೆಯಲ್ಲಿ ತುಂಬಿಕೊಂಡು ಸಾಗಿ, ಜಾತ್ರೆ, ಉತ್ಸವಗಳನ್ನು ಮುಗಿಸಿ ಸಂಭ್ರಮದಿಂದ ಸಂಜೆ ವೇಳೆಗೆ ಮನೆಗೆ ಹಿಂತಿರುಗುತ್ತಿದ್ದರು. ಹಚ್ಚ ಹಸಿರಿನ ಮಧ್ಯೆ ಎತ್ತಿನಗಾಡಿಗಳ ಸಾಲುಗಳು ಬರುತ್ತಿದ್ದರೆ ವಾವ್.... ಅದರ ನೋಟವೇ ಬೇರೆ, ಎತ್ತುಗಳಿಗೆ ಕಟ್ಟಿದ ಗೆಜ್ಜೆಗಳ ಶಬ್ದ ಕಿವಿಗೆ ಇಂಪು ನೀಡುತ್ತಿದ್ದವು. ಎಷ್ಟೇ ಭಾರವನ್ನು ಹಾಕಿದ್ದರೂ ತನ್ನ ಬಾಹುಗಳ ಶಕ್ತಿ ಸಾಮರ್ಥ್ಯದಿಂದ ಎತ್ತುಗಳು ಎಳೆಯುತ್ತ ಬಂಡಿ ಸಾಗುವ ದೃಶ್ಯ ಅದ್ಭುತ. ಇವೆಲ್ಲವೂ ಇಂದು ನೆನಪುಗಳು ಮಾತ್ರ,

ಇವುಗಳ ನೆನಪುಗಳನ್ನು ಮುಂದಿನ ಪೀಳಿಗೆಗೆ ನೆನಪಿಸುವುದಕ್ಕೆ ಪಾಂಡವಪುರದ ದರಸಗುಪ್ಪೆಯ ಸಿ. ಭೀಮರಾಜು ವಿನೂತನವಾಗಿ ಮರದಗಾಡಿ, ಜೋಡಿ ಎತ್ತುಗಳು ಮತ್ತು ರೈತನ ಮೂರ್ತಿಗಳನ್ನು ತಮ್ಮ ನೂತನ ಪೆಟ್ರೋಲ್ ಬಂಕ್‌ನ ಮುಂದಿನ ಹುಲ್ಲು ಹಾಸಿನ ಮೇಲೆ ಕಂಗೊಳಿಸುವಂತೆ ಮಾಡಲು ಸ್ನೇಹಿತ ಕಲಾವಿದ ಮಂಜುನಾಥ ಅವರಿಗೆ ಜವಾಬ್ದಾರಿ ವಹಿಸಿದ್ದಾರೆ.

ಬಾಲ್ಯದಿಂದಲೇ ಕಲೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಇವುಗಳ ಬಗ್ಗೆ ಅಪಾರವಾದ ಕಾಳಜಿಯಿಂದಲೇ ಮುಂದೆ ಬಂದ ಮೈಸೂರಿನ ಕುಕ್ಕರಳ್ಳಿಯ ಮಂಜುನಾಥ್, ಅದರಲ್ಲೂ ಗ್ರಾಮೀಣ ಕಲೆಯನ್ನು ತಮ್ಮ ಉಸಿರಾಗಿಸಿಕೊಂಡು 40 ವರ್ಷಗಳಿಂದ ಎಲೆಮರೆ ಕಾಯಿಂತೆ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಇವರು ಬಿ.ಎಫ್.ಎ. ಹಾಗೂ ಎಂ.ಎಫ್.ಎ ವಿದ್ಯಾರ್ಥಿಯಾಗಿದ್ದು, ಸೃಜನಶೀಲ ಕಲೆಗಾರರು.

ಕೆಲವೊಮ್ಮೆ ಸರಳವಾದ ಹವ್ಯಾಸವು ಒಂದು ಸಮಸ್ಯೆಯನ್ನು ಪರಿಹರಿಸಲು ಮತ್ತು ಎರಡು ಪ್ರಯೋಜನಗಳನ್ನು ತರಲು ಸಹಾಯ ಮಾಡುತ್ತದೆ. ಸಂಗ್ರಹವಾದ ಮನೆ ನಿರ್ಮಾಣ ತ್ಯಾಜ್ಯವನ್ನು ವಿಲೇವಾರಿ ಮಾಡಲು, ಸೃಷ್ಟಿ ಪ್ರಕ್ರಿಯೆಯನ್ನು ಆನಂದಿಸಲು ಮತ್ತು ಸ್ನೇಹಿತರು ಹಾಗೂ ಪರಿಚಯಸ್ಥರಿಗೆ ಉತ್ತಮವಾದ ಶಿಲ್ಪ ಕಲೆಯನ್ನು ನೀಡಲು ಅನುಕೂಲವಾಗುತ್ತದೆ ಎಂದು ಕಲಾವಿದ ಮಂಜುನಾಥ್ ಹೇಳುತ್ತಾರೆ.

ಮರದಿಂದ ತಯಾರಾಗುವ, ನಮ್ಮ ಹಳೆಯ ಮಾದರಿಯ ಎತ್ತಿನಗಾಡಿಗಳನ್ನು ನಿರ್ಮಿಸಲು ಯಾರಿಗೂ ಇಷ್ಟವಿಲ್ಲ. ಮರಗೆಲಸ ಮಾಡುವ ಕಲಾವಿದರೂ ಈಗ ಕಮ್ಮಿ. ಅಧಿಕ ವೆಚ್ಚ ಹಾಗೂ ಸಮಯದ ಅಭಾವ ಇವೆಲ್ಲವನ್ನು ಗಮನಿಸಿ ಹಳೆಯ ಮಾದರಿ ಕಡೆಗೆ ರೈತರು ಈಗ ಗಮನ ಕೊಡುತ್ತಿಲ್ಲ. ಆದರೆ ಹಳೆಯ ಮಾದರಿಯ ಕಲೆಗಳಿಗೆ ಹೆಚ್ಚಿನ ಗಮನ ಕೊಡುವವರು ಬಹಳ ವಿರಳ. ಅದರಲ್ಲಿ ಒಬ್ಬರಾದ ಸ್ನೇಹಿತ ಭೀಮರಾಜು ನನಗೆ ಈ ಕಾರ್ಯವನ್ನು ಒಪ್ಪಿಸಿದ್ದರು. ಅವರಲ್ಲಿ ಇರುವ ಆಸಕ್ತಿಯನ್ನು ಗಮನಿಸಿ ಈ ಕೆಲಸವನ್ನು ಒಪ್ಪಿಕೊಂಡು, ಎತ್ತಿನಗಾಡಿ, ಎತ್ತುಗಳು, ರೈತನ ಪ್ರತಿಮೆಯನ್ನು ಮಾಡಲು ಮನೆ ನಿರ್ಮಾಣದ ತ್ಯಾಜ್ಯ ವಸ್ತುಗಳನ್ನು ಬಳಸಿದ್ದೇನೆ. ಇಟ್ಟಿಗೆ, ಸಿಮೆಂಟ್ ಗಾರೆ, ಅಳಿದುಳಿದ ಕಬ್ಬಿಣದ ತುಂಡುಗಳನ್ನು ಬಳಸಿ ಮರೆತಿರುವ ಎತ್ತಿನ ಗಾಡಿಯನ್ನು ಐದು ಜನ ಕಲಾವಿದರು ಕೂಡಿ ನಿರ್ಮಿಸಿದ್ದೇವೆ. ಬಣ್ಣದ ಲೇಪನ ಮಾಡಬೇಕಾಗಿದೆ. ಇದೇ ರೀತಿ ಡಾ.ಅಂಬೇಡ್ಕರ್, ಸುತ್ತೂರು ಶ್ರೀಗಳ ಪ್ರತಿಮೆ, ಹಸು- ಕರುವಿನ ಪ್ರತಿಮೆ ಇತ್ಯಾದಿ ಹತ್ತು ಹಲವಾರು ಸಿಮೆಂಟ್ ಪ್ರತಿಮೆಗಳನ್ನು ಮಾಡಿಕೊಟ್ಟಿದ್ದೇವೆ. ಇದರ ಜೊತೆಯಲ್ಲಿ ಫೈಬರ್‌ನಿಂದ ಮಾಡಿದ ಪ್ರತಿಮೆ, ಮನೆಯ ಗೋಡೆಗಳ ಮೇಲೆ ನಾನಾ ವಿನ್ಯಾಸದ ಕಲಾತ್ಮಕ ಪೇಂಟಿಂಗ್ ಕಲೆಗಳು ಇವರ ಕೈಗಳಿಂದ ಅರಳಿವೆಯಂತೆ.

ಎರಡು ವರ್ಷ ಕೊರೊನಾ ಕಾಳ ಛಾಯೆ ಪ್ರತಿಯೊಬ್ಬರನ್ನು ಹಿಂಡಿ ಹಿಪ್ಪೆ ಮಾಡಿತ್ತು. ಕೆಲಸವಿಲ್ಲದೆ ಮನೆಯಲ್ಲೇ ಕೂತು ಕೊಂಡಿದ್ದೆವು. ಆದರೆ ಶಿಲ್ಪ ಕಲೆಯ ಉದ್ಯೋಗಕ್ಕೆ ಬಹುತೇಕ ಹಣಕಾಸಿನ ಹೂಡಿಕೆಗಳ ಅಗತ್ಯವಿರುವುದಿಲ್ಲ. ಆದುದರಿಂದ ಕೆಲಸವಿಲ್ಲದೆ ಇದ್ದರು ಜೀವನ ಹೇಗೋ ನಡೆಯುತ್ತಿತ್ತು ಎಂದು ಕಲಾವಿದ ಮಂಜುನಾಥ ತಿಳಿಸುತ್ತಾರೆ.

ಮನುಷ್ಯ ಬದುಕಿನಲ್ಲಿ ನಿರಂತರ ಹೊಸತನ್ನು ಹೊಂದುವ ತವಕ, ಮತ್ತಷ್ಟು ವೇಗವಾಗಿ ಅನುಭವಿಸುವ ಅವಸರದಲ್ಲಿ ಮುನ್ನುಗ್ಗುವ ಭರಾಟೆಯಲ್ಲಿ ಟಯರ್ ಗಾಡಿ, ಪರಂಪರೆಯ ಅನುಭವಗಳ ಪೊರೆಯನ್ನು ಕಳಚುತ್ತಾ ಸಾಗುತ್ತಿದ್ದಾನೆ. ತಂತ್ರಜ್ಞಾನದ ಭರಾಟೆಯಲ್ಲಿ ಟ್ರ್ಯಾಕ್ಟರ್, ಗೂಡ್ಸ್ ಆಟೋಗಳ ನಡುವೆ ಎತ್ತಿನ ಗಾಡಿಗಳು ತಮ್ಮ ಅಸ್ತಿತ್ವ ಕಳೆದುಕೊಂಡಿವೆ. ಎತ್ತಿನಗಾಡಿಗಳು ಮೂಲೆ ಸೇರುತ್ತಿದ್ದಂತೆ ಇದನ್ನು ಅವಲಂಬಿಸಿದ ಕೆಲ ಉದ್ಯೋಗಗಳೂ ನಶಿಸಿಹೋಗಿವೆ. ಹುಡುಕಿದರೆ ಅಲ್ಲೊಂದು ಇಲ್ಲೊಂದು ಮೂಲೆಯಲ್ಲಿ ಮುರಿದು ಬಿದ್ದಿರುತ್ತವೆ.

ಸ್ತನ್ಯಪಾನ ಮಗುವಿಗೆ ಜೀವದಾನ...



✍ - ಜಿ.ವಿ.ಶ್ರೀನಾಥ್
ಮೊ.ನಂ- 9900927259

ತಾಯಿಯ ಎದೆಹಾಲು ಪ್ರಕೃತಿದತ್ತವಾದ ದೇವರ ಕೊಡುಗೆಯಾಗಿದ್ದು, ಎದೆ ಹಾಲಿನಿಂದ ಮಗುವಿನ ಆರೋಗ್ಯ ಮತ್ತು ಬೆಳವಣಿಗೆ ಜೊತೆಗೆ ಭವಿಷ್ಯದ ವ್ಯಕ್ತಿಯಾಗಿ ರೂಪಿಸುವ ಚೈತನ್ಯ ಶಕ್ತಿ ಅಡಗಿದ್ದು, ಮಗು ಜನಿಸಿದ ಆರು ತಿಂಗಳ ಕಾಲ ಎದೆ ಹಾಲುಣಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ 1991ರಲ್ಲಿ WHO ಮತ್ತು UNICEF, WBW ಸಹಯೋಗದಲ್ಲಿ 'ವಿಶ್ವ ಸ್ತನ್ಯಪಾನ ಸಪ್ತಾಹ'ವನ್ನು ಆರಂಭಿಸಲಾಯಿತು. ಪ್ರತಿ ವರ್ಷ ಆಗಸ್ಟ್ 1 ರಿಂದ 7ರವರೆಗೆ ಸಪ್ತಾಹದೊಂದಿಗೆ ಈ ಕುರಿತು ತಾಯಂದಿರಿಗೆ ಹೆಚ್ಚಿನ ಅರಿವು ಮೂಡಿಸುವ ಜಾಗೃತಿ ಕಾರ್ಯ 120ಕ್ಕೂ ಹೆಚ್ಚು ದೇಶಗಳಲ್ಲಿ ನಡೆಸಲಾಗುತ್ತಿದೆ.

ಆಧುನಿಕ ಯುಗದಲ್ಲಿ ಮಹಿಳೆಯರಲ್ಲಿ ತಪ್ಪು ಕಲ್ಪನೆ, ಉದ್ಯೋಗಸ್ಥ ಮಹಿಳೆಯರಿಗೆ ಸಮಯದ ಅಭಾವ ಅಥವಾ ಸೌಂದರ್ಯ ಹಾಳಾಗುತ್ತದೆ ಎಂಬ ತಪ್ಪು ತಿಳುವಳಿಕೆಯಿಂದ ಆದಷ್ಟು ಬೇಗ ಮಗುವಿಗೆ ಎದೆ ಹಾಲು ಬಿಡಿಸಿ, ಬಾಟಲಿ ಹಾಲನ್ನು ನೀಡಲು ಮುಂದಾಗುತ್ತಿರುವುದು ವಿಷಾದನೀಯ. ಜೀವನ ಮಟ್ಟ ಹಾಗೂ ಶಿಕ್ಷಣ ಮಟ್ಟ ಕಡಿಮೆ, ಶುಚಿತ್ವಕ್ಕೆ ಗಮನಹರಿಸದೆ ಇರುವ ಕುಟುಂಬ ಮತ್ತು ಮೂಢನಂಬಿಕೆಗಳ ಕಾರಣದಿಂದ ಮಗು ಬೇಗ ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿರುತ್ತದೆ.

ಗರ್ಭಿಣಿಯರಿಗೆ ಮಹತ್ವದ ಒಂದು ಕಿವಿಮಾತು: ಮಗು ಹುಟ್ಟಿದ ತಕ್ಷಣವೇ ಎದೆ ಹಾಲನ್ನು ಕುಡಿಸುವುದರಿಂದ ಗಿಣ್ಣು ಹಾಲಿನಲ್ಲಿ ಹಳದಿ ಬಣ್ಣದ ಕೊಲೆಸ್ಟ್ರಮ್ ಎಂಬ ಅಂಶವಿದ್ದು, ಮಗುವಿನ ರೋಗನಿರೋಧಕ ಶಕ್ತಿ ಹೆಚ್ಚಾಗಲು ಮತು ಮಗುವಿನ ಬೆಳವಣಿಗೆಗೆ ಅಗತ್ಯವಿರುವ ಕ್ಯಾಲ್ಸಿಯಂ, ವಿಟಮಿನ್ ಎ, ಕೊಬ್ಬು, ಸಕ್ಕರೆ, ನೀರು, ಮತ್ತು ಪ್ರೋಟೀನ್‌ವುಳ್ಳ ಸಮತೋಲನ ಆಹಾರ ಸಾಧ್ಯವಾಗುತ್ತದೆ. ಎದೆಹಾಲು ಹಾರ್ಮೋನು, ಬೆಳವಣಿಗೆಯ ಅಂಶಗಳು ಮತ್ತು ಪ್ರತಿರಕ್ಷಾ ಅಂಶಗಳನ್ನು ಶಿಶುಗಳಿಗೆ ಉಸಿರಾಟದ ಸಮಸ್ಯೆ, ಕಿವಿ ಮತ್ತು ಮೂತ್ರದ ಸೋಂಕು, ಅತಿಸಾರ, ಮಲಬದ್ಧತೆ ಮತ್ತು ಜಠರ, ಕರುಳಿನ ಸಮಸ್ಯೆಗಳು ಸೇರಿದಂತೆ ಸಾಂಕ್ರಾಮಿಕ ಕಾಯಿಲೆಗಳಿಂದ ಪರಿಣಾಮಕಾರಿಯಾಗಿ ರಕ್ಷಿಸಲು ಸ್ತನ್ಯಪಾನವು ಜೀವರಾಸಾಯನಿಕ ಪ್ರಚೋದಿಸುತ್ತದೆ.

ಎದೆ ಹಾಲು ಕುಡಿಯುವುದರಿಂದ ಮಗುವಿಗೆ ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ, ಮಗುವಿನ ಬಾಯಾರಿಕೆ ತಣಿಯುತ್ತದೆ, ಮಗುವಿನ ಮೆದುಳು, ಕಣ್ಣು ಮತ್ತು ಶರೀರದ ಉತ್ತಮ ಬೆಳವಣಿಗೆಗೆ ತಾಯಿ ಹಾಲು ಉತ್ತಮ ಆಹಾರ. ಎದೆ ಹಾಲಿನಲ್ಲಿ ಪೋಷಕಾಂಶಗಳು ಸಮೃದ್ಧವಾಗಿದ್ದು, ಮಗುವಿನ ಬೆಳವಣಿಗೆಗೆ ಮತ್ತು ಪೌಷ್ಟಿಕಾಂಶದ ಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಆಧುನಿಕ ಯುಗದಲ್ಲಿ ಮಹಿಳೆಯರಲ್ಲಿ ತಪ್ಪು ಕಲ್ಪನೆ, ಉದ್ಯೋಗಸ್ಥ ಮಹಿಳೆ ಯರಿಗೆ ಸಮಯದ ಅಭಾವ ಅಥವಾ ಸೌಂದರ್ಯ ಹಾಳಾಗುತ್ತದೆ ಎಂಬ ತಪ್ಪು ತಿಳುವಳಿಕೆಯಿಂದ ಆದಷ್ಟು ಬೇಗ ಮಗುವಿಗೆ ಎದೆ ಹಾಲು ಬಿಡಿಸಿ, ಬಾಟಲಿ ಹಾಲನ್ನು ನೀಡಲು ಮುಂದಾಗುತ್ತಿರುವುದು ವಿಷಾದನೀಯ. ಜೀವನ ಮಟ್ಟ ಹಾಗೂ ಶಿಕ್ಷಣ ಮಟ್ಟ ಕಡಿಮೆ, ಶುಚಿತ್ವಕ್ಕೆ ಗಮನಹರಿ ಸದೆ ಇರುವ ಕುಟುಂಬ ಮತ್ತು ಮೂಢನಂಬಿಕೆ ಗಳ ಕಾರಣದಿಂದ ಮಗು ಬೇಗ ಅನಾರೋಗ್ಯಕ್ಕೆ ತುತ್ತಾಗುವ ಸಂಭವವಿರುತ್ತದೆ.



ಮಗುವಿನ ಶರೀರದ ತೂಕವನ್ನು ಸಮತೋಲನದಲ್ಲಿಡಲು ಮತ್ತು ಅದರ ದವಡೆ ಬೆಳವಣಿಗೆಗೂ ತಾಯಿ ಹಾಲು ಉತ್ತಮ. ಎದೆ ಹಾಲು ನೀಡುವುದರಿಂದ ತಾಯಿ ಮತ್ತು ಮಗುವಿನ ಸಂಬಂಧ ಇನ್ನಷ್ಟು ಉತ್ತಮವಾಗಿರುತ್ತದೆ. ತಾಯಿ-ಮಗು ನಡುವಿನ ಸಂಬಂಧವನ್ನು ಬಲಪಡಿಸುತ್ತದೆ. ಇದರಿಂದ ಭಾವನಾತ್ಮಕವಾಗಿ ಮಗುವಿನ ಮೇಲಿನ ಮಮಕಾರ ಹೆಚ್ಚುತ್ತದೆ. ಇಬ್ಬರ ನಡುವೆ ಉತ್ತಮ ಬಾಂಧವ್ಯ ಮತ್ತು ಪ್ರೀತಿ ವೃದ್ಧಿಸುತ್ತದೆ.

ತಾಯಿಗೆ ಪ್ರಸವದ ನಂತರದ ರಕ್ತ ಸ್ರಾವದಿಂದಾಗುವ ತೊಂದರೆ ಕಡಿಮೆಯಾಗುತ್ತದೆ ಮತ್ತು ಋತುಚಕ್ರವು ನಿಧಾನವಾಗಿ ಆಗುತ್ತದೆ. ಮಾನಸಿಕ ಒತ್ತಡವನ್ನು ಕಡಿಮೆ ಮತ್ತು ಧನಾತ್ಮಕ ಭಾವನೆಗಳನ್ನು ಉತ್ತೇಜಿಸುತ್ತದೆ. ಮಾನಸಿಕ ನೆಮ್ಮದಿಗೂ ಸಾಕಷ್ಟು ಸಹಾಯ ಮಾಡುತ್ತದೆ. ಒಂದು ಮಗುವಿನಿಂದ ಮತ್ತೊಂದು ಮಗುವಿಗೆ ಅಂತರ ಕಾಯ್ದುಕೊಳ್ಳಲು ಸಹಕಾರಿಯಾಗುತ್ತದೆ. ಮಹಿಳೆಯರಲ್ಲಿನ ಸ್ತನಕ್ಯಾನ್ಸರ್, ಗರ್ಭಕೋಶದ ಕ್ಯಾನ್ಸರ್ ಅನ್ನು ತಡೆಗಟ್ಟಬಹುದು.

ಹಾಲುಣಿಸುವ ಕ್ರಮ: ಹುಟ್ಟಿದ ಮಕ್ಕಳಿಗೆ ತಿಂಗಳವರೆಗೆ ದಿನಕ್ಕೆ ಕನಿಷ್ಠ 8 ರಿಂದ 12 ಬಾರಿ ಹಾಲುಣಿಸಬೇಕು. ಮಗು ಪ್ರತಿ ಬಾರಿ ಅತ್ತಾಗಲು ಹಾಲು ಕುಡಿಸಬೇಕು. ಆರೋಗ್ಯವಂತ ಮಗುವಿಗೆ 90 ನಿಮಿಷಕ್ಕೊಮ್ಮೆ ಹಾಲುಣಿಸಬೇಕು. ಎದೆಹಾಲು ಬೇಗ ಜೀರ್ಣವಾಗುವ ಕಾರಣ ಮಗುವಿಗೆ ಬೇಗ ಹಸಿವಾಗುವುದರೊಂದಿಗೆ ಗಂಟಲು ಒಣಗುವ ಸಾಧ್ಯತೆ ಇದ್ದು, ಆಗಾಗ ಹಾಲು ಕುಡಿಸುತ್ತಿರಬೇಕು.

ತಾಯಿ ಮೊದಲು ಹಾಲುಣಿಸುವ ವಿಧಾನ ಸರಿಯಾಗಿ ತಿಳಿಯದೆ ಮೊಲೆ ತೊಟ್ಟು ಒಡೆದು ರಕ್ತ ಬರಬಹುದು. ಎದೆ ಭಾಗ, ಎದೆ ತೊಟ್ಟು ಶುಚಿಗೊಳಿಸುವುದನ್ನು ಅರಿತುಕೊಳ್ಳಬೇಕಾಗುತ್ತದೆ. ತೆರೆಮರೆಯಲ್ಲಿ ಮಗುವಿಗೆ ಹಾಲುಣಿಸಿದರೆ ಎದೆಹಾಲು ನಿರಾಳವಾಗಿ ಹೆಚ್ಚಾಗುತ್ತದೆ. ತಾಯಿ ತನ್ನ ಮಗುವಿಗೆ ಹಾಲುಣಿಸುವಾಗ ಯಾವುದೇ ಚಿಂತೆ, ಆಘಾತ ಪರಿಸ್ಥಿತಿಗೀಡಾಗಬಾರದು. ಆಗ ಹಾಲು ವೃದ್ಧಿಸಿ ಮಗುವಿಗೆ ಸಾಕಷ್ಟು ದೊರೆಯುತ್ತದೆ. ಮಗುವಿಗೆ ಹಾಲುಣಿಸುವ ಕ್ರಮ ಮತ್ತು ಕೂರುವ ಭಂಗಿ ಬಗ್ಗೆಯೂ ತಿಳಿದಿರಬೇಕು. ಎದೆ ಹಾಲು ನೀಡುವುದರಿಂದ ಕಾಯಿಲೆ ಮಾತ್ರವಲ್ಲದೆ ಶಿಶು ಮರಣವನ್ನು ತಪ್ಪಿಸಬಹುದು.

ಈ ಸಮಯದಲ್ಲಿ ತಮ್ಮಲ್ಲೇ ಬೆಳೆಯುವ ದವಸ ಧಾನ್ಯಗಳು, ಹಸಿರು ಸೊಪ್ಪು, ತರಕಾರಿಗಳು ಮತ್ತು ಕಾಯಿಪಲ್ಯಗಳನ್ನು ಸೇವಿಸುವುದನ್ನು ತಾಯಂದಿರು ಯಾವುದೇ ಕಾರಣಕ್ಕೂ ತಪ್ಪಿಸಬಾರದು. ಸಾಕಷ್ಟು ಪೌಷ್ಟಿಕ ಆಹಾರವನ್ನು ಮತ್ತು ಸಮತೋಲನ ಆಹಾರವನ್ನು ಹೆಚ್ಚಾಗಿ ಬಳಸುವುದರಿಂದ ಮಗುವಿಗೆ ಸಮೃದ್ಧ ಆಹಾರ ಲಭ್ಯವಾಗುತ್ತದೆ.

ಮಗುವಿಗೆ 6 ತಿಂಗಳು ಕಡ್ಡಾಯ:- ಮಗುವಿಗೆ ತಾಯಿ ಹಾಲಿಗಿಂತ ಸಮೃದ್ಧ ಆಹಾರ ಮತ್ತೊಂದಿಲ್ಲ ಆದ್ದರಿಂದ ಮೊದಲ 6 ತಿಂಗಳು ಕಡ್ಡಾಯವಾಗಿ ಬರೀ ಎದೆ ಹಾಲು ನೀಡಬೇಕು ನಂತರ 2 ವರ್ಷದವರೆಗೆ ಎದೆ ಹಾಲಿನೊಂದಿಗೆ ಘನ ಆಹಾರ ನೀಡಲು ಆರಂಭಿಸಬೇಕು. 2 ವರ್ಷದ ನಂತರವೂ ಎದೆ ಹಾಲು ನೀಡಲು ಮುಂದುವರೆಸಿದರೆ ಮಗುವಿಗೆ ಅನೇಕ ಪ್ರಯೋಜನವಾಗಲಿದೆ. ಮಗುವಿಗೆ ಜನ್ಮ ನೀಡಿರುವುದೇ ತಾಯಿಯ ಸಾರ್ಥಕತೆ. ಇಂತಹ ಅಪರೂಪದ ಸಮಯವನ್ನು ವ್ಯರ್ಥ ಮಾಡದೇ ತನ್ನ ಮತ್ತು ಮಗುವಿನ ಆರೋಗ್ಯಕ್ಕೆ ಅಡಿಪಾಯ ಹಾಕಬೇಕೆನ್ನುವ ಮಹದಾಸೆಯನ್ನು ಪ್ರತಿ ತಾಯಂದಿರು ಹೊಂದಿದ್ದರೆ, ಆ ಮೂಲಕ ಆರೋಗ್ಯ ಸಮಾಜ ಸೃಷ್ಟಿ ಖಚಿತ. ■



ವಾರಭವಿಷ್ಯ
31.7.2022 ರಿಂದ 6.8.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ಕಟಕ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ-ಮೇಷ, ಬುಧ-ಕಟಕ, ಸಿಂಹ, ಗುರು-ಮೀನ, ಶುಕ್ರ-ಮಿಥುನ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಚಂಚಲ ಗುಂಗಿನಲ್ಲಿದ್ದರೂ ಕ್ರಿಯಾಶೀಲತೆ ಉತ್ತಮವಾಗಿರುವುದು. ಎಲ್ಲರೊಡನೆ ಬೆರೆತು ಮೆಚ್ಚುಗೆ ಗಳಿಸುವಿರಿ. ಕುಲೀನ ಸ್ತ್ರೀಯರಿಂದ ಬೆಂಬಲ ದೊರೆಯುವುದು. ವ್ಯಯಸ್ಥ ಗುರುವಿನಿಂದ ಅವಿಶ್ರಾಂತ ದುಡಿಮೆ ಅನಾರೋಗ್ಯಕ್ಕೆ ಎಡೆ ಮಾಡಿಕೊಡುವುದು. ರಾಹು ಬಾಧಿಸುವುದರಿಂದ ಶೀತ, ಅಮಶೂಲೆಯಿಂದ ಬಳಲುವ ಸಾಧ್ಯತೆ. ಕೃಷಿ ಸಾಧನ, ಸಲಕರಣೆಗಳು, ಗೊಬ್ಬರ, ಗಣಿಗಾರಿಕೆಗಳಿಂದ ಲಾಭ, ಗೃಹ ಕಟ್ಟಡ ಸಂಬಂಧಿ ವಸ್ತುಗಳ ವ್ಯವಹಾರದಲ್ಲಿ ಲಾಭ.
- ಶ್ರೀವಿಘ್ನೇಶ್ವರನ ಪೂಜೆ, ಶುಭಸಂಖ್ಯೆ-6.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಶ್ರೀಗುರು ಶುಭನಿದ್ದಾನೆ. ನಿಮ್ಮ ಉದಾತ್ತ ಆದರ್ಶಗಳಿಂದ ಉಚ್ಚ ಶ್ರೇಣಿಗೆ ತಲುಪುವ ಸಾಧ್ಯತೆ ಇದೆ. ಪುರಾತನ ಗ್ರಂಥಗಳಲ್ಲಿ ಆಸಕ್ತಿ ಉಂಟಾದೀತು. ಮಠಾಧಿಪತಿಗಳ ಆಶೀರ್ವಾದ ದೊರಕಲಿದೆ. ಮನೆಯಲ್ಲಿ ಶಾಂತಿ ಹಾಗೂ ಹೊಂದಾಣಿಕೆಯಿಂದ ಮುಂದುವರೆಯಿರಿ. ವ್ಯಯಸ್ಥ ರಾಹು ನಿಮ್ಮಿಂದ ನೀತಿಗೆಟ್ಟ ಕಾರ್ಯಕ್ಕೆ ಪ್ರೇರೇಪಿಸಬಹುದು. ಸ್ನಾಯು ದೌರ್ಬಲ್ಯದಿಂದ ವೈದ್ಯಕೀಯ ಪರೀಕ್ಷೆ ಅನಿವಾರ್ಯವಾಗಬಹುದು.
- ಶ್ರೀಗುರ್ವಾಷ್ಟೋತ್ತರ ಪಠಿಸಿ, ಶುಭಸಂಖ್ಯೆ-2



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಚಂದ್ರ ಗ್ರಹದ ಶುಭ ಸಂಚಾರದಿಂದ ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಗಳಿಸಿ ಕೀರ್ತಿಗೆ ಭಾಜನರಾಗುವಿರಿ. ಸ್ವ ಪ್ರಯತ್ನದಿಂದ ವಿಶಿಷ್ಟ ಸ್ಥಾನವನ್ನು ಕೈವಶ ಪಡಿಸಿಕೊಳ್ಳುವಿರಿ. ಮಕರ ಶನಿಯಿಂದ ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದು. ಆಸ್ತಿ ವಿಷಯದಲ್ಲಿ ವ್ಯಾಜ್ಯಗಳು ಉಂಟಾಗಬಹುದು. ವಾರಾಂತ್ಯಕ್ಕೆ ಧನಲಾಭ. ಸ್ತ್ರೀ ಸುಖಾದಿಗಳು.
- ಶ್ರೀವಿಷ್ಣು ಅರ್ಚನೆ, ಶುಭಸಂಖ್ಯೆ-4.



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ವಾರದಾರಂಭಕ್ಕೆ ಸುಗಂಧ, ಪುಷ್ಪ, ವಸ್ತ್ರ, ಭೋಗ ವಿಲಾಸಗಳನ್ನು ಅನುಭವಿಸುವಿರಿ. ಸರ್ಕಾರದಿಂದ ಮಾನ್ಯತೆ ಹಾಗೂ ಪಾರಿತೋಷಕ ದೊರೆಯುವುದು. ನಿಮ್ಮ ಸತ್ಯ, ನಿಷ್ಠೆ, ಪ್ರಾಮಾಣಿಕತೆಗಳಿಂದ ಜನಾನುರಾಗಗಳಿಸುವಿರಿ. ಪಾಲುದಾರಿಕೆ ವ್ಯವಹಾರಗಳಲ್ಲಿ ನಷ್ಟವನ್ನು ಅನುಭವಿಸಬೇಕಾದೀತು. ವಾರದ ಕಡೆಗೆ ಪರಸ್ಥಳಕ್ಕೆ ತೆರಳಿ ಪರದಾಡುವಿರಿ. ಸಮುದ್ರ, ಜಲಾಶಯಗಳ ಹತ್ತಿರ ಹುಡುಗಾಟ ಸಲ್ಲದು.
- ಶ್ರೀದುರ್ಗಾ ಸ್ತುತಿ, ಶುಭಸಂಖ್ಯೆ-8.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಪ್ರಗತಿಪಥದಲ್ಲಿ ಮುನ್ನಡೆಯುವಿರಿ. ತಕ್ಕಮಟ್ಟಿಗೆ ಧನ ಸಂಪಾದನೆಯೂ ಆಗುವುದು. ಹೊಟೇಲ್, ಕ್ಯಾಟರಿಂಗ್ ಉದ್ಯೋಗದವರಿಗೆ ಬೇಡಿಕೆ ಹೆಚ್ಚಾಗುವುದು. ರವಿ ಪ್ರಭಾವದಿಂದ ಸರ್ಕಾರಿ ಕೆಲಸಗಳು ಅನುಕೂಲಕರವಾಗಿರುವುದು. ಮನೆ ಮಂದಿಯೊಂದಿಗೆ ಹೊಂದಾಣಿಕೆಯಿಂದ ಇರಲು ಪ್ರಯತ್ನಿಸಿ ಅನ್ಯಥಾ ವಿಷಮ ಸ್ಥಿತಿಗೆ ಹೋದೀತು.
- ಶ್ರೀರುದ್ರಜಪ, ಶುಭಸಂಖ್ಯೆ-3.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ತುಳಿಯುವವರು ಎಷ್ಟೇ ಜನ ಇದ್ದರೂ ಕಾಪಾಡಲು ಒಬ್ಬ ದೇವನಿದ್ದಾನೆ. ಈ ನಂಬಿಕೆಯಿಂದ ಮುಂದೆ ಸಾಗಿ. ನಿಮ್ಮ ಸದ್ಗುಣಗಳಿಂದ ಶತ್ರುಗಳನ್ನು ಗೆಲ್ಲುವಿರಿ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಪರೋಪಕಾರಿಗಳೆನಿಸಿ ಜನಾಧರಕ್ಕೆ ಪಾತ್ರರಾಗುವಿರಿ. ನಿಮ್ಮ ಯೋಗ್ಯತೆಗೆ ತಕ್ಕ ಗೌರವಾರ್ಹ ಉದ್ಯೋಗ ದೊರೆಯುವುದು. ವಾರದ ಕಡೆಗೆ ವಿನಾಕಾರಣ ಖರ್ಚುಗಳಿಂದ ಕಂಗಾಲು.
- ಶ್ರೀಹರಿನಾಮ ಸ್ಮರಣೆ, ಶುಭಸಂಖ್ಯೆ-1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಈ ವಾರ ನೀವು ಪ್ರೇರಕ ಶಕ್ತಿಯಾಗುವ ಅವಕಾಶವಿದೆ. ಚಂದ್ರ ಬಲದಿಂದ ಹಲವು ಮೂಲಗಳಿಂದ ಧನಾಗಮನವಾದರೂ ಮನಃಶಾಂತಿ ಇರುವುದಿಲ್ಲ. ನಿಮ್ಮ ಖಾಸಗಿ ಜೀವನ ಸಂತೋಷಮಯವಾಗಿರುವುದು. ಆದರೆ, ನ್ಯಾಯಾಲಯ ಪ್ರಕರಣಗಳಲ್ಲಿ ನಿರಾಶೆಯನ್ನು ಎದುರಿಸಬೇಕಾದೀತು. ಕೋಪದಿಂದ ಕಾರ್ಯಗೇಡು, ಶನಿ-ಗುರು ಅಶುಭರಿದ್ದು, ಆರೋಗ್ಯದಲ್ಲಿ ಏರು-ಪೇರು ಉಂಟಾದೀತು. ಸನ್ಮಿತ್ರರ ಮಧ್ಯೆ ಇರಿ ಒಳಿತಾಗುತ್ತದೆ.
- ಶ್ರೀಉತ್ತನಾಳಮ್ಮ ದರ್ಶನ, ಶುಭಸಂಖ್ಯೆ-5.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಆಗುವುದೆಲ್ಲಾ ಒಳ್ಳೆಯದಕ್ಕೆ ಎಂಬ ನಂಬಿಕೆಯಿಂದ ಮುಂದುವರೆಯಿರಿ. ಅಬಾಧಿತ ಚಂದ್ರ ಸಂಚಾರದಿಂದ ನೀವಂದುಕೊಂಡ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಆಸ್ತಿ-ಪಾಸ್ತಿ ವಿಷಯಗಳು ನಿಮಗೆ ಅನುಕೂಲಕರವಾಗಿ ಇತ್ಯರ್ಥವಾಗುವುದು. ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ ಎಂಬಂತೆ ನಡೆದರೂ, ಕೆಟ್ಟ ಹವ್ಯಾಸಗಳಿಗೆ ದಾಸರಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ನಷ್ಟವನ್ನು ಅನುಭವಿಸುವಿರಿ.
- ಶ್ರೀನೃಸಿಂಹಸ್ವಾಮಿ ಉಪಾಸನೆ, ಶುಭಸಂಖ್ಯೆ-9.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಹೀಗೇ ಆಗಬೇಕೆಂದು ಬಯಸದೆ, ಆಗಿದ್ದನ್ನು ಒಪ್ಪಿಕೊಳ್ಳುವುದು ಜಾಣತನ. ಹೊಸ ಉದ್ಯಮ ಪ್ರಾರಂಭಕ್ಕೆ ಮುನ್ನ ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸಿ. ಸುಂದರ ಬದುಕು ತನ್ನಿಂದ ಸೃಷ್ಟಿಯಾಗುವುದಿಲ್ಲ. ಅದಕ್ಕೆ ದೈವ ಕೃಪೆಯ ಜೊತೆಗೆ ಕಠಿಣ ಪರಿಶ್ರಮದ ಅಗತ್ಯವೂ ಇದೆ. ವಾರದ ಉತ್ತರಾರ್ಧದಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಇಂಟರ್‌ವ್ಯೂ ಸಕ್ಸಸ್. ಕ್ಷೀರೋತ್ಪನ್ನ ಉದ್ಯಮದವರಿಗೆ ಹೇರಳ ಧನಲಾಭವಾಗುವುದು.
- ಶ್ರೀಅಶ್ವತ್ಥವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-8.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಜನ್ಮಸ್ಥ ಶನಿದೇವನಿಂದಾಗಿ ಪ್ರಮುಖ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುತ್ತವೆ. ಮರಮುಟ್ಟು ಪೀಠೋಪಕರಣ ವ್ಯಾಪಾರಿಗಳಿಗೆ ಉತ್ತಮ ಧನಲಾಭವಾಗುವುದು. ನ್ಯಾಯಾಲಯ ವಿಚಾರಗಳಲ್ಲಿ ರಾಜಿ ಸಂಧಾನ ಒಳ್ಳೆಯದು. ಕಾರ್ಯ ನಿಮಿತ್ತ ಪ್ರಯಾಣಗಳು ಉಂಟಾಗಬಹುದು. ವಾಹನ ಜಾಗರೂಕತೆಯಿಂದ ಚಲಾಯಿಸಿ, ಅನ್ಯಥಾ ಗಂಡಾಂತರ ಎದುರಾದೀತು. ವಾರದ ಕಡೆಗೆ ಆಮೋದ- ಪ್ರಮೋದಗಳಿಂದ ಮಾನಸಿಕ ಉಲ್ಲಾಸ.
- ಶ್ರೀಕನ್ಯಾಷೋತ್ತರ ಪಠಿಸಿ, ಶುಭಸಂಖ್ಯೆ-5.




ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಒಂದು ಮಾರ್ಗದಿಂದ ಖರ್ಚು ವೆಚ್ಚಗಳು ಹೆಚ್ಚಾದರೂ ಇನ್ನೊಂದು ಮಾರ್ಗದಿಂದ ಧನಾಗಮನವಾಗಲಿದೆ. ವಾರಪೂರ್ತಿ ಲವಲವಿಕೆಯಿಂದ ಎಲ್ಲಾ ಕಾರ್ಯಗಳಲ್ಲೂ ಮಗ್ನರಾಗಿರುವಿರಿ. ಶ್ರೀಗುರು ಕೃಪೆಯಿಂದ ನಿಮ್ಮ ಆತ್ಮವಿಶ್ವಾಸ ಉಚ್ಚಮಟ್ಟದ್ದಾಗಿರುತ್ತದೆ. ಮಾಡಿದ ಪ್ರಯತ್ನಗಳಿಗೆ ಕಾರ್ಯ ಸಿದ್ಧಿ ಹೊಂದುವಿರಿ. ನಿಮ್ಮಿಚ್ಛೆಯ ವಸ್ತು, ವಾಹನ ಹೊಂದುವ ಆಶಯ ಪೂರ್ಣವಾಗುವುದು. ಸಣ್ಣ-ಪುಟ್ಟ ಅಪಘಾತ, ವಾಯು ತೊಂದರೆ ಕಾಡಬಹುದು.
- ಶ್ರೀ ಶಿವ ಪಂಚಾಕ್ಷರಿ ಮಂತ್ರ ಜಪಿಸಿ, ಶುಭಸಂಖ್ಯೆ-7.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ದೀರ್ಘ ಕಾಲಿಕ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಿ, ಇದು ನಿಮ್ಮ ಭವಿಷ್ಯದ ಭದ್ರತೆಗೆ ಅಗತ್ಯವಾಗಿದೆ. ವೃತ್ತಿಯಲ್ಲಿ ಬದಲಾವಣೆ ಅನಿವಾರ್ಯವಾಗಬಹುದು. 'ಮನಸ್ಸಿದ್ದರೆ ಮಾರ್ಗ' ಅನುಭವಿಗಳಿಂದ ನೆರವು, ಸ್ನೇಹಿತರಿಂದ ಸ್ಫೂರ್ತಿ ದೊರೆಯಲಿದೆ. ರಾಹುಗ್ರಹ ಅಶುಭನಿರುವ ಕಾರಣ ದುಷ್ಟ ಜನರಿಂದ ದೂರವಿರಿ ಅನ್ಯಥಾ ಠಾಣೆಗೆ ಅಲೆದಾಟ ಉಂಟಾದೀತು. ತಾಳ್ಮೆ ವಾಹನ ಚಾಲನೆ ನಿಮಗೂ ನಿಮ್ಮ ಮನೆಯವರಿಗೂ ಒಳ್ಳೆಯದು.
- ಶ್ರೀದತ್ತಗುರು ದರ್ಶನ, ಶುಭಸಂಖ್ಯೆ-4.

ಮಕ್ಕಳ ಚಿತ್ರಕಥೆ

ಕಲಾಂರವರ ನುಡಿಮುತ್ತುಗಳು...
-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಕಬ್ಬಿನ ದರ ನಿಗದಿಗೆ ಒತ್ತಾಯಿಸಿ ತಿ.ನರಸೀಪುರ, ನಂಜನಗೂಡಲ್ಲಿ

ರೈತ ಸಂಘ, ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ





ತಿ.ನರಸೀಪುರ/ನಂಜನಗೂಡು, ಜು.30– ಕಬ್ಬು ಖರೀದಿಸುವಲ್ಲಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಅನ್ಯಾಯವೆಸಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ತಕ್ಷಣ ಕಬ್ಬಿನ ದರ ನಿಗದಿ ಮಾಡಬೇಕೆಂದು ಒತ್ತಾಯಿಸಿ ತಿ.ನರಸೀಪುರ, ನಂಜನಗೂಡಿನಲ್ಲಿ ರೈತ ಸಂಘ ಹಾಗೂ ಕಬ್ಬು ಬೆಳೆಗಾರರ ಸಂಘದಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ: ಪಟ್ಟಣದ ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಕುಂತೂರಿನ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮಾಲೀಕರು ಕಳೆದ ವರ್ಷದ ದರಕ್ಕಿಂತ 450 ರೂ. ಕಡಿಮೆ ಬೆಲೆಗೆ ಕಬ್ಬು ಮಾರಾಟ ಮಾಡುವಂತೆ ಒತ್ತಾಯಿಸುತ್ತಿದ್ದಾರೆ. ಅಲ್ಲದೆ ಕಬ್ಬು ಕಟಾವು ಮಾಡಲು ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಪ್ರತಿ ಟನ್‌ಗೆ 200 ರೂ. ಹೆಚ್ಚುವರಿ ನೀಡುವಂತೆ ಬೇಡಿಕೆ ಇಡುತ್ತಿದ್ದಾರೆ. ಹಾಗಾಗಿ ಸರ್ಕಾರ ಶೀಘ್ರ ಕಬ್ಬಿನ ದರ ನಿಗದಿ ಮಾಡಬೇಕು ಮತ್ತು ಕಬ್ಬಿನ ಕಟಾವಿಗೆ ಹೆಚ್ಚುವರಿ ಹಣಕ್ಕೆ ಬೇಡಿಕೆ ಇಡದಂತೆ ಕಾರ್ಖಾನೆಗೆ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ಕಬ್ಬು ಬೆಳೆಗಾರರ ಸಂಘ ರಾಜ್ಯ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜು ಮಾತನಾಡಿ, ತಾಲೂಕಿನ ಕಬಿನಿ, ರಾಮಸ್ವಾಮಿ ಮತ್ತು ಮಾಧವ ಮಂತ್ರಿ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯುತ್ತಿದ್ದು, ಈ ಬಾರಿ ಜ್ಯೋತಿ ಭತ್ತದ ಬಿತ್ತನೆ ಬೀಜಕ್ಕೆ ಹೆಚ್ಚು ಬೇಡಿಕೆ ಉಂಟಾಗಿದೆ. ಆದರೆ ಕೃಷಿ ಇಲಾಖೆ ಮತ್ತು ಇತರೆ ಖಾಸಗಿ ಅಂಗಡಿಗಳಲ್ಲೂ ಜ್ಯೋತಿ ಭತ್ತದ ಬಿತ್ತನೆ ಬೀಜ ದಾಸ್ತಾನು ಇಲ್ಲ. ರಸಗೊಬ್ಬರ ಕೂಡ ಲಭ್ಯವಿಲ್ಲ. ಹಾಗಾಗಿ ರೈತರಿಗೆ ತೊಂದರೆಯಾಗದಂತೆ ಜ್ಯೋತಿ ಭತ್ತದ ಬೀಜ ಮತ್ತು ರಸಗೊಬ್ಬರವನ್ನು ಸರಬರಾಜು ಮಾಡುವಂತೆ ಅಧಿಕಾರಿಗಳಿಗೆ ಆಗ್ರಹಿಸಿದರು.

ಸಾಲ ಮರುಪಾವತಿ ಕಷ್ಟ ಪ್ರಸ್ತುತ ಭಾರೀ ಮಳೆಯಿಂದ ಯಾವುದೇ ಫಸಲಿನಲ್ಲೂ ರೈತ ನಿರೀಕ್ಷಿತ ಇಳುವರಿ ಪಡೆದಿಲ್ಲ. ಹಾಗಾಗಿ ಬ್ಯಾಂಕ್‌ಗಳಿಂದ ಪಡೆದ ಬೆಳೆ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಲು ಸಾಧ್ಯವಾಗುತ್ತಿಲ್ಲವಾದರೂ, ಬ್ಯಾಂಕ್‌ಗಳು ರೈತರಿಗೆ ನೋಟಿಸ್ ನೀಡಿ ಮಾನಸಿಕ ಕಿರುಕುಳ ನೀಡುತ್ತಿದ್ದು, ರೈತರು ಸಂಕಷ್ಟದಲ್ಲಿರುವುದರಿಂದ ಸಾಲ ಮರುಪಾವತಿಗೆ ಕಾಲಾವಕಾಶ ನೀಡಬೇಕೆಂದು ರೈತರು ಒಕ್ಕೊರಲಿನಿಂದ ಒತ್ತಾಯಿಸಿದರು. ಬಳಿಕ ತಹಸೀಲ್ದಾರ್ ಸಿ.ಜೆ.ಗೀತಾಗೆ ಮನವಿ ಸಲ್ಲಿಸಲಾಯಿತು.

ತಾಲೂಕು ರೈತ ಸಂಘದ ಅಧ್ಯಕ್ಷ ಸಿದ್ದೇಶ್ ಮಾತನಾಡಿದರು. ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರ ಸಂಘದ ಜಿಲ್ಲಾ ಅಧ್ಯಕ್ಷ ಪಿ.ಸೋಮಶೇಖರ್, ಕಾರ್ಯದರ್ಶಿ ರಾಜೇಂದ್ರ, ತಾಲೂಕು ಪ್ರಧಾನ ಕಾರ್ಯದರ್ಶಿ ಪ್ರಸಾದ್ ನಾಯಕ್, ಶಾಂತರಾಜು, ಕುಳ್ಳೇಗೌಡ, ಬಸವರಾಜು, ಶಿವಾಜಿ, ನಂಜುಂಡಸ್ವಾಮಿ, ರಮೇಶ್, ಲಿಂಗರಾಜು, ಕುಮಾರ್, ರಾಜಶೇಖರ್, ಶಂಭು ರಾಜೇಶ್, ರೂಪೇಶ್, ಪುಟ್ಟಸ್ವಾಮಿ, ಮಂಜು, ಹಾಡ್ಯ ರವಿ, ಶಿವಕುಮಾರ್, ಯೋಗೇಶ್ ಇತರರಿದ್ದರು.

ನಂಜನಗೂಡು: ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಾಡ್ಯ ರವಿ ಮಾತನಾಡಿ, ಸರ್ಕಾರ ಕಬ್ಬಿನ ಬೆಲೆ ನಿಗದಿಪಡಿಸದೆ ವಿಳಂಬ ನೀತಿ ಅನುಸರಿಸುತ್ತಿರುವುದು ರೈತರ ಶೋಷಣೆಗೆ ದಾರಿಯಾಗಿದೆ. ಬಣ್ಣಾರಿ ಹಾಗೂ ಮಹದೇಶ್ವರ ಸಕ್ಕರೆ ಕಾರ್ಖಾನೆಗಳು ಟನ್‌ಗೆ 350 ಕಡಿಮೆ ಹಣವನ್ನು ನೀಡಿ ಮೋಸ ಮಾಡಿದೆ. ಕಬ್ಬು ಕಟಾವು ಕೂಲಿ ನೀಡದೆ ವಂಚಿಸುತ್ತಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಬಸವಣ್ಣ, ರಾಜಣ್ಣ, ವಿಜಯೇಂದ್ರ, ಮಹದೇವಸ್ವಾಮಿ, ಶಿವಸ್ವಾಮಿ, ಹನುಮಯ್ಯ, ಗಣೇಶ್, ಭುಜಂಗಪ್ಪ, ಗುರುಸಿದ್ದಪ್ಪ, ಸಂಕೇತರಾಜು, ಚಿಕ್ಕಣ್ಣ, ಜಗದೀಶ್, ಶಿವರಾಜು ಸೇರಿದಂತೆ ರೈತರು ಇದ್ದರು.

ಸರಗೂರು: ನಾಲೆಗೆ ಕಾರು ಉರುಳಿ ನಾಪತ್ತೆಯಾಗಿದ್ದ ವಕೀಲರಿಬ್ಬರ ಶವ ಪತ್ತೆ

ಸರಗೂರು, ಜು.30– ಚಾಲಕನ ನಿಯಂತ್ರಣ ತಪ್ಪಿದ ಕಾರು ಕಬಿನಿ ಬಲದಂಡೆ ನಾಲೆಗೆ ಉರುಳಿ ಬಿದ್ದ ಪರಿಣಾಮ ನೀರಿನಲ್ಲಿ ಕೊಚ್ಚಿ ಹೋಗಿದ್ದ ಹುಣಸೂರಿನ ಇಬ್ಬರು ವಕೀಲರ ಶವ ಶನಿವಾರ ದೊರೆತಿದೆ.



ಸಿ.ದಿನೇಶ್



ಗಿರೀಶ್

ಹುಣಸೂರು ತಾಲೂಕಿನ ಹುಂಡವಾಡಿ ಗ್ರಾಮದ ಸಿ.ದಿನೇಶ್(50), ನಿಲುವಾಗಿಲು ಗ್ರಾಮದ ಗಿರೀಶ್(40) ಸಾವನ್ನಪ್ಪಿದವರು. ತಮ್ಮ ಸ್ನೇಹಿತ ವಕೀಲ ಅಶೋಕ್ ಅವರೊಂದಿಗೆ ಇವರಿಬ್ಬರು ಶುಕ್ರವಾರ ಸ್ಯಾಂಟ್ರೋ ಕಾರಿ(ಕೆಎ.09, ಪಿ.8823)ನಲ್ಲಿ ಕಬಿನಿ ಜಲಾಶಯಕ್ಕೆ ತೆರಳಿ, ಅಲ್ಲಿಂದ ವಾಪಸ್ಸಾಗುತ್ತಿದ್ದ ವೇಳೆ ಸಾಗರೆ ಸಮೀಪ ಸೇತುವೆ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಕಬಿನಿ ಬಲದಂಡೆ ನಾಲೆಗೆ ಉರುಳಿ ಬಿದ್ದಿತ್ತು.

ಈ ವೇಳೆ ಅಶೋಕ್ ಸಾರ್ವಜನಿಕರ ಸಹಕಾರದಿಂದ ಬದುಕುಳಿದರೆ, ದಿನೇಶ್, ಗಿರೀಶ್ ನೀರಿನಲ್ಲಿ ಕೊಚ್ಚಿ ಹೋಗಿದ್ದರು. ಇವರಿಬ್ಬರ ಪತ್ತೆಗೆ ನಿನ್ನೆ ಸರಗೂರು ಪೊಲೀಸರು, ನುರಿತ ಈಜುಗಾರರ ನೆರವಿನಿಂದ ಶೋಧ ಕಾರ್ಯ ಕೈಗೊಂಡಿದ್ದರು. ಆದರೆ ಶನಿವಾರ ಕಾರು ಉರುಳಿ ಬಿದ್ದಿದ್ದ ಸಾಗರೆ ಸೇತುವೆ ಬಳಿಯೇ ದಿನೇಶ್ ಶವ ಪತ್ತೆಯಾದರೆ, ತಾಲೂಕಿನ ಗೊಂತಗಾಲದಹುಂಡಿ ಗ್ರಾಮದ ಕೆರೆ ಬಳಿ ಗಿರೀಶ್ ಶವ ಪತ್ತೆಯಾಗಿದೆ. ಇವರಿಬ್ಬರ ಶವಗಳನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು ಆಸ್ಪತ್ರೆಗೆ ಭೇಟಿ ನೀಡಿ, ಘಟನೆ ಬಗ್ಗೆ ಮಾಹಿತಿ ಪಡೆದು, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ ಸರಗೂರು ಸಿಪಿಐ ಎನ್.ಆನಂದ್, ಎಸ್‌ಐ ಶ್ರವಣದಾಸ್‌ರೆಡ್ಡಿ, ಪೊಲೀಸ್ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಕಾಮನ್‌ವೆಲ್ತ್ ಗೇಮ್ಸ್ 2022

ವೇಯ್ಟ್ ಲಿಫ್ಟಿಂಗ್: ಭಾರತಕ್ಕೆ ಚಿನ್ನ

ಒಟ್ಟು ಮೂರು ಪದಕ ಗೆದ್ದ ವೇಯ್ಟ್ ಲಿಫ್ಟರ್‌ಗಳು

ಬರ್ಮಿಂಗ್‌ಹ್ಯಾಮ್, ಜು.30– ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಭಾರತ ಮೊದಲ ಚಿನ್ನದ ಪದಕ ಪಡೆದಿದ್ದು, ಉತ್ತಮ ಸಾಧನೆ ಮಾಡಿದೆ. ಶನಿವಾರ ನಡೆದ ವೇಯ್ಟ್ ಲಿಫ್ಟಿಂಗ್‌ನಲ್ಲಿ ಭಾರತ ಒಂದು ಚಿನ್ನ, ಒಂದು ಕಂಚು ಮತ್ತು ಒಂದು ಬೆಳ್ಳಿ ಪದಕವನ್ನು ತನ್ನದಾಗಿಸಿಕೊಂಡಿತು. ವೇಯ್ಟ್ ಲಿಫ್ಟರ್ ಮೀರಾ ಬಾಯಿ ಚಾನು ಚಿನ್ನದ ಪದಕ ಪಡೆದುಕೊಂಡಿ ದ್ದಾರೆ. ಅವರು 49 ಕೆ.ಜಿ.ವಿಭಾಗದಲ್ಲಿ ಈ ಸಾಧನೆ ಮಾಡಿದ್ದಾರೆ. ಮೀರಾಬಾಯಿ ಚಾನು ಅವರಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ.



ಮತ್ತೊಬ್ಬ ವೇಟ್ ಲಿಫ್ಟರ್ ಸಂಕೇತ್ ಸರ್ಗರ್ ಬೆಳ್ಳಿ ಪದಕ ಗೆದ್ದಿದ್ದಾರೆ. 55 ಕೆಜಿ ವಿಭಾಗದ ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ 248 ಕೆಜಿ ಭಾರ ಎತ್ತುವ ಮೂಲಕ 21 ವರ್ಷದ ಸಂಕೇತ್ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು. ಮೊದಲ ಸ್ಥಾನದಲ್ಲಿದ್ದ ಸಂಕೇತ್ ನಂತರ ಗಾಯ ಗೊಂಡಿದ್ದರಿಂದ ಎರಡನೇ ಸುತ್ತಿನಲ್ಲಿ ಹೆಚ್ಚು ಭಾರ ಎತ್ತಲು ಸಾಧ್ಯವಾಗದೆ ಇದ್ದಿದ್ದೂ ಚಿನ್ನದ ಪದಕ ಕೈತಪ್ಪಲು ಕಾರಣವಾಯಿತು.

ಕರ್ನಾಟಕದ ಗುರುರಾಜ್‌ಗೆ ಕಂಚು: ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕರ್ನಾಟಕ ಮೂಲದ ಕ್ರೀಡಾಪಟು ಕಂಚಿನ ಪದಕ ಗೆದ್ದಿದ್ದು, ಭಾರತಕ್ಕೆ 2ನೇ ಪದಕ ಲಭಿಸಿದೆ. ಕರ್ನಾಟಕದ ಗುರುರಾಜ್ ಪೂಜಾರಿ ವೇಟ್‌ಲಿಫ್ಟಿಂಗ್ 61 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

ಗುರುರಾಜ್ ಒಟ್ಟು 269 ಕೆಜಿ ತೂಕ ಎತ್ತುವ ಮೂಲಕ 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು. ಸ್ನ್ಯಾಚ್ ಸುತ್ತಿನ ಮುಕ್ತಾಯದ ನಂತರ ಅವರು ನಾಲ್ಕನೇ ಸ್ಥಾನದಲ್ಲಿದ್ದರು. ಇದಕ್ಕೂ ಮುನ್ನ ಮೊದಲ ಎರಡು ಪ್ರಯತ್ನದಲ್ಲಿ ಕ್ರಮವಾಗಿ 118, 115 ಕೆ.ಜಿ ಎತ್ತಿದ್ದರು. ಈ ಮೂಲಕ ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಗುರುರಾಜ್ 2ನೇ ಪದಕ ವಿಜೇತರಾದ ಸಾಧನೆ ಮಾಡಿದ್ದಾರೆ.

ಫೈನಲ್ ತಲುಪಿದ ಈಜುಪಟು ಶ್ರೀಹರಿ ನಟರಾಜ್: ಈಜುಪಟು, ಕನ್ನಡಿಗ ಶ್ರೀಹರಿ ನಟರಾಜ್ ಕಾಮನ್‌ವೆಲ್ತ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಫೈನಲ್‌ಗೆ ಪ್ರವೇಶ ಮಾಡಿದ್ದಾರೆ. 100 ಮೀಟರ್ ಬ್ಯಾಕ್ ಸ್ಟ್ರೋಕ್‌ನ ಹೀಟ್ಸ್‌ನ ಸೆಮಿಫೈನಲ್ಸ್‌ನಲ್ಲಿ ಶ್ರೀಹರಿ ನಟರಾಜ್(21) ಅವರು 4ನೇ ಸ್ಥಾನ ಪಡೆದಿದ್ದು, ಫೈನಲ್ ತಲುಪಿದ್ದಾರೆ.ಶ್ರೀಹರಿ ಅವರು 54.55 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದ್ದು, ಸೆಮಿಫೈನಲ್ ಹೀಟ್ 2 ರಲ್ಲಿ 4ನೇ ಸ್ಥಾನ ಮತ್ತು ಮೂರನೇ ಸ್ಥಾನ ಹಾಗೂ ಒಟ್ಟಾರೆ 8 ಕ್ವಾಲಿಫೈಯರ್‌ಗಳಲ್ಲಿ 7ನೇ ಸ್ಥಾನ ಗಳಿಸಿದರು.

ಇಂದು ಕೆ.ಆರ್.ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವ



ಕೆ.ಆರ್.ನಗರ, ಜು.30– ತಾಲೂಕು ಆಡಳಿತ, ತಾಲೂಕು ಒಕ್ಕಲಿಗರ ಸಂಘದ ಸಂಯುಕ್ತಾಶ್ರಯದಲ್ಲಿ ಜು.31ರಂದು ಬೆಳಗ್ಗೆ 10.30ಕ್ಕೆ ಹೆಚ್.ಡಿ.ದೇವೇಗೌಡರ ಸಮುದಾಯ ಭವನದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವ ಏರ್ಪಡಿಸಲಾಗಿದೆ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ. ಅಣ್ಣೇಗೌಡ ತಿಳಿಸಿದ್ದಾರೆ.

ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಸಂಬಂಧ ಭಿತ್ತಿಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದು, ಶಾಸಕ ಸಾ.ರಾ.ಮಹೇಶ್ ಅಧ್ಯಕ್ಷತೆ ವಹಿಸುವರು. ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡುವರು. ಕೆ.ಆರ್.ನಗರ ತಹಸೀಲ್ದಾರ್ ಎಸ್.ಸಂತೋಷ್ ನಾಡಪ್ರಭು ಕೆಂಪೇಗೌಡರ ಕುರಿತು ಉಪನ್ಯಾಸ ನೀಡಲಿದ್ದಾರೆ.

ಇದೇ ವೇಳೆ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಗಂಗಾಧರ, ಉದ್ಯಮಿ ವರದರಾಜು, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಡಾ.ಎಂ.ಬಿ.ಮಂಜೇಗೌಡ, ಕೆ.ವಿ.ಶ್ರೀಧರ, ಸಂಘದ ಅಧ್ಯಕ್ಷಸಿ. ಮರಿಸ್ವಾಮಿ ಅವರನ್ನು ಸನ್ಮಾನಿಸಲಾಗುವುದು. ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಉಪಸ್ಥಿತರಿರುವರು.

ಈ ವೇಳೆ ಉಪಾಧ್ಯಕ್ಷ ಹೆಚ್.ಪಿ. ಪರಶುರಾಮ್, ಮಿರ್ಲೆ ಶ್ರೀನಿವಾಸಗೌಡ, ಕಾರ್ಯದರ್ಶಿ ಬಿ.ಅಣ್ಣಾಜಿಗೌಡ, ಸಹ ಕಾರ್ಯದರ್ಶಿ ಎ.ಎನ್. ಕಾಂತರಾಜು, ಖಜಾಂಚಿ ಹೆಚ್.ಪಿ.ಶಿವಣ್ಣ, ಎಂ.ಕೆ. ಮಹದೇವ, ಹೆಚ್.ಸಿ.ಜವರೇಗೌಡ ಉಪಸ್ಥಿತರಿದ್ದರು.

ಸಾಮಾಜಿಕ ನ್ಯಾಯ ನೀಡಲು ಬಿಜೆಪಿ ಸರ್ಕಾರ ವಿಫಲ

ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಪಿ.ದೇವರಾಜ್ ಆರೋಪ

ತಿ.ನರಸೀಪುರ, ಜು.30– ನಾಗಮೋಹನ್ ದಾಸ್ ವರದಿ ಜಾರಿಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ವಾಲ್ಮೀಕಿ ಸಮಾಜದ ಪ್ರಸನ್ನಾನಂದ ಸ್ವಾಮೀಜಿ ಕಳೆದ 168 ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಬಿಜೆಪಿ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಪಿ.ದೇವರಾಜ್ ಆರೋಪಿಸಿದರು.



ಪಟ್ಟಣದಲ್ಲಿ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪ.ಜಾತಿ/ಪಂಗಡಕ್ಕೆ ಹೆಚ್ಚುವರಿ ಮೀಸಲಾತಿ ನೀಡುವಂತೆ ಒತ್ತಾಯಿಸಿ ಸ್ವಾಮೀಜಿಗಳು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದರೂ, ಬಿಜೆಪಿ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. ಪ.ಜಾತಿ/ವರ್ಗದವರ ಮೇಲೆ ಸರ್ಕಾರಕ್ಕೆ ಯಾವುದೇ ಕಾಳಜಿ ಇಲ್ಲ. ಸಾಮಾಜಿಕ ನ್ಯಾಯ ನೀಡಲು ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ಹಿಂದುಳಿದ ವರ್ಗಕ್ಕೆ ಆಗುತ್ತಿರುವ ಅನ್ಯಾಯ ಖಂಡಿಸುವ ಮೂಲಕ ರಾಜ್ಯಾದ್ಯಂತ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ವಿರುದ್ಧ ಕೆಲಸ ಮಾಡುವ ನಿರ್ಣಯ ಕೈಗೊಳ್ಳಬೇಕಾಗಿದೆ ಎಂದರು.

ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಪ.ಜಾತಿ, ವರ್ಗದ ಸಮುದಾಯದ ಬಗ್ಗೆ ಕಾಳಜಿ ತೋರದೆ ಸರ್ಕಾರ ಉದಾಸೀನ ತೋರುತ್ತಿದ್ದು ಇದಕ್ಕೆ ಪ್ರತಿಯಾಗಿ ಮುಂಬರುವ ಚುನಾವಣೆಯಲ್ಲಿ ಪಕ್ಷ ಪಶ್ಚಾತ್ತಾಪ ಪಡಲಿದೆ ಎಂದರು.

ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ, ಪ್ರಕಾಶ್, ಕೃಷ್ಣಮೂರ್ತಿ, ಸೋಮಣ್ಣ, ಮಂಜು ಮತ್ತಿತರರಿದ್ದರು.

ಫಲಾನುಭವಿಗಳು ಬಸವ ವಸತಿ ಯೋಜನೆ ಸದುಪಯೋಗಪಡಿಸಿಕೊಳ್ಳಿ

ಭೇರ್ಯ, ಜು.30– ಬಸವ ವಸತಿ ಯೋಜನೆ ಫಲಾನುಭವಿಗಳು ಆದೇಶಪತ್ರ ಪಡೆದ ನಂತರ ಸರ್ಕಾರ ನಿಗದಿಪಡಿಸಿದ ದಿನದೊಳಗೆ ಮನೆ ನಿರ್ಮಿಸಿಕೊಂಡು ಯೋಜನೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ವಸತಿ ಯೋಜನೆ ಫಲಾನುಭವಿಗಳಿಗೆ ಮನೆ ನಿರ್ಮಾಣದ ಆದೇಶ ಪತ್ರ ವಿತರಿಸಿ ಮಾತನಾಡಿದ ಅವರು, ಗ್ರಾಪಂ ಸದಸ್ಯರು ಮನೆ ನೀಡುವಾಗ ಸಂಬಂಧಿಕರು ಮತ್ತು ಉಳ್ಳವರಿಗೆ ಕೊಡಬಾರದು ಎಂದರು.

ವಸತಿ ಯೋಜನೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಗ್ರಾಪಂನವರು ಅರ್ಹರನ್ನು ಆಯ್ಕೆ ಮಾಡಬೇಕು. ಅನರ್ಹರು ಮತ್ತು ಸಂಬಂಧಿಕರನ್ನು ಆಯ್ಕೆ ಮಾಡಿದರೆ ಅಂತಹ ಪಟ್ಟಿಗೆ ಅನುಮೋದನೆ ನೀಡುವುದಿಲ್ಲ ಎಂದರು.

ಹರದನಹಳ್ಳಿಯನ್ನು ಅಮೃತ ಗ್ರಾಮ ಯೋಜನೆಗೆ ಸೇರ್ಪಡೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಪಂಚಾಯಿತಿ ವ್ಯಾಪ್ತಿಯ ವಸತಿ ರಹಿತರಿಗೆ ಮನೆ ನಿರ್ಮಾಣ ಮಾಡಿಕೊಳ್ಳಲು ಸರ್ಕಾರದಿಂದ ಸಹಾಯ ಧನ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ ಮಾತನಾಡಿದರು. ಇದಕ್ಕೂ ಮುನ್ನಾ ಲಕ್ಕಿಕುಪ್ಪೆ ಕ್ರಾಸ್ ಬಳಿ 75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಓವರ್‌ಹೆಡ್ ಟ್ಯಾಂಕ್ ಉದ್ಘಾಟಿಸಿದರು. ಗ್ರಾಪಂ ಅಧ್ಯಕ್ಷ ಗೋಪಾಲ್, ಉಪಾಧ್ಯಕ್ಷೆ ಶೈಲಜಾ, ಲೋಕೇಶ ನಾಯಕ, ಸದಸ್ಯರಾದ ಲತಾ, ಪ್ರದೀಪ್, ನವೀನ, ಎಲ್.ವಿ.ಗೋಪಾಲ್, ಮಂಜುಳಾ, ಎಸ್. ಆರ್.ಮಂಜುಳಾ, ಚನ್ನಂಗೆರೆ ಗ್ರಾಪಂ ಅಧ್ಯಕ್ಷೆ ಸವಿತಾ, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಜೆಡಿಎಸ್ ಮುಖಂಡರಾದ ರಮೇಶ್, ಕುಚೇಲ, ತಹಸೀಲ್ದಾರ್ ಮೋಹನ್, ತಾಪಂ ಇಓ ಎಚ್.ಕೆ.ಸತೀಶ್, ಇನ್ಸ್‌ಪೆಕ್ಟರ್ ಎಸ್.ಶ್ರೀಕಾಂತ್, ಪಂಚಾಯತ್ ರಾಜ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿನುತ್, ಸಹಾಯಕ ಇಂಜಿನಿಯರ್ ಪಿ.ಸ್ವಾಮಿ, ಕುಡಿಯುವ ನೀರು ಯೋಜನೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಜಾರಾಂ ಇತರರಿದ್ದರು.

55 ಲಕ್ಷ ವೆಚ್ಚದ ಓವರ್‌ಹೆಡ್ ಟ್ಯಾಂಕ್ ಉದ್ಘಾಟನೆ

ಹುಣಸೂರು, ಜು.30– ನಗರದ ನರಸಿಂಹಸ್ವಾಮಿ ತಿಟ್ಟು ಬಡಾವಣೆಯಲ್ಲಿ 55 ಲಕ್ಷ ರೂ. ವೆಚ್ಚದ ಓವರ್‌ಹೆಡ್ ಟ್ಯಾಂಕ್ ಅನ್ನು ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ನಗರೋತ್ಥಾನ 3ನೇ ಹಂತದ ಅನುದಾನದಡಿ ನಗರದಲ್ಲಿ ನಿರ್ಮಿಸಿರುವ 3 ಓವರ್‌ಹೆಡ್ ಟ್ಯಾಂಕ್‌ಗಳ ಉದ್ಘಾಟನೆಯಿಂದ ಕಳೆದ 10 ವರ್ಷಗಳ ನೀರಿನ ಸಮಸ್ಯೆ ನೀಗಿದಂತಾಗಿದೆ. ಮತ್ತೊಂದು 10 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.



ವೇಗವಾಗಿ ಬೆಳೆಯುತ್ತಿರುವ ಹುಣಸೂರು ನಗರವನ್ನು ಗಮನದಲ್ಲಿಟ್ಟುಕೊಂಡು ಶಬ್ಬೀರ್ ನಗರ, ಅಯ್ಯಪ್ಪಸ್ವಾಮಿ ದೇವಾಲಯದ ಬಳಿ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ.

ಕೆ.ಆರ್.ನಗರದ ಚಂದಗಾಲಿನಲ್ಲಿರುವ ಪಂಪ್‌ನ (170 ಎಲ್‌ಎಂಡಿ ಯಿಂದ 270 ಎಲ್‌ಎಂಡಿಗೆ) ಸಾಮರ್ಥ್ಯ ಹೆಚ್ಚಿಸಲಾಗಿದೆ. ಮುಂದಿನ 2035 ರವರೆಗೆ ಜನಸಂಖ್ಯೆಗನುಗುಣವಾಗಿ ಟ್ಯಾಂಕ್ ನಿರ್ಮಿಸಲಾಗಿದ್ದು, ಕರೀಗೌಡರ ಪಾರ್ಕ್‌ನಲ್ಲಿ 10 ಲಕ್ಷ ಸಾಮರ್ಥ್ಯದ ಮತ್ತೊಂದು ಟ್ಯಾಂಕ್ ನಿರ್ಮಾಣ ಹಂತದಲ್ಲಿದ್ದು, ಪೂರ್ಣಗೊಂಡಲ್ಲಿ ನಗರದ ಎಲ್ಲಾ ಬಡಾವಣೆಗಳಿಗೂ ಹಗಲು ವೇಳೆಯೇ ನೀರೊದಗಿಸಲು ಕ್ರಮವಹಿಸಲಾಗುವುದು ಎಂದರು.

1260 ಕುಟುಂಬಗಳಿಗೆ ಸೂರು: ನಗರ ವಾಸಿಗಳಿಗಾಗಿ ಸ್ಲಂ ಬೋರ್ಡ್‌ನಿಂದ 1260 ಮಂದಿ ಫಲಾನುಭವಿಗಳಿಗೆ ವಸತಿ ಕಲ್ಪಿಸಲು ಈಗಾಗಲೇ ಯೋಜನೆ ಸಿದ್ಧವಾಗಿದ್ದು, ಫಲಾನುಭವಿಗಳು ತಮ್ಮ ವಂತಿಕೆಯನ್ನು ತಕ್ಷಣ ಭರಿಸುವಂತೆ ಮನವಿ ಮಾಡಿದರು. ಮಧ್ಯವರ್ತಿಗಳ ಗಾಳಕ್ಕೆ ಸಿಲುಕಬೇಡಿ. ಮಧ್ಯವರ್ತಿಗಳಿಗೆ ಹಣ ನೀಡಿದ ಬಗ್ಗೆ ದೂರುಗಳು ಬಂದಲ್ಲಿ ಪಟ್ಟಿಯಿಂದಲೇ ಹೆಸರನ್ನು ಕೈಬಿಡಲಾಗುವುದೆಂದು ಎಚ್ಚರಿಸಿದರು.

ಮಾಹಿತಿನೇ ಇಲ್ಲ ಸಾರ್: ಸಭೆಯಲ್ಲಿದ್ದ ಕೆಲವರು ಫಲಾನುಭವಿಗಳ ಪಟ್ಟಿಯನ್ನೇ ಪ್ರದರ್ಶಿಸಿಲ್ಲ. ಯಾರು ಹಣ ಕಟ್ಟಬೇಕೆಂಬ ಮಾಹಿತಿಯೂ ಸಿಕ್ಕಿಲ್ಲವೆಂಬ ದೂರಿಗೆ ಸಾರ್ವಜನಿಕವಾಗಿಯೇ ಸಭೆಯಲ್ಲಿ ಪ್ರಕಟಿಸಲಾಗಿದೆ. ನಗರಸಭೆಯಲ್ಲಿ ಮಾಹಿತಿ ಪಡೆದು ವಂತಿಕೆಯ ಹಣ ಪಾವತಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್, ಸಂಸದ ಪ್ರತಾಪಸಿಂಹ, ನಗರಸಭಾಧ್ಯಕ್ಷೆ ಸಮೀನಾ ಪರ್ವಿನ್, ಉಪಾಧ್ಯಕ್ಷ ದೇವನಾಯ್ಕ, ಸದಸ್ಯೆ ಪ್ರಿಯಾಂಕ ಥಾಮಸ್ ಹಾಗೂ ಸದಸ್ಯರು, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಪೌರಾಯುಕ್ತ ರವಿಕುಮಾರ್, ರಾಜ್ಯ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿ ಕಾರ್ಯಪಾಲಕ ಅಭಿಯಂತರ ತಿಮ್ಮಪ್ಪ, ಎಇಇ ಮಹದೇವಪ್ರಭು, ಎಇ ಅಪ್ಸರ್, ನಗರಸಭೆ ಪರಿಸರ ಇಂಜಿನಿಯರ್ ರೂಪಾ ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಿಕ್ರಾಂತ್ ರೋಣ (3ಡಿ) (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.10ಕ್ಕೆ, ರಾಮರಾವ್ ಆನ್ ಡ್ಯೂಟಿ (ತೆ): ಸಂ.4ಕ್ಕೆ, ಸಂ.6.55ಕ್ಕೆ.
ಸ್ಕ್ರೀನ್ 2	ವಿಕ್ರಾಂತ್ ರೋಣ (ಕ): ಬೆ.10.20ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.1.15ಕ್ಕೆ, ರಾ.7.20ಕ್ಕೆ, ದಿ ಲೆಜೆಂಡ್ (ತ): ಸಂ.4ಕ್ಕೆ, ವಿಕ್ರಾಂತ್ ರೋಣ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 3	ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಬೆ.10.30ಕ್ಕೆ, ಸಂ.4.30ಕ್ಕೆ, ರಾ.7.10ಕ್ಕೆ, ರಾ.9.50ಕ್ಕೆ, ಗುಲುಗುಲು (ತ): ಮ.1.15ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿಕ್ರಾಂತ್ ರೋಣ (3ಡಿ) (ಕ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಬೆ.9.30ಕ್ಕೆ, ವಿಕ್ರಾಂತ್ ರೋಣ (ಕ): ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಿಕ್ರಾಂತ್ ರೋಣ (ಕ): ಬೆ.11ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಮ.2.05ಕ್ಕೆ, ಸಂ.4.50ಕ್ಕೆ, ರಾ.7.35ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (ಕ): ಬೆ.10.10ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಮ.1.15ಕ್ಕೆ, ರಾಮರಾವ್ ಆನ್ ಡ್ಯೂಟಿ (ತೆ): ಸಂ.4ಕ್ಕೆ, ರಾ.10.10ಕ್ಕೆ, ಗುಲುಗುಲು (ತ): ರಾ.7.05ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಚೇಜ್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
ಸ್ಕ್ರೀನ್ 2	ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 3	ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
ಸ್ಕ್ರೀನ್ 4	ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೊಕೆ ಬೈ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಪೆಟ್ರೋಮ್ಯಾಕ್ಸ್ (ಕ): ಮ.12.30ಕ್ಕೆ, ಗಾರ್ಗಿ (ಕ): ಸಂ.6ಕ್ಕೆ, 777 ಚಾರ್ಲಿ (ಕ): ಮ.12.25ಕ್ಕೆ, ಸಂ.6.25ಕ್ಕೆ, ಮಿನಿಯನ್ಸ್ (3ಡಿ)(ಇಂ): ರಾ.7.50ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಮ.2.45ಕ್ಕೆ, ರಾ.10ಕ್ಕೆ, ಪಾಮ್ಸ್ ಆಫ್ ಫ್ಯೂರಿ; ದಿ ಲೆಜೆಂಡ್ ಆಫ್ ಹಾಂಕ್ (ಇಂ): ಮ.12.25ಕ್ಕೆ, ಸಂ.5.30ಕ್ಕೆ, ಶಂಶೀರಾ (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ರಾಕೆಟ್ರಿ (ಹಿಂ): ಮ.12.40ಕ್ಕೆ, ಥ್ಯಾಂಕ್ ಯೂ (ತೆ): ಬೆ.10.10ಕ್ಕೆ, ಮ.1ಕ್ಕೆ, ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಮಲಯನ್‌ಕುಂಜು (ಮ): ಮ.3.25ಕ್ಕೆ, ಮಹಾವೀರ್ಯರ್ (ಮ): ರಾ.9ಕ್ಕೆ, ಮಹಾ (ತ): ಮ.3.45ಕ್ಕೆ, ರಾ.9.55ಕ್ಕೆ, ದೇಜಾವು (ತ): ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.


ಪದ್ಮ ಚಿತ್ರಮಂದಿರ	(ದೂ: 2521923)
ಗುಲು ಗುಲು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಲನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಸಂಗಂ	
ರಾಮರಾವ್ (ತೆ)	4 ಪ್ರದರ್ಶನಗಳು
ಲಿಡೋ	
ಏಕ್ ವಿಲಿಯನ್ ರಿಟರ್ನ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಬೈರಾಗಿ (ಕ)	4 ಪ್ರದರ್ಶನಗಳು

ಇಂದು ಹೆಚ್.ಡಿ.ಕೋಟೆಯಲ್ಲಿ ಆರ್.ಧ್ರುವನಾರಾಯಣ್ ಹುಟ್ಟುಹಬ್ಬ

ಹೆಚ್.ಡಿ.ಕೋಟೆ, ಜು.30– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬವನ್ನು ಜು.31ರಂದು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡರಾದ ಸತೀಶ್‌ಗೌಡ, ಸೋಮೇಶ್ ತಿಳಿಸಿದ್ದಾರೆ.



ಸತೀಶ್‌ಗೌಡ



ಸೋಮೇಶ್

ಕಾರ್ಯಕ್ರಮದಲ್ಲಿ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ 10 ಮಂದಿಗೆ ತಲಾ 5 ಸಾವಿರ ರೂ. ಧನಸಹಾಯ ನೀಡಲಾಗುವುದು. ಪ್ರದೀಪ್ ನಾಗನಹಳ್ಳಿ ಅವರು ಸಾರ್ವಜನಿಕರಿಗೆ 500 ಸಂವಿಧಾನ ಓದು ಪುಸ್ತಕ ನೀಡುವರು. ನಂಜನಗೂಡು ಕೆಪಿಸಿಸಿ ಉಸ್ತುವಾರಿ ಹಿರೇಹಳ್ಳಿ ಸೋಮೇಶ್ ನೇತೃತ್ವದಲ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಗುವುದು. ಅಲ್ಲದೇ ಆರೋಗ್ಯ, ರಕ್ತದಾನ ಶಿಬಿರ ಜೊತೆಗೆ ವಿವಿಧ ಸೇವಾ ಕಾರ್ಯಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ತಾಲೂಕು ಕಾಂಗ್ರೆಸ್ ಉಸ್ತುವಾರಿ ಕಾವೇರಪ್ಪ, ಸರಗೂರು ತಾಲೂಕು ಉಸ್ತುವಾರಿ ವರುಣಾ ಮಹೇಶ್, ಕೋಟೆ–ಸರಗೂರು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷಾ, ಮಾದಪ್ಪ, ಬೀಜ ನಿಗಮದ ಮಾಜಿ ಅಧ್ಯಕ್ಷ ಸುಂದರ ದಾಸ್, ಜಿಪಂ ಮಾಜಿ ಸದಸ್ಯ ಚಿಕ್ಕವೀರ ನಾಯಕ, ಮೈಮುಲ್ ನಿರ್ದೇಶಕ ಹಿರೇಗೌಡ, ರವಿ, ಕುರುಬ ಸಮಾಜ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಭೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಂ, ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ್, ರಾಜು, ಪ್ರದೀಪ, ಕೆಂಡಗಣ್ಣೆಗೌಡ, ಗಣೇಶ್ ಆಚಾರ್, ಗುರುಸ್ವಾಮಿ, ನಯಾಜ್, ಜೈರಾಮ, ಶಿವಮಲ್ಲಪ್ಪ, ರವಿ ಇನ್ನೂ ಹಲವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.



ಸೇವೆಯಿಂದ ನಿವೃತ್ತರಾದ ಕೆ.ಆರ್.ನಗರ ತಾಲೂಕಿನ ಹರದನಹಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಹದೇವ್ ಅವರನ್ನು ಶಾಸಕ ಸಾ.ರಾ.ಮಹೇಶ್ ಸನ್ಮಾನಿಸಿ ಬೀಳ್ಕೊಟ್ಟರು. ಈ ವೇಳೆ ಗ್ರಾಪಂ ಅಧ್ಯಕ್ಷೆ ನಂದಿನಿ, ಉಪಾಧ್ಯಕ್ಷೆ ಶೈಲಜಾ ಸೇರಿದಂತೆ ಇನ್ನಿತರರಿದ್ದರು.


ಜನಪ್ರಿಯ ಧ್ರುವತಾರೆ, ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ಮಾಜಿ ಸಂಸದರಾದ ಸನ್ಮಾನ್ಯ ಶ್ರೀ
ಆರ್. ಧ್ರುವನಾರಾಯಣ್ ಅವರಿಗೆ
61ನೇ ಹುಟ್ಟು ಹಬ್ಬದ ಶುಭಾಶಯಗಳು
ಡಿ. ಸುಂದರದಾಸ್
ಚಿಕ್ಕವೀರನಾಯಕ
ಕೆ. ಈರೇಗೌಡ
ಪಿ. ರವಿ
ಶಿವಪ್ಪಕೋಟೆ
ಸೋಮೇಶ್ ಹೀರೆಹಳ್ಳಿ
ಜಿ.ವಿ.ಸೀತಾರಾಮ್
ನರಸಿಂಹಮೂರ್ತಿ
ಎಂ.ಬಿ.ಆನಂದ್
ರಾಜುವಿಶ್ವಕರ್ಮ
ಪ್ರದೀಪ್ ಅರವಿಂದ್
ಕೆಂಡಗಣ್ಣೇಗೌಡ
ಗಣೇಶ್ ಆಚಾರ್
ಗುರುಸ್ವಾಮಿ
ನಯಾಜ್
ಜಯರಾಮ್
ಮಹೇಶ್ ಪ್ರಿಂಟ್ಸ್
8904224836
ಶಿವಮಲ್ಲಪ್ಪ
ರವಿ
ಹೆಚ್.ಎನ್. ಸತೀಶ್‌ಗೌಡ
ಹುಟ್ಟು ಹಬ್ಬದ ಪ್ರಯುಕ್ತ ಇಂದು ಹೆಚ್.ಡಿ.ಕೋಟೆ ಪಟ್ಟಣದ
ಅಂಬೇಡ್ಕರ್ ಭವನದಲ್ಲಿ ಅನೇಕ ಸೇವಕಾರ್ಯಗಳು